ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 2 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 47 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಚಾಮರಾಜನಗರ ಬಳಿ ವಾಯು ಸೇನೆಯ

ತರಬೇತಿ ವಿಮಾನ ಪತನ

● ಪ್ಯಾರಚೂಟ್ ನೆರವಿನಿಂದ ಇಬ್ಬರು ಪೈಲಟ್‌ಗಳು ಸುರಕ್ಷಿತ ಪಾರು ● ತಾಂತ್ರಿಕ ದೋಷದಿಂದ ಅನಾಹುತ ● ಕೋರ್ಟ್ ಆಫ್ ಇಂಕ್ವೈರಿಗೆ ಆದೇಶ





ಚಾಮರಾಜನಗರ, ಜೂ.1 (ಎಸ್‌ಎಸ್)– ಭಾರತೀಯ ವಾಯುಸೇನೆಯ ಕಿರಣ್ ತರಬೇತಿ ವಿಮಾನವೊಂದು ಚಾಮರಾಜನಗರ ತಾಲೂಕಿನ ಭೋಗಾಪುರ ಗ್ರಾಮದ ಬಳಿ ಗುರುವಾರ ಪತನಗೊಂಡಿದ್ದು, ವಿಮಾನದಲ್ಲಿದ್ದ ವಿಂಗ್ ಕಮಾಂಡರ್ ತೇಜ್‌ಪಾಲ್(50) ಹಾಗೂ ವಿಮಾನ ತರಬೇತಿ ಪಡೆಯುತ್ತಿದ್ದ ಭೂಮಿಕಾ (28) ಪ್ಯಾರಚೂಟ್ ಮೂಲಕ ಕೆಳಗೆ ಹಾರಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಭೋಗಾಪುರ, ಸಪ್ಪಯ್ಯನಪುರ ನಡುವಿನ ಗೋಮಾಳದಲ್ಲಿ ಈ ವಿಮಾನ ಪತನಗೊಂಡಿದ್ದು, ಕೆಲವೇ ಮೀಟರ್ ಅಂತರದಲ್ಲಿ ಕೃಷಿಯಲ್ಲಿ ತೊಡಗಿದ್ದ ರೈತರು ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ.

> “ವಿಮಾನ ಹಾರಾಟ ತರಬೇತಿ ನಡೆಸುತ್ತಿದ್ದ ಸಂದರ್ಭದಲ್ಲಿ ವಿಮಾನ ಅಪಘಾತಕ್ಕೀಡಾಗಿದೆ. ಅದರಲ್ಲಿದ್ದ ಇಬ್ಬರೂ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ. ವಿಮಾನ ಪತನಕ್ಕೆ ಕಾರಣವನ್ನು ಪತ್ತೆ ಹಚ್ಚಲು ತನಿಖೆಗೆ ಆದೇಶಿಸಲಾಗಿದೆ.
> –ಭಾರತೀಯ ವಾಯುಸೇನೆ (ಟ್ವೀಟ್ ಮೂಲಕ)

ಘಟನೆಯ ವಿವರ: ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಟೇಕಾಫ್ ಆಗಿದ್ದ ಭಾರತೀಯ ವಾಯುಸೇನೆಯ ವಿಮಾನ ತರಬೇತಿ ಹಾರಾಟ ನಡೆಸುತ್ತಿತ್ತು. ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಈ ಸಂದರ್ಭದಲ್ಲಿ ವಿಮಾನದಲ್ಲಿದ್ದ ತೇಜ್‌ಪಾಲ್ ಹಾಗೂ ಭೂಮಿಕಾ ಅವರು ▶ 8ನೇ ಪುಟಕ್ಕೆ

ಸಿಎಂ ಹೆಲಿಕಾಪ್ಟರ್ ಕೆರೆಯಲ್ಲಿ ಭೂ ಸ್ಪರ್ಶವಾಗಿತ್ತು!

2007ರ ಮೇ ತಿಂಗಳಿನಲ್ಲಿ ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಯಳಂದೂರು ತಾಲೂಕಿನ ಬಿಳಿಗಿರಿರಂಗನಾಥಸ್ವಾಮಿ ಬೆಟ್ಟಕ್ಕೆ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ್ದರು. ಈ ವೇಳೆ ಹವಾಮಾನ ವೈಪರೀತ್ಯದಿಂದಾಗಿ ಅವರಿದ್ದ ಹೆಲಿಕಾಪ್ಟರ್ ಯರಿಯೂರು ಕೆರೆಯಲ್ಲಿ ತುರ್ತು ಭೂ ಸ್ಪರ್ಶ ಮಾಡಿತ್ತು. ಈ ವೇಳೆ ಕೆರೆಯಲ್ಲಿ ನೀರು ಇಲ್ಲದ ಕಾರಣ ಭಾರೀ ಅನಾಹುತವೊಂದು ತಪ್ಪಿತ್ತು.

ಪೈಲಟ್‌ಗಳ ಸಮಯ ಪ್ರಜ್ಞೆ: ತಪ್ಪಿದ ಭಾರೀ ಅನಾಹುತ

ಚಾಮರಾಜನಗರ, ಜೂ.1–ವಾಯು ಸೇನೆಯ ಕಿರಣ್ ತರಬೇತಿ ವಿಮಾನದ ಪೈಲಟ್‌ಗಳ ಸಮಯಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದೆ. ಬೆಂಗಳೂರು ಹೆಚ್‌ಎಎಲ್ ವಾಯು ನೆಲೆಯಿಂದ ತರಬೇತಿ ಹಾರಾಟ ನಡೆಸುತ್ತಿದ್ದ ವೇಳೆ ತಾಂತ್ರಿಕ ದೋಷವುಂಟಾಗಿ ಚಾಮರಾಜನಗರ ಬಳಿ ಪತನಗೊಂಡಿತು.

ಭೋಗಾಪುರ ಮತ್ತು ಸಪ್ಪಯ್ಯನಪುರ ಗ್ರಾಮಗಳ ನಡುವೆ ಇರುವ ನಿರ್ಜನ ಪ್ರದೇಶದಲ್ಲಿ ದುರಂತ ಸಂಭವಿಸಿದೆ. ಇವೆರಡು ಗ್ರಾಮಕ್ಕೂ, ದುರಂತ ನಡೆದ ಸ್ಥಳಕ್ಕೂ ಒಂದು ಕಿ.ಮೀ. ಅಂತರ ಮಾತ್ರ ಒಂದು ವೇಳೆ ವಿಮಾನ ಇವೆರಡು ಗ್ರಾಮಗಳಲ್ಲಿ ಯಾವುದಾದರೂ ಒಂದು ಗ್ರಾಮದಲ್ಲಿ ಪತನಗೊಂಡಿದ್ದರೆ ಅಪಾರ ಪ್ರಮಾಣದ ಹಾನಿ ಮತ್ತು ಸಾವು–ನೋವು ಸಂಭವಿಸುವ ಸಾಧ್ಯತೆ ಇತ್ತು. ವಿಮಾನ ಹಾರಾಟದ ವೇಳೆ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕೂಡಲೇ ಅದನ್ನು ಸರಿಪಡಿಸಲು ಪೈಲಟ್‌ಗಳು ಪ್ರಯತ್ನಪಟ್ಟಿದ್ದಾರೆ. ಕೊನೆಗೆ ಹರಸಾಹಸಪಟ್ಟು ನಿರ್ಜನ ಪ್ರದೇಶದವರೆಗೂ ಚಲಾಯಿಸಿ, ಅದನ್ನು ನಿಯಂತ್ರಿಸಲಾಗದೆ ಪ್ಯಾರಚೂಟ್ ಸಹಾಯದಿಂದ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ. ಜೊತೆಗೆ ವಿಮಾನವೂ ನಿರ್ಜನ ಪ್ರದೇಶದಲ್ಲಿ ಪತನವಾಗುವಂತೆ ನೋಡಿಕೊಂಡಿದ್ದಾರೆ.

ಮಹತ್ವದ ಸಂಪುಟ ಸಭೆ

ಇಂದು ಗ್ಯಾರಂಟಿಗಳ ನಿರ್ಧಾರ ಗ್ಯಾರಂಟಿ



ಬೆಂಗಳೂರು, ಜೂ.1–ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಿಸಿರುವ ಐದು ಗ್ಯಾರಂಟಿಗಳ ಜಾರಿ ಸಂಬಂಧ ನಾಳೆ (ಜೂ.2) ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸಂಪುಟ ಸಭೆ ನಡೆಯಲಿದೆ. ಈ ಸಭೆಯ ನಂತರ ಮುಖ್ಯಮಂತ್ರಿಗಳು ಸುದ್ದಿಗೋಷ್ಠಿಯಲ್ಲಿ ಗ್ಯಾರಂಟಿ ಯೋಜನೆಗಳ ಜಾರಿ ಬಗ್ಗೆ ಅಧಿಕೃತವಾಗಿ ಪ್ರಕಟಿಸಲಿದ್ದಾರೆ.

ಯೋಜನೆಗಳ ಜಾರಿ ಸಂಬಂಧ ಕಳೆದ ಎರಡ್ಮೂರು ದಿನಗಳಿಂದ ಮುಖ್ಯಮಂತ್ರಿಗಳು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ರೂಪು–ರೇಷೆ ಸಿದ್ಧಪಡಿಸಿದ್ದಾರೆ. ಇಂದು ಅಧಿಕಾರಿಗಳೊಂದಿಗೆ ಅಂತಿಮ ಘಟ್ಟದ ಸಭೆ ನಡೆಸಿ ಯೋಜನೆಗಳನ್ನು ಯಾವ ರೀತಿ ಜಾರಿ ಮಾಡಬೇಕು ಎಂಬುದರ ಬಗ್ಗೆ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿ ನೀಡಲು ರಾಜ್ಯದಲ್ಲಿ ಅಕ್ಕಿಯ ಕೊರತೆ ಎದುರಾಗಬಹುದು ಎಂಬ ನಿಟ್ಟಿನಲ್ಲಿ ಹೆಚ್ಚುವರಿ ಅಕ್ಕಿ ಪೂರೈಕೆಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ. ಒಂದು ವೇಳೆ ಕೇಂದ್ರವು ಅದಕ್ಕೆ ಒಪ್ಪದಿದ್ದಲ್ಲಿ ಬೇರೆ ರಾಜ್ಯಗಳಿಂದ ಟೆಂಡರ್ ಕರೆದು ಅಕ್ಕಿ ಖರೀದಿಸಲು ತೀರ್ಮಾನಿಸಲಾಗಿದೆ ಎಂದು ಹೇಳಲಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ ಮನೆ ಯಜಮಾನಿಗೆ 2 ಸಾವಿರ ರೂ. ನೀಡುವ ಬಗ್ಗೆಯೂ ಚರ್ಚೆ ನಡೆದಿದ್ದು, ಮನೆಯ ಯಜಮಾನಿ ಯಾರು ಎಂಬುದನ್ನು ಆಯಾ ಕುಟುಂಬದವರೇ ನಿರ್ಧರಿಸಲಿ ಎಂಬ ತೀರ್ಮಾನಕ್ಕೆ ಬರಲಾಗಿದೆ. ಅಥವಾ ಪಡಿತರ ಚೀಟಿಯಲ್ಲಿ ಇರುವ ಮನೆಯ ಯಜಮಾನಿ ಹೆಸರಿಗೆ ಈ ಹಣವನ್ನು ನೀಡಬಹುದೇ ಎಂಬುದರ ಬಗ್ಗೆಯೂ ಚರ್ಚೆ ನಡೆದಿದೆ.

ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆ ಬಗ್ಗೆ ನಡೆದ ಚರ್ಚೆಯಲ್ಲಿ ಪಾಸ್‌ಗಳನ್ನು ನೀಡಬೇಕೇ? ಅಥವಾ ಆಧಾರ್ ಸೇರಿದಂತೆ ಯಾವುದಾದರೂ ಗುರುತಿನ ಚೀಟಿ ▶ 8ನೇ ಪುಟಕ್ಕೆ


ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ಸಹಕರಿಸಿ

● ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ತಮಿಳುನಾಡಿಗೆ ಮನವಿ ● ತಮಿಳ್ನಾಡು ಜನತೆ ನಮ್ಮ ಸಹೋದರರಿದ್ದಂತೆ



ಬೆಂಗಳೂರು, ಜೂ.1(ಕೆಎಂಶಿ)– ಸಮುದ್ರಕ್ಕೆ ಹರಿದು ಹೋಗುವ ನೀರು ತಡೆದು ಕಾವೇರಿ ಭಾಗದ ಜನರ ಬಳಕೆಗೆ ಅವಕಾಶ ಮಾಡಿಕೊಡಲು ಕೈಗೆತ್ತಿಕೊಂಡಿರುವ ಮೇಕೆದಾಟು ಯೋಜನೆಗೆ ತಮಿಳುನಾಡು ಸರ್ಕಾರ ಸಹಕಾರ ನೀಡಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ಯೋಜನೆ ಅನುಷ್ಠಾನದಿಂದ ತಮಿಳುನಾಡು ಆತಂಕಪಡುವ ಅಗತ್ಯವಿಲ್ಲ. ಜಲಾನಯನ ಭಾಗದ ರೈತರು ಮತ್ತು ಜನರಿಗೆ ಕುಡಿಯುವ ನೀರು ಬಳಕೆಗಷ್ಟೇ ಸೀಮಿತವಾಗುತ್ತದೆ ಎಂದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮಗೆ ತಮಿಳುನಾಡಿನ ಮೇಲೆ ದ್ವೇಷವಿಲ್ಲ. ಯುದ್ಧ ಮಾಡುವ ಉದ್ದೇಶವಿಲ್ಲ. ಅಲ್ಲಿರುವವರು ನಮ್ಮ ಅಣ್ಣ–ತಮ್ಮಂದಿರೇ. ನಮಗೆ ಯಾರ ಮೇಲೂ ದ್ವೇಷಾಸೂಯೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಮೇಕೆದಾಟು ನಮ್ಮ ಯೋಜನೆ. ಇದರಿಂದ ತಮಿಳುನಾಡಿಗೂ ಅನುಕೂಲವಾಗುತ್ತದೆ. ಸಮುದ್ರಕ್ಕೆ ಹೋಗುವ ನೀರು ತಡೆದು ಅದನ್ನು ಕಾವೇರಿ ಭಾಗದ ಜನರ ಬಳಕೆಗೆ ಅವಕಾಶ ಮಾಡಿಕೊಡಲಾಗುವುದು. ಕಾವೇರಿ ನದಿಗೆ ಅಣೆಕಟ್ಟುಗಳ ▶ 8ನೇ ಪುಟಕ್ಕೆ

ಎ.ಎಸ್.ಪೊನ್ನಣ್ಣ ಮುಖ್ಯಮಂತ್ರಿ ಕಾನೂನು ಸಲಹೆಗಾರ



ಬೆಂಗಳೂರು, ಜೂ.1–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾನೂನು ಸಲಹೆಗಾರರಾಗಿ ವಿರಾಜಪೇಟೆ ಶಾಸಕ ಅಜ್ಜಿಕುಟೀರ ಎಸ್. ಪೊನ್ನಣ್ಣ ನೇಮಕಗೊಂಡಿದ್ದಾರೆ. ಕೆಪಿಸಿಸಿ ಕಾನೂನು ವಿಭಾಗದ ಅಧ್ಯಕ್ಷರಾಗಿರುವ ಎ.ಎಸ್. ಪೊನ್ನಣ್ಣ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಬಿಜೆಪಿಯ ಹಾಲಿ ಶಾಸಕ ಕೆ.ಜಿ.ಬೋಪಯ್ಯ ಅವರನ್ನು ಸೋಲಿಸಿ, ಶಾಸಕರಾಗಿ ಆಯ್ಕೆಯಾಗಿದ್ದಾರೆ. ಈ ಬಾರಿ ಸಚಿವ ಸಂಪುಟದಲ್ಲಿ ಇವರಿಗೆ ಸಚಿವ ಸ್ಥಾನ ಸಿಗಲಿದೆ ಎಂದು ಹೇಳಲಾಗುತ್ತಿತ್ತು. ಆದರೆ ಕೊನೇ ಘಳಿಗೆಯಲ್ಲಿ ಅದು ಕೈತಪ್ಪಿದ್ದರಿಂದ ಕೊನೆಗೆ ಅವರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನ–ಮಾನ ಹೊಂದಿರುವ ಮುಖ್ಯಮಂತ್ರಿ ಕಾನೂನು ಸಲಹೆಗಾರರಾಗಿ ನೇಮಕಗೊಂಡಿದ್ದಾರೆ. ಹಿರಿಯ ರಾಜಕೀಯ ಮುತ್ಸದ್ಧಿ ದಿವಂಗತ ಎ.ಕೆ.ಸುಬ್ಬಯ್ಯ ಅವರ ಪುತ್ರರಾದ ಎ.ಎಸ್. ಪೊನ್ನಣ್ಣ ಅವರನ್ನು ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಿ ನೇಮಕ ಮಾಡಿದ್ದರು.


ಪ್ರಧಾನಿ ಮೋದಿಗೆ ರಾಜ್ಯದ ಕೇಂದ್ರ ಸಚಿವರ ವರದಿ!: ರಾಜ್ಯದಲ್ಲಿ ಬಿಜೆಪಿ ಸೋಲಿಗೆ

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಂಘ ಪರಿವಾರದ ನಾಯಕ ಕಾರಣವಂತೆ

ಬೆಂಗಳೂರು, ಜೂ.1(ಕೆಎಂಶಿ)– ಕರ್ನಾಟಕದಲ್ಲಿ ಬಿಜೆಪಿ ಸೋಲಿಗೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ಸಂಘ ಪರಿವಾರದ ನಾಯಕರ ವೈಫಲ್ಯವೇ ಮುಖ್ಯ ಕಾರಣವಂತೆ. ಈ ಸಂಬಂಧ ಪ್ರಧಾನಿ ಮೋದಿ ಅವರಿಗೆ ರಾಜ್ಯದ ಕೇಂದ್ರ ಸಚಿವರೊಬ್ಬರು ವಿವರವಾದ ವರದಿ ನೀಡಿದ್ದಾರೆನ್ನಲಾಗಿದೆ. ಪ್ರಧಾನಿ ಮೋದಿ ಅವರು ವಿಧಾನಸಭಾ ಚುನಾವಣಾ ಫಲಿತಾಂಶದ ನಂತರ ತಮ್ಮ ನಿವಾಸಕ್ಕೆ ರಾಜ್ಯದವರೇ ಆದ ಕೇಂದ್ರ ಸಚಿವರನ್ನು ಕರೆಸಿಕೊಂಡು ಕರ್ನಾಟಕದಲ್ಲಿ ಪಕ್ಷದ ಹೀನಾಯ ಸೋಲಿಗೆ ಕಾರಣವೇನು ಎಂಬ ಮಾಹಿತಿ ಪಡೆದುಕೊಂಡಿದ್ದಾರೆ ಎನ್ನಲಾಗಿದೆ.

ಸರ್ಕಾರದ ವಿರುದ್ಧ ಕಾಂಗ್ರೆಸ್ ಶೇ.40ರಷ್ಟು ಭ್ರಷ್ಟಾಚಾರದ ಆರೋಪ ಮಾಡುತ್ತಿರುವ ಸಂದರ್ಭದಲ್ಲಿ ನೀವೆಲ್ಲಾ ಏನು ಮಾಡುತ್ತಿದ್ದೀರಿ? ಎಂದು ಈ ಸಚಿವರನ್ನು, ಪ್ರಧಾನಿ ಪ್ರಶ್ನಿಸಿದ್ದಾರೆನ್ನಲಾಗಿದೆ. ಇಂತಹ ಗಂಭೀರವಾದ ವಿಚಾರಗಳು ಬಂದ ಸಂದರ್ಭದಲ್ಲಿ ನಾನೇ ಎಲ್ಲವನ್ನು ನಿಭಾಯಿಸುತ್ತೇನೆ. ಇದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ಬೊಮ್ಮಾಯಿ ಅವರು ನಮ್ಮನ್ನು ಸುಮ್ಮನಿರಿಸಿದ್ದರು ಎಂದು ಸಚಿವರು ಹೇಳಿದ್ದಾರೆ ಎನ್ನಲಾಗಿದೆ. ಚುನಾವಣೆ ಹೊಸ್ತಿಲಲ್ಲಿ ಮೀಸಲಾತಿ ವಿಚಾರಕ್ಕೆ ಅಂದಿನ ನಮ್ಮ ಸರ್ಕಾರ ಕೈ ಹಾಕಿದ್ದು ಸಹ ಪಕ್ಷದ ಸೋಲಿಗೆ ಒಂದು ಪ್ರಮುಖ ಕಾರಣವಾಗಿದೆ. ಪಕ್ಷ ಮತ್ತು ಸರ್ಕಾರದ ಹೊಣೆಗಾರಿಕೆ ವಹಿಸಿಕೊಂಡಿದ್ದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಈ ಹೊಣೆಗಾರಿಕೆ ಸಮರ್ಥ ರೀತಿ ನಿಭಾಯಿಸುವಲ್ಲಿ ಪೂರ್ಣವಾಗಿ ಸಫಲರಾಗಲಿಲ್ಲ. ಕಟೀಲ್ ಮಂಗಳೂರು ಬಿಟ್ಟು ಹೊರ ಬರುವುದೇ ಕಷ್ಟವಿತ್ತು.







ಇನ್ನೂ ಮುಖ್ಯಮಂತ್ರಿ, ಆಡಳಿತದಲ್ಲಿ ಬಿಗಿ ಹಿಡಿತ ತೆಗೆದುಕೊಳ್ಳಲು ಹಾಗೂ ಪ್ರತಿಪಕ್ಷವನ್ನು ಎದುರಿಸುವಲ್ಲಿ ವಿಫಲವಾದುದು ಪ್ರಮುಖ ಕಾರಣಗಳೊಂದಾಗಿದೆ. ಟಿಕೆಟ್ ಹಂಚಿಕೆ ಸಂದರ್ಭ ದಲ್ಲಿ ಪರಿವಾರದ ನಾಯಕರು ತೆಗೆದು ಕೊಂಡ ಕೆಲವು ಕಠಿಣ ನಿರ್ಧಾರಗಳೂ ಸೋಲಿಗೆ ಕಾರಣ. ಟಿಕೆಟ್ ಹಂಚಿಕೆ ವಿಷಯದಲ್ಲಿ ಹಳೇ ತಲೆಮಾರಿಗೆ ಪೂರ್ಣವಾಗಿ ಅವಕಾಶ ನೀಡುವುದಿಲ್ಲ ಎಂಬ ತೀರ್ಮಾನ ಮಾಡಿದ್ದರೆ, ಅದಕ್ಕೆ ಬದ್ಧವಾಗಿರಬೇಕಾಗಿತ್ತು. ಆದರೆ, ಜಗದೀಶ್ ಶೆಟ್ಟರ್ ಮತ್ತು ಈಶ್ವರಪ್ಪ ಅವರಂತಹ ಪಕ್ಷದ ನಿಷ್ಠಾವಂತರಿಗೆ ಟಿಕೆಟ್ ನಿರಾಕರಿಸಿ, ಚಿತ್ರದುರ್ಗ ತಿಪ್ಪಾ ರೆಡ್ಡಿ ಸೇರಿದಂತೆ ಕೆಲವು ಹಿರಿಯರು ಮತ್ತು ಆರೋಪಕ್ಕೆ ಗುರಿಯಾದವರಿಗೆ ಟಿಕೆಟ್ ನೀಡಿದ್ದು, ಕಾರ್ಯಕರ್ತರಷ್ಟೇ ಅಲ್ಲ, ಕೆಲ ಸಮುದಾಯದ ಸಿಟ್ಟಿಗೆ ಕಾರಣವಾಗಬೇಕಾಯಿತು. ಜಗದೀಶ್‌ಶೆಟ್ಟರ್, ಲಕ್ಷ್ಮಣ ಸವದಿ ಅವರು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡುವಂತೆ ಭಾರೀ ಒತ್ತಾಯ ಬಂದರೂ ಸಂಘ–ಪರಿವಾರದ ನಾಯಕರು ಅವರನ್ನು ಪರಿಗಣಿಸಲಿಲ್ಲ. ಅವರ ಕಠಿಣ ನಿರ್ಧಾರ ಮುಂಬೈ ಹಾಗೂ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಪಕ್ಷ ಬೆಲೆ ತೆರಬೇಕಾಯಿತು. ನಮ್ಮ ಈ ತಪ್ಪುಗಳನ್ನು ಕಾಂಗ್ರೆಸ್ ರಾಜಕೀಯವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಅದರ ಜತೆಗೆ ಚುನಾವಣೆಗೂ ಮುನ್ನ ನೀಡಿದ ಐದು ಗ್ಯಾರಂಟಿ ಜನಾಕರ್ಷಕವಾಗಿ ಆ ಪಕ್ಷದ ಗೆಲುವಿಗೆ ಪ್ರಮುಖ ಕಾರಣವೆಂದು ವಿವರಿಸಿದ್ದಾರೆ ಎನ್ನಲಾಗಿದೆ. ಈಗಲೂ ವ್ಯವಸ್ಥಿತವಾಗಿ ಸಂಘಟನೆಯನ್ನು ಬಲಪಡಿಸಿ, ಮಾಡಿದ ತಪ್ಪನ್ನು ಸರಿಪಡಿಸಿಕೊಂಡರೆ ಲೋಕಸಭಾ ಚುನಾವಣೆಯಲ್ಲಿ ನಾವು ಯಶಸ್ಸು ಗಳಿಸಬಹುದು ಎಂದು ಅವರು ಹೇಳಿದ್ದಾರೆನ್ನಲಾಗಿದೆ.

ಇ-ಕೆವೈಸಿ ಮಾಡಿಸದಿದ್ದರೆ ಪಿಎಂ ಕಿಸಾನ್ ಹಣ ತಡೆ

ನಿಗದಿತ ಅವಧಿಯೊಳಗೆ ದಾಖಲೆ ಮಾಡಿಸಲು ಕೃಷಿ ಅಧಿಕಾರಿಗಳ ಸಲಹೆ



ಇ-ಕೆವೈಸಿ ಮಾಡಿಸುವುದು ಹೇಗೆ?

ಫಲಾನುಭವಿಗಳು ಇ-ಕೆವೈಸಿ ಮಾಡಿಸಿಕೊಳ್ಳಬೇಕಾದಲ್ಲಿ ತಮ್ಮ ಆಧಾರ್ ಕಾರ್ಡ್‌ಗೆ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಿರಬೇಕು. ಆಗ ಮಾತ್ರ ಓಟಿಪಿ ಮೂಲಕ ತಾವೇ ಇ-ಕೆವೈಸಿಯನ್ನು ಮಾಡಿಕೊಳ್ಳಬಹುದಾಗಿದೆ. ಒಂದು ವೇಳೆ ತಮ್ಮ ಆಧಾರ್‌ಗೆ ಮೊಬೈಲ್ ಸಂಖ್ಯೆ ಲಿಂಕ್ ಆಗಿರದಿದ್ದಲ್ಲಿ, ಹತ್ತಿರದ ಗ್ರಾಮ ಓನ್ ಕೇಂದ್ರ ಅಥವಾ ಸೇವಾಸಿಂಧು ಕೇಂದ್ರಗಳಿಗೆ ಭೇಟಿ ನೀಡಿ, ಬಯೋ ಮೆಟ್ರಿಕ್ ಮೂಲಕ ತಮ್ಮ ಇ-ಕೆವೈಸಿಯನ್ನು ಪೂರ್ಣಗೊಳಿಸಬಹುದಾಗಿದೆ. ಜೊತೆಗೆ ಪ್ಲೇ ಸ್ಟೋರ್‌ನಿಂದ ಪಿಎಂ ಕಿಸಾನ್ ಮೊಬೈಲ್ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು, ಮುಖಚಹರೆಯ ಮೂಲಕವೂ ಇ-ಕೆವೈಸಿಯನ್ನು ಮಾಡಬಹುದು. ಹೆಚ್ಚಿನ ಮಾಹಿತಿಗಳಿಗಾಗಿ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ರೈತರು ಸಂಪರ್ಕಿಸಬೇಕು. ಈಗಾಗಲೇ ಹೋಬಳಿಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಇಲಾಖೆಯ ವಾಟ್ಸಪ್ ಗುಂಪುಗಳಿಂದಲೂ ಮಾಹಿತಿ ಪಡೆಯಬಹುದಾಗಿದೆ.


ಮೈಸೂರು,ಜೂ.1(ಎಂಟಿವೈ)- ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ನೀಡುವ ಆರ್ಥಿಕ ಸಹಾಯ ಧನ ಪಡೆಯಲು ಇ-ಕೆವೈಸಿ ಮಾಡಿಸುವಂತೆ ವರುಣ ರೈತ ಸಂಪರ್ಕ ಕೇಂದ್ರದ ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಎಸ್.ಜೆ. ಹೇಮಂತ್ ಸಲಹೆ ನೀಡಿದ್ದಾರೆ.

ಇ-ಕೆವೈಸಿ ಮಾಡಿಸಿರುವ ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಆರ್ಥಿಕ ನೆರವು ನೀಡುವ 13ನೇ ಕಂತಿನ ಹಣ ಬಿಡುಗಡೆಯು ಪ್ರಗತಿ ಹಂತದಲ್ಲಿದೆ. ಈ ಹಿನ್ನೆಲೆಯಲ್ಲಿ ಅರ್ಹ ರೈತರು ಶೀಘ್ರವಾಗಿ ಇ-ಕೆವೈಸಿ ಮಾಡಿಸಿದರೆ ಮಾತ್ರ ಪಿಎಂ ಕಿಸಾನ್ ಸಮ್ಮಾನ್ ನಿಧಿ ಮಾತ್ರವಲ್ಲದೆ ರಾಜ್ಯ ಸರ್ಕಾರದ ಆರ್ಥಿಕ ನೆರವು ಪಡೆದುಕೊಳ್ಳಬಹುದು. ಕೆವೈಸಿ ಮಾಡಿಸದವರಿಗೆ ಹಣ ಜಮೆಯಾಗುವುದಿಲ್ಲ ಎಂದು ತಿಳಿಸಿದ್ದಾರೆ.

ವರುಣ ಹೋಬಳಿ ವ್ಯಾಪ್ತಿಯಲ್ಲಿ ಇದುವರೆಗೆ 9,490 ರೈತರು ಪಿಎಂ ಕಿಸಾನ್ ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ. ಈ ಪೈಕಿ 7,144 ರೈತರು ಇ-ಕೆವೈಸಿ ಮಾಡಿಸಿದ್ದು, ಉಳಿದ 2,346 ರೈತರು ಕೆವೈಸಿ ಮಾಡಿಸಿಕೊಳ್ಳಬೇಕಾಗಿದೆ ಎಂದರು.

ಸಹಾಯಧನ ಜಮೆಯಾಗುತ್ತಿಲ್ಲ: ಕೆವೈಸಿ ಮಾಡಿಸಿದರೆ ಈ ಯೋಜನೆಯಡಿ ಕೇಂದ್ರ ಸರ್ಕಾರದಿಂದ ವಾರ್ಷಿಕ 6 ಸಾವಿರ ರೂ., ರಾಜ್ಯ ಸರ್ಕಾರದಿಂದ ಒಂದೇ ಬಾರಿಗೆ 4 ಸಾವಿರ ರೂ. ಖಾತೆಗಳಿಗೆ ಜಮೆಯಾಗುತ್ತದೆ. ಆದರೆ ಇ-ಕೆವೈಸಿ ಆಗದ ಕಾರಣ ಈ ಸಹಾಯಧನವು ಕೆಲ ರೈತರ ಖಾತೆಗೆ ಜಮೆಯಾಗುತ್ತಿಲ್ಲ. ಹೀಗಾಗಿ ರೈತರು ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಗ್ರಾಮ ಒನ್ ಕೇಂದ್ರ ಅಥವಾ ಸೇವಾಸಿಂಧು ಕೇಂದ್ರಗಳಿಗೆ ಭೇಟಿ ನೀಡಿ ಕೆವೈಸಿ ಮಾಡಿಸಿಕೊಳ್ಳುವಂತೆ ಮನವಿ ಮಾಡಿದ್ದಾರೆ.

ಅಗ್ನಿ ಆಕಸ್ಮಿಕ: ಡೆಕೋರೇಷನ್ ಸಾಮಗ್ರಿಗಳ ಗೋದಾಮು ಭಸ್ಮ





ಮೈಸೂರು,ಜೂ.1(ಎಂಟಿವೈ)- ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಗೋದಾಮಿಗೆ ಬೆಂಕಿ ಬಿದ್ದ ಪರಿಣಾಮ ಅಪಾರ ಪ್ರಮಾಣದ ಡೆಕೋರೇಷನ್‌ಗಾಗಿ ಬಳಸುವ ಸಾಮಗ್ರಿಗಳು ಭಸ್ಮವಾದ ಘಟನೆ ಚಾಮುಂಡಿಬೆಟ್ಟ ತಪ್ಪಲಿನಲ್ಲಿ ನಡೆದಿದೆ.

ಚಾಮುಂಡಿಬೆಟ್ಟದ ತಪ್ಪಲಿನ ರಸ್ತೆಯಲ್ಲಿರುವ ಸಂಗಮ್ ಡೆಕೋರೇಷನ್ ಅಂಡ್ ಫರ್ನಿಚರ್ಸ್ ಗೋದಾಮು ಬೆಂಕಿಗೆ ಆಹುತಿಯಾಗಿದ್ದು, ಶಾರ್ಟ್ ಸರ್ಕ್ಯೂಟ್‌ನಿಂದ ಅಗ್ನಿ ಅವಘಡ ಸಂಭವಿಸಿರಬಹುದು ಎಂದು ಶಂಕೆ ವ್ಯಕ್ತವಾಗಿದೆ. ಗುರುವಾರ ಬೆಳಗ್ಗೆ 6 ಗಂಟೆಯಲ್ಲಿ ಗೋದಾಮಿನಿಂದ ಹೊಗೆ ಕಾಣಿಸಿಕೊಂಡಿದೆ. ಬೆಂಕಿಯ ಕಿಡಿ ಥರ್ಮಾಕೋಲ್‌ಗೆ ವ್ಯಾಪಿಸಿದ ಬೆನ್ನಲ್ಲೇ ಬೆಂಕಿಯ ಕೆನ್ನಾಲಿಗೆಗೆ ಗೋದಾಮಿನಲ್ಲಿಡಲಾಗಿದ್ದ, ಡೆಕೋರೇಷನ್ ವಸ್ತುಗಳು ಸುಟ್ಟು ಭಸ್ಮವಾಗಿದೆ. ಕ್ಷಣ ಮಾತ್ರದಲ್ಲಿ ಇಡೀ ಗೋದಾಮಿನಲ್ಲಿ ದಟ್ಟ ಹೊಗೆ ಆವರಿಸಿದೆ.

ಗೋದಾಮಿಗೆ ಬೆಂಕಿ ಬಿದ್ದಿರುವುದನ್ನು ಗಮನಿಸಿದ ಸ್ಥಳೀಯರು ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಸರಸ್ವತಿಪುರಂ ಹಾಗೂ ಬನ್ನಿಮಂಟಪದ ಅಗ್ನಿಶಾಮಕ ಠಾಣೆಯಿಂದ 7 ಅಗ್ನಿಶಾಮಕ ವಾಹನಗಳಲ್ಲಿ ಆಗಮಿಸಿದ 30ಕ್ಕೂ ಹೆಚ್ಚು ಸಿಬ್ಬಂದಿ ಸತತ 1 ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಅಷ್ಟರಲ್ಲಾಗಲೇ ಗೋದಾಮಿನಲ್ಲಿ ಸಂಗ್ರಹಿಸಿದ್ದ ಅಲಂಕಾರಕ್ಕೆ ಬಳಸುವ ವಸ್ತುಗಳೆಲ್ಲಾ ಸುಟ್ಟು ಕರಕಲಾಗಿದ್ದವು. ಸಭೆ, ಸಮಾರಂಭ, ಪಾರ್ಟಿ ಹಾಲ್‌ನಲ್ಲಿ ಅಲಂಕಾರ ಮಾಡಲು ಬಳಸುವ ವಸ್ತುಗಳನ್ನು ಈ ಗೋದಾಮಿನಲ್ಲಿ ಸಂಗ್ರಹಿಸಲಾಗಿತ್ತು. ಈ ಗೋದಾಮು ಅಜೀಮ್ ಎಂಬುವರಿಗೆ ಸೇರಿದ್ದಾಗಿದ್ದು, ಲಕ್ಷಾಂತರ ರೂ. ಮೌಲ್ಯದ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಜೂ.4ರಂದು ಗೀತ್ ಗಾತಾ ಚಲ್ ವೈದ್ಯರ ಸಂಗೀತ ಸಂಜೆ



ಡಾ.ಎಂ.ಜಗನ್ನಾಥ್ ಶೆಣೈ & ಕುಸುಮ ಶೆಣೈ | ಡಾ.ಸಿ.ಉಮೇಶ್‌ಕಾಮತ್ | ಕೆ.ಬಿ. ಗಣಪತಿ | ಡಾ. ಪಿ.ಎ.ಕುಶಾಲಪ್ಪ

ಮೈಸೂರು, ಜೂ.1-ವೈದ್ಯರು ಮತ್ತು ಅವರ ಕುಟುಂಬ ಸದಸ್ಯರು ಕಳೆದ 2 ದಶಕಗಳಿಂದ ನಡೆಸಿಕೊಂಡು ಬರುತ್ತಿರುವ ಗೀತ್ ಗಾತಾ ಚಲ್-21 ಸಂಗೀತ ಸಂಜೆ ಕಾರ್ಯಕ್ರಮ ಇದೇ ಭಾನುವಾರ (ಜೂನ್ 4)ದಂದು ನಡೆಯಲಿದೆ.

20 ವರ್ಷಗಳಿಂದ ಮೈಸೂರಿನ ಸಾಂಸ್ಕೃತಿಕ ಪ್ರಿಯರ, ಸಂಗೀತಾಸಕ್ತರ ಮನ ತಣಿಸುತ್ತಿರುವ ಈ ಸಂಗೀತ ಸಂಜೆ ಕಾರ್ಯಕ್ರಮ ಎಂಎಂಸಿಆರ್‌ಐ &ಆರ್‌ಐ ಪ್ಲಾಟಿನಂ ಜ್ಯೂಬಿಲಿ ಹಾಲ್‌ನಲ್ಲಿ ಸಂಜೆ 5 ಗಂಟೆಯಿಂದ 8.30 ರವರೆಗೆ ನಡೆಯಲಿದೆ.

ಈ ಸಂಗೀತ ಸಂಜೆ ಕಾರ್ಯ ಕ್ರಮದ ಪಾಯೋಜಕರಾಗಿ ಹಲವಾರು ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಕೈಗಾರಿಕೋದ್ಯಮಿಗಳು ದಾನಿಗಳು ಆಗಿರುವ ಡಾ. ಎಂ.ಜಗನ್ನಾಥ್ ಶೆಣೈ, ಕುಸುಮ ಶೆಣೈ ಹಾಗೂ ಸಂಸ್ಥಾಪಕ ಪೋಷಕರಾದ ಡಾ.ಸಿ.ಕಾಮತ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿರುವರು.

'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರನ್ನು ಇದೇ ಸಂದರ್ಭದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಗುವುದು.

ಡಾ.ಪಿ.ಎ. ಕುಶಾಲಪ್ಪ ಸಂಘಟನಾ ಅಧ್ಯಕ್ಷರಾಗಿದ್ದಾರೆ. ಸೈಯ್ಯದ್ ಅಫ್ತಾಬ್ ಅಹಮದ್ ಮತ್ತು ಡಾ.ಜಿ.ಡಿ. ರವಿಕುಮಾರ್ ಕಾರ್ಯಕ್ರಮ ನಿರೂಪಣೆ ಮಾಡಲಿದ್ದಾರೆ. ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಜನಪ್ರಿಯ, ಮಧುರವಾದ ಹಿಂದಿ ಮತ್ತು ಕನ್ನಡ ಚಿತ್ರಗೀತೆಗಳನ್ನು ಈ ಗಾಯಕರು ಹಾಡಲಿದ್ದಾರೆ.

ಡಾ.ಎಂ.ಎಸ್.ನಟಶೇಖರ್, ಡಾ. ಎ.ಎಲ್.ಹೇಮಲತಾ, ಡಾ.ಪಿ.ಎ. ಕುಶಾಲಪ್ಪ, ಡಾ.ಯು. ಗಣೇಶ್ ರಾವ್, ಡಾ.ಯು. ಜಿ. ಶೆಣೈ, ಡಾ.ಶಿವಾನಿ ನಾಯಕ್, ಡಾ. ಸುಷ್ಮಾ ಕೃಷ್ಣಮೂರ್ತಿ, ಡಾ.ಸೀತಾಲಕ್ಷ್ಮಿ ಸೋಮನಾಥ್, ಡಾ. ಸೋಮನಾಥ್ ವಾಸುದೇವ್, ಡಾ. ಶ್ಯಾಮಪ್ರಸಾದ್, ಅಪೂರ್ವ ನಟಶೇಖರ್, ಡಾ.ಪ್ರೀತಿ ಪ್ರಭು, ರಂಜಿತಾ, ಪೃಥ್ವಿ ಶಂಕರ್, ಡಾ.ಜಿ.ಡಿ.ರವಿಕುಮಾರ್, ಸ್ಪರ್ಶ ಶೆಣೈ, ಆರ್.ಎಲ್.ವರ್ಷಾ, ಡಾ.ಸ್ನೇಹಶ್ರೀ, ಡಾ. ಸೂರಜ್ ಉಪಾಧ್ಯಾಯ, ಡಾ. ಅಮೃತಾ.

ಸಂಗೀತ ಸಂಜೆಯ ಮತ್ತೊಂದು ಆಕರ್ಷಣೆ ಎಂದರೆ ಡಾ.ಸ್ಪರ್ಶ ಶೆಣೈ ಮತ್ತು ತಂಡದಿಂದ ನೃತ್ಯ ಕಾರ್ಯಕ್ರಮವಿರಲಿದೆ.

ಸಮಯ ಪಾಲನೆಗೆ ಹೆಸರುವಾಸಿಯಾಗಿರುವ ಈ ಸಂಗೀತ ಸಂಜೆ ಕಾರ್ಯಕ್ರಮ 4.45ಕ್ಕೆ ಸರಿಯಾಗಿ ಆರಂಭವಾಗಲಿದೆ. ಪ್ರೇಕ್ಷಕರು 4.30 ರೊಳಗೆ ಬಂದು ಆಸೀನರಾಗಬೇಕೆಂದು ಕೋರಲಾಗಿದೆ. ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತವಾಗಿದೆ.



ಡಾ.ನಟಶೇಖರ್ | ಡಾ.ಹೇಮಲತಾ | ಡಾ.ಗಣೇಶ್‌ರಾವ್ | ಡಾ.ಯು.ಜಿ.ಶೆಣೈ | ಡಾ. ಸ್ನೇಹಶ್ರೀ | ಡಾ.ರವಿಕುಮಾರ್




ಡಾ.ಸೀತಾಲಕ್ಷ್ಮಿ | ಡಾ.ಸೋಮನಾಥ್ | ಅಪೂರ್ವ | ಡಾ.ಪ್ರೀತಿ | ಸ್ಪರ್ಶ ಶೆಣೈ | ಡಾ.ಸುಷ್ಮಾ | ವರ್ಷ



ಡಾ.ಶ್ಯಾಮ್ | ಡಾ.ಶಿವಾನಿ | ರಂಜಿತಾ | ಪೃಥ್ವಿ | ಡಾ.ಸೂರಜ್ | ಡಾ.ಅಮೃತಾ | ಅಫ್ತಾಬ್

ಜೂ.4, ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ



ಮೈಸೂರು, ಜೂ. 1- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಅರಮನೆ ಮಂಡಳಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಜೂ.4 ರಂದು ಬೆಳಗ್ಗೆ 11:30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಘನ ಉಪಸ್ಥಿತಿಯಲ್ಲಿ, ಸಮಾಜ ಕಲ್ಯಾಣ ಸಚಿವ ಎಚ್.ಸಿ ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ನಾಲ್ವಡಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್‌ಕುಮಾರ್, ರವಿಶಂಕರ್, ಜಿ.ಡಿ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ತಿನ ಶಾಸಕರಾದ ಮರಿತಿಬ್ಬೇಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ ಹಾಗೂ ಸಿ.ಎನ್.ಮಂಜೇಗೌಡ ಭಾಗವಹಿಸುವರು. ಸಮಾರಂಭದ ಅತಿಥಿಗಳಾಗಿ ನಗರಪಾಲಿಕೆ ಉಪಮೇಯರ್ ಡಾ.ಜಿ. ರೂಪ ಹಾಗೂ ಮುಖ್ಯ ಭಾಷಣಕಾರರಾಗಿ ಬೆಂಗಳೂರಿನ ಅಕ್ಕ ಐಎಎಸ್ ಅಕಾಡೆಮಿಯ ನಿರ್ದೇಶಕ ಡಾ. ಶಿವಕುಮಾರ್ ಭಾಗವಹಿಸುವರು. ಕಾರ್ಯಕ್ರಮದ ಅಂಗವಾಗಿ ಜಯಂತಿಯ ದಿನದಂದು ಬೆಳಗ್ಗೆ 9:30 ಗಂಟೆಗೆ ಅರಮನೆ ಆವರಣದಲ್ಲಿನ ವೆಂಕಟರಮಣಸ್ವಾಮಿ ದೇವಸ್ಥಾನದ ಮುಂಭಾಗದಿಂದ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಹೊರಟು ಕಲಾಮಂದಿರ ತಲುಪುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ನೇರ ಫೋನ್-ಇನ್ ಕಾರ್ಯಕ್ರಮ

ಮೈಸೂರು, ಜೂ. 1- ಮೈಸೂರಿನ ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂನಲ್ಲಿ ನಾಳೆ (ಜೂ. 2) ಬೆಳಗ್ಗೆ 11.30 ರಿಂದ 12.30 ರವರೆಗೆ ಹೃದಯ ಸಂಬಂಧಿತ ತೊಂದರೆಗಳು ಮತ್ತು ಮುಂಜಾಗ್ರತಾ ಕ್ರಮಗಳು ಕುರಿತು ಜಯದೇವ ಹೃದ್ರೋಗ ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸಾ ತಜ್ಞ ಡಾ. ಹರ್ಷ ಬಸಪ್ಪ ಅವರೊಂದಿಗೆ ನೇರ ಫೋನ್-ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಕರೆ ಮಾಡಿ ಮಾತನಾಡಬಹುದು, ಹೃದಯ ಸಂಬಂಧಿ ಖಾಯಿಲೆಗಳು, ಹೃದಯಾಘಾತಕ್ಕೆ ಕಾರಣಗಳು, ಹೃದಯಾಘಾತದ ಲಕ್ಷಣಗಳು, ಹೃದಯಾಘಾತಕ್ಕೆ ಪ್ರಥಮ ಚಿಕಿತ್ಸೆಗಳು, ಹೃದಯ ಸಂರಕ್ಷಣೆಗೆ ಮುಂಜಾಗ್ರತಾ ಕ್ರಮಗಳ ಕುರಿತು ಯಾವುದೇ ಪ್ರಶ್ನೆಗಳು ಅಥವಾ ಸಂದೇಹಗಳು ಇದ್ದಲ್ಲಿ ನೇರವಾಗಿ ತಜ್ಞ ವೈದ್ಯರ ಜೊತೆ ಮಾತನಾಡಬಹುದು. ದೂರವಾಣಿ ಸಂಖ್ಯೆ: 82967 25912, 0821-2546563.

ಜಯದೇವ ಆಸ್ಪತ್ರೆಗೆ ದೆಹಲಿಯ ಏಮ್ಸ್ ತಂಡ ಭೇಟಿ; ಮೆಚ್ಚುಗೆ



ಮೈಸೂರು, ಜೂ. 1- ಬೆಂಗಳೂರು ಜಯದೇವ ಹೃದ್ರೋಗ ಸಂಸ್ಥೆಗೆ ದೆಹಲಿಯ ಆಲ್ ಇಂಡಿಯಾ ಮೆಡಿಕಲ್ ಸೈನ್ಸ್‌ನ ಡಾ. ರಾಜೇಶ್ ಕಡ್ತಾವತ್ ನೇತೃತ್ವದ ತಂಡ ಭೇಟಿ ನೀಡಿ, ಇಲ್ಲಿನ ಕಾರ್ಯ ವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿತು ಎಂದು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ. ಸಿ.ಎನ್.ಮಂಜುನಾಥ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ರಾಜೇಶ್ ಕಡ್ತಾವತ್‌ರವರ ತಂಡ, ಜಯದೇವ ಆಸ್ಪತ್ರೆಯ ಎಲ್ಲಾ ವಿಭಾಗ ಗಳ ಪರಿಶೀಲಿಸಿ, ಇಲ್ಲಿರುವಂತಹ ಜನಸ್ನೇಹಿ, ಆಡಳಿತ ವ್ಯವಸ್ಥೆ, ಸ್ವಚ್ಛತೆ, ಕೈಗೆಟಕುವ ದರದ ಗುಣಮಟ್ಟದ ಚಿಕಿತ್ಸೆ, ಆಸ್ಪತ್ರೆಯ ನಿರ್ವಹಣೆಯ ವಿಧಾನಗಳನ್ನು ದೆಹಲಿಯ AIMSನಲ್ಲಿ ಅಳವಡಿಸಿಕೊಳ್ಳಲು ಅಧ್ಯಯನಕ್ಕಾಗಿ ಇಲ್ಲಿಗೆ ಆಗಮಿಸಿದ್ದರು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಚಿಕ್ಕತಿಮ್ಮಯ್ಯ, ಆಪ್ತಸಹಾಯಕರಾದ ವೀಣಾ, ಸಾಧಿಕ್ ಪಾಷಾ, ಇಂಜಿನಿಯರ್‌ಗಳು ಹಾಜರಿದ್ದರು.

ನಾಳೆ ಜಿಎಚ್‌ಎನ್‌ಗೆ ನುಡಿ ನಮನ



ಮೈಸೂರು,ಜೂ.1- ಮೈಸೂರಿನ ರಾಮಕೃಷ್ಣನಗರದ ಜನ ತಂತ್ರ ಜಾಗೃತಿ ವೇದಿಕೆ ವತಿಯಿಂದ ಜೂ.3 ರಂದು ಬೆಳಗ್ಗೆ 10 ಗಂಟೆಗೆ ರಾಮಕೃಷ್ಣನಗರದಲ್ಲಿರುವ ರಮಾ ಗೋವಿಂದ ರಂಗಮಂದಿರದಲ್ಲಿ ಜಿ.ಎಚ್.ನಾಯಕ್ ಅವರಿಗೆ ನುಡಿ ನಮನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪ್ರೊ.ರಾಗೌ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೂ.4, ಶನಿಮಹಾಶಾಂತಿ

ಮೈಸೂರು,ಜೂ.1-ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜೂ.4ರಂದು ಭಾನುವಾರ ಹುಣ್ಣಿಮೆ ಪ್ರಯುಕ್ತ ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ವಿಶೇಷ ಸಂಕಲ್ಪದೊಂದಿಗೆ ಶನಿ ಮಹಾಶಾಂತಿ ಮತ್ತು ಕುಜ ಶಾಂತಿ, ಬಾದಾನಿವಾರಕ ಮಹಾ ಸುದರ್ಶನ ಹೋಮ, ಮೃತ್ಯುಂಜಯ ಹೋಮ ಶ್ರೀ ಸತ್ಯ ನಾರಾಯಣ ಪೂಜೆ ಏರ್ಪಡಿಸಲಾಗಿದೆ. ಬೆಳಗ್ಗೆ 9.30ಗೆ ಪ್ರಾರಂಭವಾಗಿ 12.30ಕ್ಕೆ ಮಹಾ ಪೂರ್ಣಾಹುತಿ. ವಿವರಗಳಿಗೆ ಮೈಕುಮಾರ್, ಜಾತಕ ವಿಮರ್ಶಕರ ಮೊ. 9845183399, 9342183392 ಮೂಲಕ ಸಂಪರ್ಕಿಸಬಹುದು.



ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಗುರುವಾರ ಬೆಂಗಳೂರಿನ ಡಾಲರ್ಸ್ ಕಾಲೋನಿ ನಿವಾಸದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ, ಅಭಿನಂದಿಸಿದರು.

ಸ್ತ್ರೀ ಬಂಜೆತನ: ಶಿಬಿರ

ಮೈಸೂರು, ಜೂ. 1- ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜೂ.3ರಿಂದ 17ರವರೆಗೆ ಸ್ತ್ರೀ ಬಂಜೆತನದ ವೈದ್ಯಕೀಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 8.30ರಿಂದ ಸಂಜೆ 4.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9686790610, 9886176690 ಸಂಪರ್ಕಿಸಬಹುದು.

ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಉಚಿತ ಆಂಜಿಯೋಪ್ಲಾಸ್ಟಿ ಕಾರ್ಯಾಗಾರ

ಬಡವರು, ಹಿರಿಯ ನಾಗರಿಕರು ನೋಂದಾಯಿಸಿಕೊಳ್ಳಲು ಸಲಹೆ



ಡಾ.ಸದಾನಂದ

ಮೈಸೂರು, ಜೂ. 1-ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಜೂನ್ 15 ಮತ್ತು 16 ರಂದು ಬಡರೋಗಿಗಳಿಗೆ ಉಚಿತ ಆಂಜಿಯೋಪ್ಲಾಸ್ಟಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೆಡ್ಟ್ರಾನಿಕ್ಸ್ ಅಮೆರಿಕಾ ಹಾಗೂ ಡಾ.ಗೋವಿಂದರಾಜು ಸುಬ್ರಹ್ಮಣಿ ಹಾರ್ಟ್ ಫೌಂಡೇಷನ್ ವಿಸ್ಕಿನ್‌ಸನ್ ಅಮೆರಿಕಾದವರ ಸಹಯೋಗದೊಂದಿಗೆ ಮೈಸೂರು ಜಯದೇವ ಆಸ್ಪತ್ರೆಯಲ್ಲಿ ಜೂನ್ 15 ಮತ್ತು 16ರಂದು ಉಚಿತ ಆಂಜಿಯೋಪ್ಲಾಸ್ಟಿ ಕಾರ್ಯಾಗಾರವನ್ನು, ಬಡರೋಗಿಗಳು ಹಾಗೂ ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರಿಗಾಗಿ ಆಯೋಜಿಸಲಾಗಿದೆ. ಪ್ರತಿ ರೋಗಿಗೂ ಉನ್ನತ ಮಟ್ಟದ ಮೆಡಿಕೇಟೆಡ್ ಸ್ಟಂಟ್‌ಗಳನ್ನು ಉಚಿತವಾಗಿ ಅಳವಡಿಸಲಾಗುವುದು. ಈ ಸೌಲಭ್ಯವನ್ನು ಈಗಾಗಲೇ ಆಂಜಿಯೋಗ್ರಾಂ ತಪಾಸಣೆಗೆ ಒಳಪಟ್ಟಿರುವ ರೋಗಿಗಳು ಪಡೆಯಬಹುದು. ಅವಶ್ಯಕತೆ ಇರುವ ರೋಗಿಗಳು ದಾಖಲಾತಿ ವೇಳೆ ಬಿಪಿಎಲ್ ಕಾರ್ಡ್ ಅಥವಾ ಕಡಿಮೆ ಆದಾಯ ಪ್ರಮಾಣಪತ್ರವನ್ನು ಹೊಂದಿರಬೇಕು. ಜೂನ್ 8ರೊಳಗೆ ಬೆಳಗ್ಗೆ 10 ಗಂಟೆಯಿಂದ 4 ಗಂಟೆಯವರೆಗೆ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ವಿವರಗಳಿಗೆ ಮೈಸೂರು ಜಯದೇವ ಆಸ್ಪತ್ರೆ, 8660105492 ಅಥವಾ 0821-2336255, 2336144 ಅನ್ನು ಸಂಪರ್ಕಿಸುವುದು.

ನಾಳೆ ವಿಶ್ವ ಬೈಸಿಕಲ್ ದಿನಾಚರಣೆ

ಮೈಸೂರು, ಜೂ.1- ಜೂ.3ರಂದು ವಿಶ್ವ ಬೈಸಿಕಲ್ ದಿನಾಚರಣೆ ಪ್ರಯುಕ್ತ ಸೈಕಲ್ ಜಾಥಾ ಆಯೋಜಿಸಲಾಗಿದ್ದು, ಬೆಳಗ್ಗೆ 7:30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಿಂದ ಹೊರಟು ಎಸ್‌ಪಿ ಆಫೀಸ್ ವೃತ್ತದಿಂದ ಹಾಗೂ ಗೋಪಾಲಗೌಡ ಆಸ್ಪತ್ರೆಯ ವೃತ್ತದಿಂದ ಮರಳಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿ ಸೈಕಲ್ ರ‍್ಯಾಲಿಯನ್ನು ಮುಕ್ತಾಯಗೊಳಿಸಲಾಗುವುದು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರಿಗೆ ಧನ್ಯತಾ ಸಮಾಗಮ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಜಯಪುರ ಹೋಬಳಿ ಯುವ ಜೆಡಿಎಸ್ ಅಧ್ಯಕ್ಷ ಎಂ.ರಂಗಸ್ವಾಮಿ, ಮುಖಂಡರಾದ ಜಯಪುರ ಮಹದೇವೇಗೌಡ, ಎಸ್‌ಆರ್ ವೈನ್ಸ್ ಮಾಲೀಕ ಶ್ರೀಕಾಂತ್, ಯುವ ಮುಖಂಡರಾದ ಮಹೇಶ್, ಕೃಷ್ಣ ಉಪಸ್ಥಿತರಿದ್ದರು.



ಸಿಎಸ್‌ಐ ಹೋಲ್ಡ್ ವರ್ತ್ ಮೆಮೋರಿಯಲ್ ಹಾಸ್ಪಿಟಲ್ (ಮಿಷನ್ ಹಾಸ್ಪಿಟಲ್) ವತಿಯಿಂದ ಚಾಮರಾಜ ಕ್ಷೇತ್ರದ ನೂತನ ಶಾಸಕ ಹರೀಶ್‌ಗೌಡ ಅವರಿಗೆ ಹೂಗುಚ್ಛ ನೀಡಿ, ಅಭಿನಂದಿಸಲಾಯಿತು. ಈ ವೇಳೆ ಹಾಸ್ಪಿಟಲ್ ಸಿಬ್ಬಂದಿ ಆಡಿ, ಹರಿಕೃಷ್ಣ, ಎಚ್.ಆರ್.ಮ್ಯಾನೇಜರ್ ವಿನಿತ್, ಪಿಆರ್‌ಓ ಡೇವಿಡ್ ಮನೋಹರ್, ಕರ್ನಾಟಕ ಪ್ರದೇಶ ಯೂತ್ ಕಾಂಗ್ರೆಸ್ ಸ್ಟೇಟ್ ಸೆಕ್ರೆಟರಿ ದೀಪಕ್ ಶಿವಣ್ಣ, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಡೊನಾಲ್ಡ್ ಎಫ್ ನಿರ್ಮಾಣಿಕ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.6.2023 ಶುಕ್ರವಾರ, ಮಳೆ ನಕ್ಷತ್ರ: ರೋಹಿಣಿ, 25.05.2023ರಿಂದ 07.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ,
ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ನಮ್ಮಾಳ್ವಾರ್ ತಿರುನಕ್ಷತ್ರ ಉತ್ಸವ, ಸ್ಥಳ: ಸಭಾ ಆವರಣ, ತಿಲಕ್‌ನಗರ, ಬೆಳಗ್ಗೆ
- **ಅಭಿವೃದ್ಧಿ :** ಸಿಲ್ಕ್ ಇಂಡಿಯಾ-2023, ಸಿಲ್ಕ್, ಕಾಟನ್ ಮತ್ತು ಇತರ ಸೀರೆಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30ರಿಂದ ರಾತ್ರಿ 8.30 ರವರೆಗೆ
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಕ್ಕರೆ ಕಾಯಿಲೆಯಿಂದಾದ ಕಿಡ್ನಿ ತೊಂದರೆಗೆ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10.30ಕ್ಕೆ.
- **ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂ :** ಜಯದೇವ ಹೃದ್ರೋಗ ಆಸ್ಪತ್ರೆ ಹೃದಯ ಶಸ್ತ್ರ ಚಿಕಿತ್ಸಾ ತಜ್ಞರೊಂದಿಗೆ ನೇರ ಸಂದರ್ಶನ ಫೋನ್-ಇನ್ ಕಾರ್ಯಕ್ರಮ, ವಿಷಯ : ಹೃದಯ ಸಂಬಂಧಿತ ತೊಂದರೆಗಳು ಮತ್ತು ಮುಂಜಾಗ್ರತಾ ಕ್ರಮಗಳು, ಬೆಳಗ್ಗೆ 11.30 ರಿಂದ
- **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಫಲಿತಾಂಶ ಆಧಾರಿತ ಶಿಕ್ಷಣ ಕುರಿತು ತರಬೇತಿ ಕಾರ್ಯಕ್ರಮ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮುಗೇಶಪ್ಪ, ಪ್ರಾಸ್ತಾವಿಕ ನುಡಿ: ಐಪಿಎಸ್‌ಆರ್ ಸೆಲ್ಯೂಷನ್ಸ್ ಲಿಮಿಟೆಡ್ ಸಿಇಓ ಡಾ.ಮೆಂದಸ್ ಜಾಕೂಬ್, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಚೀಫ್ ಎಕ್ಸಿಕ್ಯೂಟಿವ್ ಪ್ರೊ.ಸಾಂಬಶಿವಯ್ಯ, ಪ್ರಿನ್ಸಿಪಾಲ್ ಪ್ರೊ.ವಿಜಯೇಂದ್ರ ಕುಮಾರ್, ಡಾ.ಸುನಿಲ್ ಜಾಬ್, ಸ್ಥಳ: ಗೋಲ್ಡನ್ ಜ್ಯೂಬಿಲಿ ಹಾಲ್, ಬೆಳಗ್ಗೆ 10ರಿಂದ.
- **ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಾನ :** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ಶ್ರೀ ರಘೋತ್ತಮಾಚಾರ್ಯ ನಾಗಸಂಪಿಗೆ, ಬಾಗಲಕೋಟೆ ಅವರಿಂದ ಶ್ರೀಮದ್ ರಾಮಾಯಣ ಪ್ರವಚನ (ಬಾಲಕಾಂಡ), ಸ್ಥಳ:ತತ್ವಜ್ಞಾನ ಮಂದಿರ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಅಂತರ ರಾಷ್ಟ್ರೀಯ ಯೋಗ ದಿನದ ಅಂಗವಾಗಿ ಮೈಸೂರಿನ ಯೋಗ ವಿದ್ಯಾ ಪರಂಪರೆ-ಬಾನುಲಿ ಸರಣಿ, ಪ್ರಸ್ತುತಿ- ಡಾ.ಎ.ಎಸ್.ಚಂದ್ರಶೇಖರ್, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು- ವಿದ್ಯಾ ವಿಕಾಸ ಇಂಜಿನಿಯರಿಂಗ್ ಕಾಲೇಜ್ ಮೈಸೂರು, 6.40 ಪದಸಂಸ್ಕೃತಿ-ಕನ್ನಡ ಪದಗಳ ಬಳಕೆ-ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ-ಕೆ.ಎಲ್.ಪದ್ಮಿನಿ ಹೆಗಡೆ, 7.15 ಭಾವಗೀತೆಗಳು, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಡಿ.ಕೆ.ಜಯರಾಮನ್- ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ-ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ-ಉಮೇಶ್ ಎಸ್.ಎಸ್., 1.20 ವಿಶ್ವಯೋಗದಿನದ ಸಂಬಂಧದ ಸರಣಿ-ಯೋಗ ಶಿಕ್ಷಕ ಡಾ.ಕೆ.ರಾಘವೇಂದ್ರ ಪೈ ಅವರೊಂದಿಗೆ ಸಂದರ್ಶನ, ಸಂದರ್ಶಕರು-ದಿವಾಕರ ಹೆಗಡೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ- ಜಿ.ಕೆ.ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು-ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ-ಜೀವನ್ಮುಖಿ, 4.30 ವೃತ್ತಿ ಮಾಗದರ್ಶನ-ವಿಶ್ವ ಬೈಸಿಕಲ್ ದಿನಾಚರಣೆಯ ಸಂದರ್ಭದಲ್ಲಿ ಸೈಕ್ಲಿಂಗ್ ಕ್ರೀಡೆಯಲ್ಲಿರುವ ಅವಕಾಶಗಳು ಕುರಿತು ಲೋಕೇಶ್ ನರಸಿಂಹಾಚಾರ್ ಅವರೊಂದಿಗೆ ಮಾತುಕತೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ-ಕಿಸಾನ್‌ವಾಣಿ, ರೂಪಕ- ಒಂದು ಹಕ್ಕಿಯ ಕಥೆ. ರಚನೆ ಮತ್ತು ಪ್ರಸ್ತುತಿ- ಜಿ. ಶಾಂತಕುಮಾರ್, 8.00 ವಿಜ್ಞಾನ ಭಾರತಿ, 9.15 ಜನಪದ ಸಂಗೀತ, 9.30 ಗಾನಲಹರಿ, ಪ್ರಸ್ತುತಿ- ಶ್ರೀಕಾಂತ್ ಕುಲಕರ್ಣಿ, 10.30 ಸವಿನೆನಪು



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡರನ್ನು ಕನ್ನೇಗೌಡ ಕೊಪ್ಪಲಿನ ಮುಖಂಡರಾದ ಬಸಪ್ಪ, ಕೃಷ್ಣಪ್ಪ ಆತ್ಮೀಯವಾಗಿ ಸನ್ಮಾನಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸರಿಗೆ ಸನ್ಮಾನ



ಮೈಸೂರು, ಜೂ.1(ಎಂಕೆ)– ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರದಲ್ಲಿ ಹೆಬ್ಬಾರ್ ಶ್ರೀವೈಷ್ಣವ ಉಪಸಭಾ ವತಿಯಿಂದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕ ಶ್ರೀವತ್ಸ, ಹಳೇ ಮೈಸೂರು ಭಾಗದ 4 ಜಿಲ್ಲೆಗಳಲ್ಲಿ ನಾನು ಉಳಿದುಕೊಂಡಿದ್ದೇನೆ ಎಂದರೆ ಅದಕ್ಕೆ ಅನೇಕ ಸಮುದಾಯ ಸಂಘಟನೆಗಳ, ಕಾರ್ಯಕರ್ತರ ಸಹಕಾರ, ಪ್ರೋತ್ಸಾಹ ಕಾರಣವಾಗಿದೆ. ಚುನಾವಣೆ ಸಂದರ್ಭದಲ್ಲಿ ಸಾವಿರ, ಐನೂರು ರೂ.ಗಳನ್ನು ವಿಳ್ಯದೆಲೆಯಲ್ಲಿಟ್ಟು ಆರ್ಥಿಕ ಸಹಕಾರ ಹಾಗೂ ಪ್ರೋತ್ಸಾಹ ನೀಡಿ ಗೆಲ್ಲಿಸಿದ್ದಾರೆ. ನನ್ನ ಮೇಲೆ ಸಾಕಷ್ಟು ಜವಾಬ್ದಾರಿಗಳಿದ್ದು, ನಿಮ್ಮ ನಿರೀಕ್ಷೆಗಳನ್ನು ಹುಸಿ ಮಾಡದಂತೆ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು. ಕೆ.ಆರ್.ಕ್ಷೇತ್ರದಲ್ಲಿ ಆದ್ಯತೆ ಆಧಾರದ ಮೇಲೆ ರಸ್ತೆ ಚರಂಡಿ ಇನ್ನಿತರೆ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಮುಂದುವರೆಸಲಾಗುವುದು. ಸರ್ಕಾರದಿಂದಲೂ ಸಹಕಾರ ದೊರೆಯುವ ನಂಬಿಕೆ ಇದೆ. ಆದ್ದರಿಂದ ಡಾಂಬರೀಕರಣವಾಗುತ್ತಿರುವ ರಸ್ತೆಗಳಲ್ಲಿ ಕಳಪೆ ಕಾಮಗಾರಿ ನಡೆಯುತ್ತಿದೆ ಎಂದು ತಮಗೆ ಅನಿಸಿದರೆ, ಕೂಡಲೇ ತಿಳಿಸಿ. ಕಾಮಗಾರಿಯಲ್ಲಿ ಗುಣಮಟ್ಟವಿದೆ ಎಂದು ಅನಿಸಿದರೆ ಸಾಮಾಜಿಕ ಜಾಲತಾಣಗಳ ಮೂಲಕ ಶುಭಾಶಯ ತಿಳಿಸಿದರೆ ಸಾಕು. ಹಾಗೆಯೇ ಯಾವ ಯಾವ ಅಭಿವೃದ್ಧಿ ಕೆಲಸಗಳಾಗಬೇಕು ಎಂದು ತಿಳಿಸಿ ಎಂದರು. ಹೆಬ್ಬಾರ್ ಶ್ರೀವೈಷ್ಣವ ಕೇಂದ್ರ ಸಭಾ ಸಮಿತಿ ಸದಸ್ಯರಾದ ರಾಮಪ್ರಸಾದ್, ತಿರುಮಲಾಚಾರ್, ಹೆಬ್ಬಾರ್ ಶ್ರೀವೈಷ್ಣವ ಉಪಸಭಾ ಅಧ್ಯಕ್ಷ ಡಾ.ಅಪ್ರಮೇಯ ರಾಮನ್, ಕಾರ್ಯದರ್ಶಿ ಜಿ.ಮುಕುಂದ ಮತ್ತಿತರರಿದ್ದರು.

ಗಂಜೀಫಾ ಚಿತ್ರಕಲಾವಿದ ರಘುಪತಿ ಭಟ್, ಯೋಗಾಚಾರ್ಯ ಸುಧೇಶ್ ಚಂದ್‌ಗೆ ಚಂಪಕ ಕಲಾ ರತ್ನ ಪ್ರಶಸ್ತಿ ಪ್ರದಾನ

ಸಾವಿರಾರು ವರ್ಷಗಳ ಅನ್ಯರ ಆಳ್ವಿಕೆ ನಡುವೆಯೂ ನಮ್ಮ ಕಲೆ, ಸಂಸ್ಕೃತಿ, ಸಾಹಿತ್ಯ ಉಳಿವಿಗೆ ಸಾಂಸ್ಕೃತಿಕ ಸೇವಾ ಸಂಸ್ಥೆಗಳೂ ಕಾರಣ: ಕೆಬಿಜಿ

ಮೈಸೂರು, ಜೂ.1(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ 'ಚಂಪಕ ಕಲಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಸಾಧಕರಾದ ರಘುಪತಿ ಭಟ್(ಗಂಜೀಫಾ ಚಿತ್ರಕಲೆ), ಯೋಗಾಚಾರ್ಯ ಸುಧೇಶ್ ಚಂದ್(ಯೋಗ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ನಾಗರಿಕತೆಯ ಜೊತೆ ಜೊತೆಗೆ ಸಂಸ್ಕೃತಿಯನ್ನು ಉಳಿಸುವುದು ಅತ್ಯಂತ ಅವಶ್ಯವಾಗಿದ್ದು, ಈ ನಿಟ್ಟಿನಲ್ಲಿ ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ ಸೇವೆ ಶ್ಲಾಘನೀಯವಾದದ್ದು. ಸಮಾಜದಲ್ಲಿ ಜೀವನ ನಡೆಬಹುದು. ಆದರೆ ಸಾಧಕರಾಗಿ ಸಮಾಜದಲ್ಲಿ ಕಾಣಿಸಿಕೊಳ್ಳುವುದು ಮುಖ್ಯವಾಗಿದೆ. ಸಾಧನೆಯ ಮಾರ್ಗದಲ್ಲಿ ಸಾಗಿದ ಫಲವಾಗಿ ಈ ಸಾಧಕರಿಬ್ಬರು 'ಚಂಪಕ ಕಲಾ ರತ್ನ' ಪ್ರಶಸ್ತಿ ಪಡೆದಿದ್ದಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ನನ್ನ ಪ್ರಕಾರ ಈ ದೇಶದಲ್ಲಿ ಬ್ರಿಟಿಷರು ಸೇರಿದಂತೆ ಇತರರು 1100 ವರ್ಷಗಳ ಕಾಲ ಆಡಳಿತ ನಡೆಸಿದ್ದಾರೆ. ಇದೆಲ್ಲದರ ನಡುವೆಯೂ ನಮ್ಮ ಕಲೆ, ಸಂಸ್ಕೃತಿ, ಸಾಹಿತ್ಯ ಉಳಿದಿದೆ ಎಂದರೆ ಅದಕ್ಕೆ ಸಾಂಸ್ಕೃತಿಕ ಸೇವಾ ಸಂಸ್ಥೆಗಳ ಕೊಡುಗೆ ಮುಖ್ಯವಾಗಿದೆ. ನಮ್ಮಲ್ಲಿ ನಾನು ಎಂಬುದು ಹೋಗಿ ನಾವು ಎನ್ನುತ್ತಾ ಒಟ್ಟಾಗಿ ಬದುಕಿದಾಗ ಸಂಸ್ಕೃತಿ ಇನ್ನಷ್ಟು ಗಟ್ಟಿಯಾಗುತ್ತದೆ. ಹಾಗೆಯೇ ದೇಶವೂ ಅಭಿವೃದ್ಧಿಯತ್ತ ಸಾಗುತ್ತದೆ ಎಂದರು.

ಸ್ವಾತಂತ್ರ್ಯ ಬಂದಾಗಿನಿಂದ ದೇಶದಲ್ಲಾಗಿರುವ ಬದಲಾವಣೆ ಎಂದರೆ ಅದು ತಂದೆಯಿಂದ ಮಗನಿಗೆ, ಮೊಮ್ಮಕ್ಕಳಿಗೆ ಅಧಿಕಾರ ಹಸ್ತಾಂತರವಾಗಿರುವುದು ಮಾತ್ರ. 2014ರಿಂದೀಚೆಗೆ ದೇಶದಲ್ಲಿ ಒಂದಷ್ಟು ಬದಲಾವಣೆಗಳನ್ನು ಕಂಡಿದ್ದೇವೆ. ರಾಷ್ಟ್ರೀಯತೆಯೇ ಮೊದಲು ಎಂದರಷ್ಟೇ ನಮ್ಮದು, ನಮ್ಮ ಸಂಸ್ಕೃತಿ ಉಳಿಯುತ್ತದೆ–ಬೆಳೆಯುತ್ತದೆ. ಬ್ರಿಟಿಷರು ಮೈಸೂರು ಒಡೆಯರಿಗೆ ಅಧಿಕಾರ ಹಸ್ತಾಂತರ ಮಾಡಿದ ನಂತರ ಮೈಸೂರಿನ ಹಿರಿಮೆ–ಗರಿಮೆ, ಕಲೆ, ಸಂಸ್ಕೃತಿ ಬೆಳೆದದ್ದು ಎಂದು ತಿಳಿಸಿದರು.

ಮಾರುಹೋಗುವ ಸ್ಥಿತಿ ಬಂದಿದೆ: ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿ, ಮಕ್ಕಳಿಗೆ ಪಠ್ಯದ ಜೊತೆಗೆ ಸಾಂಸ್ಕೃತಿಕ ಕಲಾಪ್ರಕಾರಗಳನ್ನು ಅಭ್ಯಾಸ ಮಾಡಿಸುವುದು ಅತ್ಯಂತ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್‌ಗೆ ಅಭಿನಂದನೆ ಸಲ್ಲಿಸುತ್ತೇನೆ. ಇದೆಲ್ಲದರ ನಡುವೆ ಬೇರೆ ಸಂಸ್ಕೃತಿಗೆ ಮಾರುಹೋಗುವ ಪರಿಸ್ಥಿತಿ ನಮ್ಮ ಸಮಾಜದಲ್ಲಿದ್ದು, ನಮ್ಮ ನೆಲದ ಸಂಸ್ಕೃತಿ ಉಳಿವಿಗೆ ಮುಂಜಾಗ್ರತೆ ವಹಿಸುವುದು ಮುಖ್ಯವಾಗಿದೆ ಎಂದು ಸಲಹೆ ನೀಡಿದರು. ಇದಕ್ಕೂ ಮುನ್ನ 'ಚಂಪಕ ಕಲಾ ರತ್ನ' ಪ್ರಶಸ್ತಿ ಸ್ವೀಕರಿಸಿದ ರಘುಪತಿ ಭಟ್ ಹಾಗೂ ಯೋಗಾಚಾರ್ಯ ಸುಧೇಶ್ ಚಂದ್ ತಮ್ಮ ಸಾಧನೆಯ ಹಾದಿ ಹಾಗೂ ಕಲೆ, ಸಂಸ್ಕೃತಿ ಮತ್ತು ಯೋಗದ ಮಹತ್ವ ತಿಳಿಸಿಕೊಟ್ಟರು.

ಭರತನಾಟ್ಯ ನೃತ್ಯ ಪ್ರದರ್ಶನ: ನಂತರ ಚಂಪಕ ಅಕಾಡೆಮಿ ಸಂಸ್ಥಾಪಕರಾದ ವಿದುಷಿ ನಾಗಲಕ್ಷ್ಮಿ ನಾಗರಾಜನ್ ಅವರಿಂದ 'ಶ್ರೀ ಕೃಷ್ಣ ಲೀಲಾ ವಿಭೂತಿ' ಗೀತ ನಾಟಕಕ್ಕೆ ನೃತ್ಯ ಪ್ರದರ್ಶನ ನೀಡಿದರು. ವಿದುಷಿ ಚೇತನ ನಾಗರಾಜ್ ಸಂಗೀತ ಸಂಯೋಜನೆ ಹಾಗೂ ಗಾಯನದಲ್ಲಿ ಸಹಕರಿಸಿದರೆ, ಕೊಳಲು ವಾದನದಲ್ಲಿ ವಿದ್ವಾನ್ ಕೆ.ಎಸ್.ಗಣೇಶ್, ಮೃದಂಗದಲ್ಲಿ ಸಾಯಿ ವಂಶಿ, ಗಮಕ ಗಾಯನದಲ್ಲಿ ವಿದುಷಿ ಅನ್ನಪೂರ್ಣ ನಾಗೇಂದ್ರ ಹಾಗೂ ಸಂಭಾಷಣೆಯಲ್ಲಿ ಹೇಮಾ ರಮೇಶ್ ಸಹಕಾರ ನೀಡಿದರು. ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್‌ನ ನಾಗರಾಜನ್ ಶ್ರೀನಿವಾಸನ್ ಮತ್ತಿತರರು ಉಪಸ್ಥಿತರಿದ್ದರು.





ರಾಮಕೃಷ್ಣನಗರದಲ್ಲಿನ ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ ವತಿಯಿಂದ ಗುರುವಾರ ಸಾಧಕರಾದ ರಘುಪತಿ ಭಟ್(ಗಂಜೀಫಾ ಚಿತ್ರಕಲೆ), ಯೋಗಾಚಾರ್ಯ ಸುಧೇಶ್ ಚಂದ್(ಯೋಗ) ಅವರಿಗೆ 'ಚಂಪಕ ಕಲಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಮಾಜಿ ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಚಂಪಕ ಅಕಾಡೆಮಿ ಸಂಸ್ಥಾಪಕಿ ವಿದುಷಿ ನಾಗಲಕ್ಷ್ಮಿ ನಾಗರಾಜನ್ ಮತ್ತಿತರರು ಉಪಸ್ಥಿತರಿದ್ದಾರೆ.

ಮೈಸೂರು ಪರಿಸರ ಸಂರಕ್ಷಣೆಗೆ ಸರ್ವರೂ ಸಾಥ್ ನೀಡಿ

● 'ನನ್ನ ಜೀವನ, ನನ್ನ ಸ್ವಚ್ಛ ನಗರ' ಅಭಿಯಾನದ ಜಾಗೃತಿ ● ಮೇಯರ್ ಶಿವಕುಮಾರ್ ಚಾಲನೆ



ಮೈಸೂರು, ಜೂ.1(ಎಸ್‌ಬಿಡಿ)– ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕೈ ಜೋಡಿಸಬೇಕೆಂದು ಮೈಸೂರಿನ ಮೇಯರ್ ಶಿವಕುಮಾರ್ ಮನವಿ ಮಾಡಿದರು.

ಮೈಸೂರು ಮಹಾನಗರಪಾಲಿಕೆ, ಅಖಿಲ ಭಾರತೀಯ ಗ್ರಾಹಕ ಪಂಚಾಯತ್‌ನ ಮೈಸೂರು ಘಟಕ, ವಿದ್ಯಾರಣ್ಯ ಟ್ರಸ್ಟ್ ಮತ್ತು ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಸಹಯೋಗದೊಂದಿಗೆ ವಿದ್ಯಾರಣ್ಯಪುರಂನಲ್ಲಿ ಗುರುವಾರ ಆಯೋಜಿಸಿದ್ದ 'ನನ್ನ ಜೀವನ, ನನ್ನ ಸ್ವಚ್ಛ ನಗರ' ಅಭಿಯಾನದ ಜಾಗೃತಿ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್–2.0 ಯೋಜನೆಯಡಿ ಪರಿಸರ ಸಂರಕ್ಷಣೆಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಸೇರಿ ಪುನರ್ಬಳಕೆ ಮಾಡಲಾಗದ ಉತ್ಪನ್ನಗಳ ತಯಾರಿಕೆಗೆ ಕಡಿವಾಣ ಹಾಕಲಾಗಿದೆ. ಪರಿಸರ ಸಂರಕ್ಷಣೆಯಲ್ಲಿ ಸಾರ್ವಜನಿಕರ ಸಹಕಾರ ಬಹಳ ಮುಖ್ಯ. ಇದರಲ್ಲಿ ಎಲ್ಲರನ್ನೂ ಒಳಗೊಳ್ಳಿಸಿಕೊಳ್ಳುವ ಉದ್ದೇಶದಿಂದ 'ನನ್ನ ಜೀವನ, ನನ್ನ ಸ್ವಚ್ಛ ನಗರ' ಅಭಿಯಾನ ಆರಂಭಿಸಲಾಗಿದೆ ಎಂದು ತಿಳಿಸಿದರು.

ಹಳೆಯ ವಸ್ತುಗಳನ್ನು ಎಲ್ಲೆಂದರಲ್ಲಿ ಎಸೆದು ಪರಿಸರವನ್ನು ಹಾಳು ಮಾಡಬಾರದು. ಹಳೆಯ ಬಟ್ಟೆ, ಪುಸ್ತಕ, ದಿನಪತ್ರಿಕೆ, ಮಕ್ಕಳ ಆಟಿಕೆಗಳು, ಕ್ಯಾರಿ ಬ್ಯಾಗ್‌ಗಳು ಸೇರಿದಂತೆ ಮತ್ತೆ ಬಳಸಬಹುದಾದ ವಸ್ತುಗಳನ್ನು ನಿಗದಿತ ಕೇಂದ್ರಗಳಿಗೆ ನೀಡುವ ಮೂಲಕ. ಸುಸ್ಥಿತಿಯಲ್ಲಿರುವ ಆಟಿಕೆಗಳನ್ನು ಪುನರ್ವಸತಿ ಕೇಂದ್ರಗಳಿಗೆ, ದಿನಪತ್ರಿಕೆಗಳನ್ನು ಮರು ಬಳಕೆ ಮಾಡುವ ಸಂಸ್ಥೆಗಳಿಗೆ, ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಹೀಗೆ ಸಮರ್ಪಕ ರೀತಿಯಲ್ಲಿ ಬಳಸಿಕೊಳ್ಳಲಾಗುವುದು. ಇದರಿಂದ ತ್ಯಾಜ್ಯದ ಪ್ರಮಾಣ ಕಡಿಮೆಯಾಗುವುದರ ಜೊತೆಗೆ ವಸ್ತುಗಳ ಪುನರ್ಬಳಕೆ ಆದಂತಾಗುತ್ತದೆ ಎಂದು ಹೇಳಿದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಮನೆಗಳಲ್ಲಿ ಸಾಕಷ್ಟು ಹಳೆಯ ವಸ್ತುಗಳನ್ನು ಇಟ್ಟುಕೊಂಡಿರುತ್ತೇವೆ. ಯಾವುದನ್ನೂ ಬಳಸಲಾಗದೆ ಒಂದು ದಿನ ಹೊರಗೆ ಬಿಸಾಡುತ್ತೇವೆ. ಅದರಿಂದ ಪರಿಸರ ಹಾಳಾಗುತ್ತದೆ. ಇದರ ಬದಲು ಪುಸ್ತಕ, ಬಟ್ಟೆ, ಆಟಿಕೆ, ದಿನಪತ್ರಿಕೆ ಇನ್ನಿತರ ವಸ್ತುಗಳನ್ನು ನಗರಪಾಲಿಕೆಯ ಮರು ಬಳಕೆ ಕೇಂದ್ರಗಳಿಗೆ ನೀಡಿದರೆ ಸಮರ್ಪಕ ರೀತಿಯಲ್ಲಿ ಪುನರ್ಬಳಕೆ ಮಾಡಲಾಗುತ್ತದೆ. ಹಾಗಾಗಿ ಸಾರ್ವಜನಿಕರು 'ನಮ್ಮ ಜೀವನ, ನಮ್ಮ ಸ್ವಚ್ಛ ನಗರ' ಅಭಿಯಾನದಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಕ ಶಿವಪ್ರಸಾದ್, ಪರಿಸರ ಇಂಜಿನಿಯರ್ ಜ್ಯೋತಿ, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಜಿ.ವಿ.ರವಿಶಂಕರ್, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್‌ನ ವಿಕ್ರಮ್ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಬೈರತಿ ಲಿಂಗರಾಜು, ಸುರೇಶ್, ಪಂಚಾಕ್ಷರಿ ಮತ್ತಿತರರು ಉಪಸ್ಥಿತರಿದ್ದರು.

ಜಾಗೃತಿ ಜಾಥಾ: ವಿದ್ಯಾರಣ್ಯಪುರಂನ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಬಳಿಯಿಂದ ಚಾಮುಂಡಿಪುರಂ ವೃತ್ತದವರೆಗೆ 'ನನ್ನ ಜೀವನ ನನ್ನ ಸ್ವಚ್ಛ ನಗರ' ಜಾಗೃತಿ ಜಾಥಾ ನಡೆಯಿತು. ಹಲವಾರು ವಿದ್ಯಾರ್ಥಿಗಳು ಘೋಷಣಾ ಫಲಕ ಹಿಡಿದು ಜಾಥಾದಲ್ಲಿ ಹೆಜ್ಜೆ ಹಾಕಿ, ಪರಿಸರ ಸಂರಕ್ಷಣೆಯ ಮಹತ್ವ ಸಾರಿದರು.

ಉನ್ನತ ಶಿಕ್ಷಣ ವಂಚಿತರಿಗೆ ಮುಕ್ತ ವಿವಿ ಆಸರೆ

● ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ● ಮುಕ್ತ ವಿವಿ ಸಂಸ್ಥಾಪನಾ ದಿನಾಚರಣೆ



ಮುಕ್ತ ವಿವಿ ಸಂಸ್ಥಾಪನಾ ದಿನಾಚರಣೆಯನ್ನು ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಉದ್ಘಾಟಿಸಿದರು. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವರಾದ ಕೆ.ಎಲ್.ಎನ್.ಮೂರ್ತಿ, ಪ್ರೊ.ಕೆ.ಬಿ.ಪ್ರವೀಣ ಮತ್ತಿತರರಿದ್ದರು.

ಮೈಸೂರು,ಜೂ.1(ಎಸ್‌ಬಿಡಿ)– ಕಾಲೇಜಿಗೆ ಹೋಗಲಾಗದೆ ಉನ್ನತ ಶಿಕ್ಷಣದಿಂದ ವಂಚಿತರಾದವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಆಸರೆಯಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿದರು.

ಕರಾಮುವಿ ಘಟಿಕೋತ್ಸವ ಭವನದಲ್ಲಿ ಗುರುವಾರ ಆಯೋಜಿಸಿದ್ದ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಅನೇಕ ಕಾರಣಗಳಿಂದ ಹಲವರು ಉನ್ನತ ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಅಂತಹವರಿಗೆ ಮುಕ್ತ ವಿವಿ ಆಸರೆಯಾಗಿದೆ. ಮೈಸೂರು ವಿವಿ ಸ್ಥಾಪಿಸುವ ಸಂದರ್ಭದಲ್ಲಿ ಶಿಕ್ಷಣವು ಮನೆ ಬಾಗಿಲಿಗೆ ತಲುಪಬೇಕೆಂದು ಮಹಾರಾಜರು ಆಶಿಸಿದ್ದರಂತೆ. ದೂರ ಶಿಕ್ಷಣದಿಂದ ಅದು ಸಾಕಾರವಾಗಿದೆ ಎಂದರು.

ವಿದ್ಯಾರ್ಜನೆ ಹಸಿವು ಹೆಚ್ಚಾಗಿದೆ. ಕಲಿಯುವವರ ಸಂಖ್ಯೆ ಹೆಚ್ಚುತ್ತಿರುವುದರಿಂದ ಶಿಕ್ಷಣ ಕೇಂದ್ರಗಳ ಅಗತ್ಯತೆಯೂ ಹೆಚ್ಚಾಗಿದೆ. ಈ ಕಾರಣದಿಂದಲೇ ಮೈಸೂರಿನಲ್ಲಿ 2ನೇ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿವಿ ಸ್ಥಾಪನೆಯಾಗಿ 27 ವರ್ಷಗಳು ಕಳೆದಿದ್ದು ಈ ಸಂಸ್ಥೆ ಹೆಮ್ಮರವಾಗಿ ಬೆಳೆದು ನಿಂತಿದೆ. ಇದೀಗ ನ್ಯಾಕ್‌ನಿಂದ 'ಎ +' ಗ್ರೇಡ್ ಪಡೆದಿರುವುದು ವಿವಿಯ ಗುಣಮಟ್ಟ ಹಾಗೂ ಬೆಳವಣಿಗೆ ವೇಗವನ್ನು ಸಾಬೀತುಪಡಿಸುತ್ತದೆ ಎಂದರು.

ಎರಡೂವರೆ ದಶಕಗಳ ಕಾಲ ಶೈಕ್ಷಣಿಕ ಸೇವೆ ಸಲ್ಲಿಸಿರುವ ಮುಕ್ತ ವಿವಿಗೆ ಸಂಸ್ಥಾನದ ದಿನದ ಸಂಭ್ರಮ. ಈ ಸಂದರ್ಭದಲ್ಲಿ ವಿವಿ ನಡೆದು ಬಂದ ದಾರಿ, ಸಿಹಿ–ಕಹಿಯ ಕ್ಷಣಗಳನ್ನು ನೆನೆದು ಭವಿಷ್ಯದತ್ತ ಗಟ್ಟಿಯಾದ ಹೆಜ್ಜೆ ಇಡಬೇಕು. ಹಳೆ ಬೇರು ಹೊಸ ಚಿಗುರು ಎನ್ನುವಂತೆ ವಿವಿ ಮೂಲಕ ಶಿಕ್ಷಣ ಪಡೆದು, ಉನ್ನತ ಸ್ಥಾನಗಳಲ್ಲಿರುವ ಹಳೆಯ ವಿದ್ಯಾರ್ಥಿಗಳನ್ನು ಸಂಪರ್ಕಿಸಿ, ಒಂದುಗೂಡಿಸಬೇಕು. ಈ ಮೂಲಕ ಸಂಸ್ಥೆಯ ಬೆಳವಣಿಗೆಗೆ ಅಗತ್ಯವಾದ ಸಲಹೆ, ಸಹಕಾರ ಲಭ್ಯವಾಗುತ್ತದೆ. ಆಡಳಿತ ಮಂಡಳಿ ಮೇಲಿನ ಕಾರ್ಯಭಾರವನ್ನೂ ಕಡಿಮೆ ಮಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ದೂರ ಶಿಕ್ಷಣದ ವ್ಯವಸ್ಥೆಯಡಿ ಶಿಕ್ಷಣ ಪಡೆಯುವವರು ಸ್ವಯಂ ಅಧ್ಯಯನ ಮಾಡುತ್ತಾರೆ. ನಿತ್ಯ ತರಗತಿಗಳು, ಮಾರ್ಗದರ್ಶನ ಇರುವುದಿಲ್ಲ. ಹಾಗಾಗಿ ಶೈಕ್ಷಣಿಕ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿನ ಸವಾಲುಗಳನ್ನು ಎದುರಿಸಲು ಸಿದ್ಧರಿರುತ್ತಾರೆ. ವಿವಿಯ ಬೆಳವಣಿಗೆಯಲ್ಲಿ ಅಧ್ಯಾಪಕರು ಹಾಗೂ ಸಿಬ್ಬಂದಿ ಪರಿಶ್ರಮ ಮಹತ್ವದ್ದಾಗಿದೆ. ಕಲಿಕೆ ಸಾಧ್ಯತೆಗಳನ್ನು ಹೆಚ್ಚಿಸುವುದು, ಪರಿಣಾಮಕಾರಿ ಶೈಕ್ಷಣಿಕ ವಿಚಾರಗಳನ್ನು ಅಳವಡಿಸಿಕೊಳ್ಳುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಪ್ರಸಕ್ತ ವರ್ಷದಿಂದ ಆರಂಭಿಸಿರುವ ಆನ್‌ಲೈನ್ ಕೋರ್ಸ್‌ಗಳನ್ನೂ ಹೆಚ್ಚು ಜನರಿಗೆ ತಲುಪಿಸಬೇಕು. ಒಟ್ಟಾರೆ ಮುಕ್ತ ವಿವಿ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲಿ ಎಂದು ಆಶಿಸಿದರು.

ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ(ಆಡಳಿತ) ಕೆಎಲ್.ಎನ್.ಮೂರ್ತಿ, ಪರೀಕ್ಷಾಂಗ ಕುಲ ಸಚಿವ ಪ್ರೊ.ಕೆ.ಬಿ.ಪ್ರವೀಣ, ಶೈಕ್ಷಣಿಕ ಮುಖ್ಯಸ್ಥ ಪ್ರೊ.ಎನ್.ಲಕ್ಷ್ಮಿ, ಹಣಕಾಸು ಅಧಿಕಾರಿ ಡಾ.ಖಾದರ್ ಪಾಷಾ, ಅಧ್ಯಯನ ಕೇಂದ್ರದ ಮುಖ್ಯಸ್ಥ ಪ್ರೊ.ಎಂ.ರಾಮನಾಥಂ ನಾಯ್ಡು, ಆಂತರಿಕ ಗುಣಮಟ್ಟ ಮೌಲ್ಯಮಾಪನ ಕೇಂದ್ರದ ನಿರ್ದೇಶಕ ಡಾ.ಎಸ್.ನಿರಂಜನ್‌ರಾಜ್ ಮತ್ತಿತರರಿದ್ದರು.

ಬಿಪಿಎಲ್ ಕಾರ್ಡುದಾರರಿಗೆ ಗೃಹಲಕ್ಷ್ಮೀ, ಅನ್ನಭಾಗ್ಯ ಗ್ಯಾರಂಟಿ ಸೌಲಭ್ಯ ಲಭ್ಯ

ಶಾಸಕರ ಭರವಸೆ



ಮೈಸೂರು,ಜೂ.1(ಪಿಎಂ)– ಚುನಾವಣೆ ಪೂರ್ವದಲ್ಲಿ ಗೃಹಲಕ್ಷ್ಮೀ, ಅನ್ನಭಾಗ್ಯ ಗ್ಯಾರಂಟಿ ಸೌಲಭ್ಯಗಳನ್ನು ಬಿಪಿಎಲ್ ಕಾರ್ಡುದಾರರಿಗೆ ಕಲ್ಪಿಸುವುದಾಗಿ ಹೇಳಿದ್ದೆವು. ಅದರಂತೆ ನಮ್ಮ ಸರ್ಕಾರ ನಡೆದುಕೊಳ್ಳಲಿದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದ ಬಯಲು ಮಂದಿರದಲ್ಲಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಗ್ಯಾರಂಟಿಯ ಐದು ಕಾರ್ಯಕ್ರಮಗಳನ್ನೂ ನಮ್ಮ ಸರ್ಕಾರ ಅನುಷ್ಠಾನಗೊಳಿಸಲಿದೆ ಎಂದರು. ಚುನಾವಣೆ ಪೂರ್ವದಲ್ಲಿ ಯಾವುದೇ ಷರತ್ತುಗಳ ಬಗ್ಗೆ ಹೇಳಿರಲಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಮೊದಲೂ ಸಹ ಗೃಹಲಕ್ಷ್ಮೀ, ಅನ್ನಭಾಗ್ಯ ಗ್ಯಾರಂಟಿ ಸೌಲಭ್ಯಗಳನ್ನು ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಕೊಡುವುದಾಗಿ ಹೇಳಿದ್ದೆವು. ಅದರಂತೆ ನಡೆದುಕೊಳ್ಳುತ್ತಿದ್ದೇವೆ ಎಂದರು. ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಕೊನೆಯಲ್ಲಿ ವಿವಿಧ ಇಲಾಖೆಗಳಲ್ಲಿ ಮಂಜೂರು ಮಾಡಲಾದ ಕಾಮಗಾರಿಗಳಿಗೆ ಕಾಂಗ್ರೆಸ್ ಸರ್ಕಾರ ತಡೆ ನೀಡಿರುವ ಸಂಬಂಧ ನಿಮ್ಮ ಕ್ಷೇತ್ರದಲ್ಲಿ ಎಷ್ಟು ಕಾಮಗಾರಿಗಳಿಗೆ ತಡೆಯಾಗಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ನಗರಪಾಲಿಕೆ ವ್ಯಾಪ್ತಿಯಲ್ಲಿ ಪರಿಶೀಲಿಸಿದ್ದು, ಇಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಶೇ.90ರಷ್ಟು ಪೂರ್ಣಗೊಂಡಿವೆ. ಹಿಂದೆ ನಡೆದಿರುವ ಕಾಮಗಾರಿಗಳಲ್ಲಿ ಗುಣಮಟ್ಟ ಇಲ್ಲವಾದರೆ, ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇವೆ ಎಂದು ಶಾಸಕ ಕೆ.ಹರೀಶ್‌ಗೌಡ ಉತ್ತರಿಸಿದರು.

ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳ ಆರೋಪ; ಸಂಯುಕ್ತ ಹೋರಾಟ ಕರ್ನಾಟಕದಿಂದ ಬಿಜೆಪಿ ಸಂಸದ

ಬ್ರಿಜ್ ಭೂಷಣ್ ಸಿಂಗ್ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಜೂ.1(ಪಿಎಂ)– ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಬಂಧನಕ್ಕೆ ಒತ್ತಾಯಿಸಿ ಸಂಯುಕ್ತ ಹೋರಾಟ ಕರ್ನಾಟಕದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಸಂಯುಕ್ತ ಕಿಸಾನ್ ಮೋರ್ಚಾ ಕರೆಯ ಮೇರೆಗೆ ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ರಾಜ್ಯಾದ್ಯಂತ ಇಂದು ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದರ ಅಂಗವಾಗಿ ಮೈಸೂರಿನ ಗಾಂಧಿ ಚೌಕದಲ್ಲೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಒಲಂಪಿಕ್ ಪದಕ ವಿಜೇತರು, ವಿಶ್ವ ಚಾಂಪಿಯನ್ ಕುಸ್ತಿ ಪಟುಗಳು ಸೇರಿದಂತೆ ದೇಶದ ಗೌರವಾನ್ವಿತ ಕ್ರೀಡಾಪಟುಗಳು 2023ರ ಏಪ್ರಿಲ್ 24ರಿಂದ ನವದೆಹಲಿಯ ಜಂತರ್ ಮಂತರ್‌ನಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿದ್ದಾರೆ. ಬಿಜೆಪಿ ಸಂಸದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಸುಪ್ರಿಂಕೋರ್ಟ್ ಮಧ್ಯ ಪ್ರವೇಶಿಸಿದ ನಂತರವಷ್ಟೇ ಎಫ್‌ಐಆರ್ ದಾಖಲಾಗಿದೆ. ಆರೋಪಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾದ ಕೇಂದ್ರ ಸರ್ಕಾರ ತನ್ನ ಪೊಲೀಸ್ ಪಡೆಗಳನ್ನು ಬಳಸಿ ನ್ಯಾಯಕ್ಕಾಗಿ ಪ್ರತಿಭಟಿಸುತ್ತಿರುವ ಕುಸ್ತಿಪಟುಗಳ ಮೇಲೆಯೇ ದಮನಕಾರಿ ಕ್ರಮಗಳನ್ನು ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಲೈಂಗಿಕ ಕಿರುಕುಳಕ್ಕೆ ಒಳಗಾದ ಮಹಿಳಾ ಕುಸ್ತಿಪಟುಗಳು ಈ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಹಾಗೂ ಪ್ರಕರಣ ಸಂಬಂಧ ರಚಿಸಲಾದ ವಿಚಾರಣಾ ಸಮಿತಿಯ ವರದಿಯನ್ನು ಸಾರ್ವಜನಿಕರ ಗಮನಕ್ಕೆ ತರಬೇಕೆಂದು ಆಗ್ರಹಿಸಿ ಹೋರಾಟ ಮಾಡುತ್ತಿದ್ದಾರೆ. 'ಬೇಟಿ ಬಚಾವೋ ಬೇಟಿ ಪಡಾವೋ' ಎಂದು ಪ್ರಚಾರ ಪಡೆಯುವ ಪ್ರಧಾನಿ ನರೇಂದ್ರ ಮೋದಿ ಅವರ ಒಕ್ಕೂಟ ಸರ್ಕಾರ, ಆರೋಪಿ ರಕ್ಷಣೆಗೆ ನಿಂತಿದ್ದು, ಇದು ನಾಚಿಕೆಗೇಡಿನ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಇದು ಮಹಿಳೆಯರ ಆತ್ಮಗೌರವಕ್ಕಾಗಿ ನಡೆಯುತ್ತಿರುವ ಹೋರಾಟ. ಶೋಷಣೆ ವ್ಯವಸ್ಥೆ ಒಪ್ಪಿಕೊಂಡವರಿಗೆ ಇಂತಹ ಪ್ರಕರಣಗಳು ಅತ್ಯಂತ ಸಾಮಾನ್ಯ ಸಂಗತಿ. ಒಂದೂವರೆ ತಿಂಗಳಿಂದ ಮಹಿಳಾ ಕುಸ್ತಿಪಟುಗಳು ಹೋರಾಟನಿರತರಾಗಿದ್ದಾರೆ. ಯಾವುದೇ ಲೈಂಗಿಕ ದೌರ್ಜನ್ಯದ ಪ್ರಕರಣಗಳಲ್ಲಿ ಸಾಕ್ಷ್ಯಾಧಾರ ಗಳನ್ನು ಕಲೆ ಹಾಕುವುದು ಕಷ್ಟಸಾಧ್ಯ. 100ರಲ್ಲಿ ಒಂದೆರಡು ಸಾಕ್ಷ್ಯಗಳು ದೊರೆಯಬಹುದು. ಬಾಕಿ ಸಾಕ್ಷ್ಯಗಳನ್ನು ಸಾಂದರ್ಭಿಕವಾಗಿ ಸಂಗ್ರಹಿಸಬೇಕಾಗುತ್ತದೆ ಎಂದರು. ರೈತ ಸಂಘದ ಮುಖಂಡರಾದ ಹೊಸಕೋಟೆ ಬಸವರಾಜು, ಮರಂಕಯ್ಯ, ಪುನೀತ್, ಪ್ರಗತಿಪರ ಚಿಂತಕರಾದ ಪ್ರೊ.ಕೆ.ಎಸ್.ಭಗವಾನ್, ರತಿರಾವ್, ಜಿ.ಪಿ.ಬಸವರಾಜು, ನಾ.ದಿವಾಕರ್, ಸಿಐಟಿಯು ಮುಖಂಡರಾದ ಜಿ.ಜಯರಾಮ್, ಬಸವರಾಜು, ಜಗದೀಶ್ ಸೂರ್ಯ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಗಾಂಧಿಚೌಕದಲ್ಲಿ ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಜೂ.5ರಂದು ರಾಷ್ಟ್ರವ್ಯಾಪಿ ಹೋರಾಟ

ಜೂ.5ರಂದು ರಾಷ್ಟ್ರವ್ಯಾಪಿ ದೊಡ್ಡ ಹೋರಾಟ ನಡೆಯಲಿದೆ. ಅಂದು ಈ ಅನ್ಯಾಯದ ವಿರುದ್ಧ ತೀವ್ರವಾಗಿ ಪ್ರತಿಭಟಿಸಬೇಕಿದೆ. ದೌರ್ಜನ್ಯ ಮಾಡುತ್ತಿದ್ದ ಬಿಜೆಪಿ–ಆರ್‌ಎಸ್‌ಎಸ್ ಆಡಳಿತವನ್ನು ಈಗಾಗಲೇ ಕರ್ನಾಟಕದಿಂದ ಕಿತ್ತೊಗೆದಿದ್ದೇವೆ. ಇದೇ ವಿಚಾರ ಮುಂದಿಟ್ಟುಕೊಂಡು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರವನ್ನು 2024ರ ಲೋಕಸಭಾ ಚುನಾವಣೆಯಲ್ಲಿ ಗಟಾರಕ್ಕೆ ಸೇರಿಸಬೇಕು. ಆ ಹೊಣೆ ನಮ್ಮ ಮೇಲಿದೆ. ಮೋದಿಯಂತಲ್ಲಾ ಸಂವಿಧಾನಬಾಹಿರವಾಗಿ ನಡೆಯುವವರು ಯಾರೇ ಇದ್ದರೂ ಅಧಿಕಾರದಿಂದ ಕಿತ್ತೊಗೆಯಬೇಕು.

–ಬಡಗಲಪುರ ನಾಗೇಂದ್ರ

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಬಿಎಸ್‌ಎನ್‌ಎಲ್ ನೌಕರರ ಪ್ರತಿಭಟನೆ



ಮೈಸೂರು,ಜೂ.1(ಪಿಎಂ)–ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬಿಎಸ್‌ಎನ್‌ಎಲ್ ಅಧಿಕಾರಿಗಳೇತರ ನೌಕರರ ಒಕ್ಕೂಟ ಮತ್ತು ಸಂಘಗಳ ಜಂಟಿ ವೇದಿಕೆ ನೇತೃತ್ವದಲ್ಲಿ ಬಿಎಸ್‌ಎನ್‌ಎಲ್ ನೌಕರರು ಪ್ರತಿಭಟನೆ ನಡೆಸಿದರು.

ಜಯಲಕ್ಷ್ಮೀಪುರಂನ ಬಿಎಸ್‌ಎನ್‌ಎಲ್ ದೂರಸಂಪರ್ಕ ಮಹಾಪ್ರಬಂಧಕರ ಕಾರ್ಯಾಲಯದ ಎದುರು ಸಮಾವೇಶಗೊಂಡ ನೌಕರರು, ಪ್ರತಿಭಟನಾ ಮೆರವಣಿಗೆ ಮೂಲಕ ಇಲ್ಲಿನ ಟೆಂಪಲ್ ರಸ್ತೆಯ ಆರನೇ ಮುಖ್ಯ ರಸ್ತೆಯ ಜಂಕ್ಷನ್‌ನಲ್ಲಿ ಜಮಾಯಿಸಿ ಮಧ್ಯಾಹ್ನದ ಊಟದ ವಿರಾಮದಲ್ಲಿ ಪ್ರತಿಭಟನೆ ನಡೆಸಿದರು.

ಶೀಘ್ರವೇ ನೌಕರರ ವೇತನ ಪರಿಷ್ಕರಣೆ ಆಗಬೇಕು. ನೌಕರರ ಪರವಾದ ನೂತನ ಬಡ್ತಿ ನೀಡಿ ಜಾರಿಗೊಳಿಸಬೇಕು ಹಾಗೂ ಬಿಎಸ್‌ಎನ್‌ಎಲ್‌ಗೂ 4ಜಿ ಮತ್ತು 5ಜಿ ಸೇವೆ ಒದಗಿಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ಇದಕ್ಕೂ ಮುನ್ನ ಇದೇ ಜಂಕ್ಷನ್‌ನಲ್ಲಿ ಕೆಲಕಾಲ ಮಾನವ ಸರಪಳಿ ನಿರ್ಮಿಸಿ ತಮ್ಮ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು. ವೇದಿಕೆ ಜಿಲ್ಲಾ ಸಂಚಾಲಕ ಕೆ.ಪುಟ್ಟಸ್ವಾಮಿ, ಜಂಟಿ ಕಾರ್ಯದರ್ಶಿ ನಾಗೇಂದ್ರ ಬಿಎಸ್‌ಎನ್‌ಎಲ್ ನೌಕರರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಜಯಶೀಲನ್ ಸೇರಿದಂತೆ ಮತ್ತಿತರ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಜೂ.1– ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ ಕಾರ್ಯದರ್ಶಿಯನ್ನಾಗಿ ಹೆಚ್.ವಿ.ಗೋವಿಂದರಾಜು ಅವರನ್ನು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷರು ನೇಮಕ ಮಾಡಿ ಆದೇಶಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಆತ : ಇದು ಬಹಳ ನಿಷ್ಠಾವಂತ ನಾಯಿ. ಮಾರ್ತಾ ಇದೀನಿ.

ಈತ : ನಿಜಕ್ಕೂ ನಿಷ್ಠಾವಂತ ನಾಯಿಯಾದರೆ ಖರೀದಿಸಬಹುದಿತ್ತು. ಆದ್ರೆ ನಿಷ್ಠಾವಂತ ಎಂದು ನಂಬುವುದು ಹೇಗೆ?

ಆತ : ಖಂಡಿತ ನಿಷ್ಠಾವಂತ ನಾಯಿ ಕಣ್ರೀ. ಮೂರು ಸಲ ಮಾರಿದೀನಿ. ಮತ್ತೆ ನಮ್ಮ ಮನೆಗೇ ಬಂದಿದೆ !

ಮೈಸೂರು ಮಿತ್ರ

ಶುಕ್ರವಾರ, 2 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಆರಂಭದಲ್ಲಿ ಯೋಚಿಸದವನು ಕೊನೆಯಲ್ಲಿ ಸಂಕಟ ಪಡುತ್ತಾನೆ.

– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿ ಇದ್ದವನಲ್ಲಿ ಶ್ರದ್ಧೆ, ನಿದ್ದೆ ಬಾರದವನಲ್ಲಿ ವಿದ್ಯೆ

ನಿಮ್ಮ ಪತ್ರಗಳು

ಗ್ಯಾರಂಟಿ ಸರ್ಕಾರದಿಂದ ಸುಭದ್ರ ಆಡಳಿತ ಲಭಿಸಲಿ

ಮಾನ್ಯರೆ,

ವಿಧಾನಸಭಾ ಚುನಾವಣೆ ಈಗಷ್ಟೇ ಮುಗಿದು ಫಲಿತಾಂಶ ಹೊರಬಿದ್ದಿದೆ. ಸುಭದ್ರ ಆಡಳಿತಕ್ಕೆ ಕಾಯಲಾಗುತ್ತಿದೆ. ಜನರಿಗೆ, ಪಕ್ಷದ ಕಾರ್ಯಕರ್ತರಿಗೆ ಮತ್ತು ಚುನಾವಣೆಯ ಕಣದಲ್ಲಿದ್ದ ಅಭ್ಯರ್ಥಿಗಳಿಗೆ ಒಂದು ಬಗೆಯ ತವಕ, ಕುತೂಹಲ ಶುರುವಾಗಿತ್ತು. ಫಲಿತಾಂಶ ಹೊರಬಿದ್ದು ನೂತನ ಸರ್ಕಾರ ರಚನೆಯಾಗಿದೆ. ಆದಷ್ಟು ಬೇಗ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ಸಿಗಲೆಂದು ಆಶಿಸೋಣ.

ಈಗಾಗಲೇ ಜನರಿಗೆ ಅಗತ್ಯವಾದ ವಸ್ತುಗಳ ಬೆಲೆ ಏರಿಕೆಯಿಂದ ಆದ ನೋವು, ಕನಿಷ್ಠ ಬೆಂಬಲ ಬೆಲೆ ಸಿಗದೇ ಪರದಾಡಿದ ರೈತಾಪಿ ವರ್ಗ, ಉದ್ಯೋಗ ಸೃಷ್ಟಿ ಆಗದೇ ಕೆಲಸ ಲಭಿಸದ ಯುವಜನರ ನಿರುದ್ಯೋಗದ ತೀವ್ರತೆ, ಪರೋಕ್ಷವಾಗಿ ನೋವುಂಡ ಮಹಿಳಾವರ್ಗ, ಮೀಸಲಾತಿ ಗೊಂದಲ, ಹೀಗೆ ಹತ್ತು ಹಲವು ಸಮಸ್ಯೆಗಳನ್ನು ಹೊತ್ತ ರಾಜ್ಯದ ಪ್ರಜ್ಞಾವಂತ ಜನರು ಈ ಬಾರಿ ಬದಲಾವಣೆ ಬಯಸಿ ಕಾಂಗ್ರೆಸ್ ಸರಕಾರಕ್ಕೆ ಮತ ಚಲಾಯಿಸಿ ಅಧಿಕಾರಕ್ಕೆ ತಂದಿರುವುದು ಸುಳ್ಳಲ್ಲ. ನೂತನ ಯೋಜನೆಗಳನ್ನು ಜನಪರವಾಗಿ ರೂಪಿಸಲು ಆಗದ, ಮನೆಬಳಕೆಯ ಸಿಲಿಂಡರ್ ಬೆಲೆ ಹೆಚ್ಚಾದಾಗ ಸಿಗುತ್ತಿದ್ದ ಒಂದಷ್ಟು ರಿಯಾಯಿತಿಯನ್ನು ಮೂಗಿಗೆ ತುಪ್ಪ ಸವರಿದಂತೆ ಸವರಿ ಆನಂತರ ನಿಲ್ಲಿಸಿದ್ದು, ಕನಿಷ್ಠ ಬೆಂಬಲ ಬೆಲೆ ನೀಡುವಲ್ಲಿ ವಿಳಂಬ ನಿಲುವು ಹೊಂದಿರುವ ಸರ್ಕಾರವನ್ನು ತೆಗೆದು ನೂತನ ಸರ್ಕಾರಕ್ಕಾಗಿ ಬದಲಾವಣೆ ಬಯಸಿ ಜನರು ಕಾಂಗ್ರೆಸ್ ಪಕ್ಷವನ್ನು ಸ್ಪಷ್ಟ ಬಹುಮತದಲ್ಲಿ ಗೆಲ್ಲಿಸಿದ್ದಾರೆ.

ಈಗ ಇರುವ ಕಾಂಗ್ರೆಸ್ ಸರ್ಕಾರ ಇವೆಲ್ಲಾ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಪರಿಹಾರ ನೀಡಬೇಕಾಗಿದೆ. ಜನರು ಇಟ್ಟಿರುವ ನಂಬಿಕೆಯನ್ನು ಹುಸಿಗೊಳಿಸದಂತೆ ನೋಡಿಕೊಳ್ಳಬೇಕಾಗಿದೆ. ರಾಜ್ಯದಲ್ಲಿ ಆರಂಭವಾಗಿರುವ ಬದಲಾವಣೆಯ ಪರ್ವ ಹೊಸದಾದ ಚೈತನ್ಯ ತಂದು ದೀನ ದಲಿತರ ಮತ್ತು ಶೋಷಿತ ಜನರ ದನಿಯಾಗುವ ಮೂಲಕ ಅಭಿವೃದ್ಧಿಯ ಕಡೆಗೆ ಸಾಗಲಿ ಎಂದು ಮನದುಂಬಿ ಆಶಿಸೋಣ.

–ಎ.ಎಸ್. ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ಜಿ.ಎಚ್.ನಾಯಕರ ಬದುಕು ಇತರ ಸಾಹಿತಿಗಳಿಗೆ ಮಾರ್ಗದರ್ಶನವಾಗಲಿ

ಮಾನ್ಯರೆ,

ಇತ್ತೀಚೆಗೆ ನಿಧನರಾದ ಪ್ರಗತಿಪರ ಚಿಂತಕ, ವಾಗ್ಮಿ, ಜಾತ್ಯತೀತ ನಿಲುವು ಹೊಂದಿದ್ದ ಜಿ.ಎಚ್.ನಾಯಕರು ಯಾವಾಗಲೂ ಹೇಳುತ್ತಿದ್ದ ಒಂದು ಮಾತೆಂದರೆ, ಯಾವುದೇ ಸಾಹಿತಿಗಳು ಪ್ರಶಸ್ತಿಗಳ ಬೆನ್ನು ಹತ್ತಬಾರದು. ಪ್ರಶಸ್ತಿಗಾಗಿ ಯಾವ ರಾಜಕಾರಣಿಗಳ ಮನೆ ಬಾಗಿಲಿಗೂ ಹೋಗಬಾರದು. ಶ್ರೀಯುತರು ಖಡಾಖಂಡಿತ ವಾದಿ, ನಿಷ್ಠೂರವಾದಿ, ಪ್ರಖರ ವಿಮರ್ಶಕ. ಜಿ.ಎಚ್. ನಾಯಕರದು ಸ್ವಾಭಿಮಾನ ಮತ್ತು ನಿಷ್ಠೂರದ ಬದುಕು. ಇದ್ದುದ್ದನ್ನು ಇದ್ದ ಹಾಗೆ ಹೇಳುತ್ತಿದ್ದ, ಯಾರ ಹಂಗಿಗೂ ಒಳಗಾಗದ ಅಪ್ಪಟ ವಿಚಾರವಾದಿ.

ಮೂಲತಃ ಉತ್ತರ ಕನ್ನಡದವರಾದ ಇವರು ಮೈಸೂರಿನಲ್ಲಿ ನೆಲೆಸಿ, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಇಲ್ಲೇ ನಿವೃತ್ತಿ ಹೊಂದಿದ್ದರು.

ಇವರು 'ಪಂಪ' ಪ್ರಶಸ್ತಿ ಸೇರಿದಂತೆ, ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಇವರು ಬರೆದ, 'ಉತ್ತರಾರ್ಧ' ಕೃತಿಗೆ 2014 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಇವರ 'ನಿರಪೇಕ್ಷ' ವಿಮರ್ಶಾ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹತ್ತು ಹಲವು ಪ್ರಶಸ್ತಿಗಳು ಲಭಿಸಿವೆ. ಗೋಕಾಕ್ ಚಳವಳಿಯಲ್ಲಿ ಮುಂಚೂಣಿಯಲ್ಲಿ ಹೋರಾಟ ಮಾಡಿದವರಲ್ಲಿ ಇವರು ಒಬ್ಬರು. ಕನ್ನಡ ಪರ ಹೋರಾಟಗಾರರಿಗೆ ಅಪಾರ ಗೌರವ ನೀಡುತ್ತಿದ್ದರು. ಇವರ ಬದುಕು ಇತರ ಸಾಹಿತಿಗಳಿಗೆ ಮಾರ್ಗದರ್ಶನವಾಗಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ಸಾಂಸ್ಕೃತಿಕ ನಗರಿಗೆ ಮೆಟ್ರೋ ರೈಲು ಬರಲಿ...!

ಮಾನ್ಯರೆ,

ದೇಶದ ಪ್ರಮುಖ ನಗರಗಳಾದ ನವದೆಹಲಿ, ಮುಂಬೈ, ಕೋಲ್ಕತ್ತ, ಹೈದರಾಬಾದ್, ಚೆನ್ನೈ, ಬೆಂಗಳೂರು ಮತ್ತು ಇತ್ಯಾದಿ ನಗರ ಪ್ರದೇಶದಲ್ಲಿ ಗಮನ ಸೆಳೆದಿರುವ ಮೆಟ್ರೋ ರೈಲು ಮಾರ್ಗವನ್ನು ಸಾಂಸ್ಕೃತಿಕ ನಗರಿ ಮೈಸೂರಿಗೆ ಪರಿಚಯಿಸುವುದು ಸೂಕ್ತವೆನಿಸುತ್ತದೆ.

'ನಾಡಹಬ್ಬ' ದಸರಾದಿಂದ ವಿಶ್ವದಾದ್ಯಂತ ಗಮನ ಸೆಳೆದಿರುವ ಮೈಸೂರು ನಗರ ಇತ್ತೀಚಿನ ದಿನಗಳಲ್ಲಿ ಅನೇಕ ಸಾರ್ವಜನಿಕ ವಲಯಗಳಲ್ಲಿ ಅಭಿವೃದ್ಧಿಯತ್ತ ಸಾಗುತ್ತಿದೆ. ಇಲ್ಲಿನ ಜನಸಂಖ್ಯೆಯು ಕೂಡ ಹೆಚ್ಚಾಗುತ್ತಿದೆ. ಮುಂದಿನ ದಿನಗಳಲ್ಲಿ ಮೈಸೂರಿನಲ್ಲಿ ಈಗಾಗಲೇ ಖ್ಯಾತಿ ಪಡೆದಿರುವ ಪ್ರವಾಸಿ ತಾಣಗಳಾದ ಅರಮನೆ, ದಸರಾ ವಸ್ತು ಪ್ರದರ್ಶನ, ಮೃಗಾಲಯ, ರೈಲ್ವೆ ವಸ್ತು ಸಂಗ್ರಹಾಲಯ, ಸೆಂಟ್ ಫಿಲೋಮಿನಾ ಚರ್ಚ್, ಕಾರಂಜಿ ಕೆರೆ, ಕುಕ್ಕರಹಳ್ಳಿಕೆರೆ, ಲಲಿತಮಹಲ್, ಚಾಮುಂಡಿ ಬೆಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವುದುಂಟು. ಇನ್ನುಳಿದಂತೆ ಶಿಕ್ಷಣಕ್ಕೂ ಕೂಡ ದೇಶ – ವಿದೇಶಗಳಿಂದ ಬರುತ್ತಾರೆ. ಅಲ್ಲದೆ ಕಳೆದ ಸುಮಾರು ಹತ್ತು ವರ್ಷಗಳಿಂದ ಮೈಸೂರಿನಲ್ಲಿ ಮನೆಗಳು ಹೆಚ್ಚಾಗುತ್ತಿದ್ದು, ಅದರಂತೆ ಜನಸಂಖ್ಯೆಯು ಕೂಡ ಏರಿಕೆಯಾಗುತ್ತಿದೆ. ಮೈಸೂರು ನಗರ ಪ್ರದೇಶದೊಳಗೆ ವಾಹನ ದಟ್ಟಣೆ ಹೆಚ್ಚಾಗುತ್ತಿರುವುದರಿಂದ ಮುಂದೆ ರಸ್ತೆಗಳಲ್ಲಿ ಟ್ರಾಫಿಕ್ ಸಮಸ್ಯೆಗಳು ಎದುರಾಗಬಹುದು. ಆದ್ದರಿಂದ ಮೈಸೂರು ನಗರಕ್ಕೆ ಬೆಂಗಳೂರಿನಲ್ಲಿರುವಂತೆ ಮೆಟ್ರೋ ರೈಲು ಬಂದರೆ ಸಾರ್ವಜನಿಕರಿಗೆ ಅನುಕೂಲವಾಗಬಹುದು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

'–ಲೈ': ಕಾಲಮಹಿಮೆ

ಮಾನ್ಯರೆ,

ಈಗೆಲ್ಲ ಪರೀಕ್ಷೆಗಳಲ್ಲಿ ಬಾಲೆಯರೆ maleಗೈ, ಒಟ್ಟಿನ ಮೇಲೆ ! (ಪರೀಕ್ಷೆಗಳಲ್ಲೇನು, ಎಲ್ಲಾ ರಂಗಗಳಲ್ಲೂ 'fe–' ವರ್ತಮಾನದಲ್ಲಿ ವರ್ಜ್ಯ?) ಅವರ ಮೇಲ್ಮೆಗಾಗಿ ಅಭಿನಂದನೆಗಳು; ಹುಡುಗರ ಕೀಳ್ಮೆಗಾರಿ – ನಿಂದನೆಗಳು. (ಅಂತೂ ಸೃಷ್ಟಿಯಲ್ಲಿ man ಅಷ್ಟೆ ಎಂದರೆ ಅಪರಿಪೂರ್ಣ; 'ಬಂ–' ಸೇರಬೇಕು!).

ಗಂಧ: "ಯುವತಿ ಮಯವೋ ಸೃಷ್ಟಿ!" ಎಂಬುದು ಕುಮಾರವ್ಯಾಸ ಕವಿಯ ಉದ್ಗಾರ. ಈಗ ಆ ಸೃಷ್ಟಿ ನಾನಾ ಪರಿಮಳಗಳನ್ನು ಬಳಿದುಕೊಂಡು, 'ಯೋಜನಗಂಧಿ' ಯಾಗಿದೆ! ('ಜನಗಂಧಿ' ಎನ್ನೋಣ ಬೇಕಾದರೆ).

ಅಂದ ಹಾಗೆ, ಕಾಮಿನಿ ಎಂದೂ ಎಲ್ಲಿಯೂ ದೊಡ್ಡ ಕೌತುಕ: "ಸ್ತ್ರೀ ರೂಪಮೆ ರೂಪಂ": ಪೂರಕ!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.

ಮುಂದಿನ ರಂಗಾಯಣ ನಿರ್ದೇಶಕರ್‍ಯಾರು...!



ರಂಗಕರ್ಮಿಗಳಲ್ಲಿ ಮಾತ್ರವಲ್ಲ ರಂಗಾಸಕ್ತರಲ್ಲೂ ಸಹಜ ಕುತೂಹಲ



■ ಮೋಹನ್ ಕಾಯಕ

ಹೊಸ ಹೊಸ ರಂಗ ಪ್ರಯೋಗಗಳ ನಡುವೆ ನಾನಾ ವಿವಾದಗಳಿಂದಲೂ ರಾಜ್ಯದ ಗಮನ ಸೆಳೆದ ಮೈಸೂರು ರಂಗಾಯಣದ ಮುಂದಿನ ನಿರ್ದೇಶಕರ್‍ಯಾರು ಎಂಬ ಕುತೂಹಲ ಮೂಡಿದೆ...!

ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲೂ ನಿರಂತರ ಕಾರ್ಯಚಟುವಟಿಕೆಗಳ ಮೂಲಕ ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ರಚಿತ 'ಪರ್ವ' ಕಾದಂಬರಿಯ ಮಹಾ ರಂಗಪ್ರಯೋಗ, ಹಿರಿಯ ಸಾಹಿತಿ ದೇವನೂರು ಮಹದೇವರ 'ಕುಸುಮಬಾಲೆ' ಕಾದಂಬರಿಯ ವಾಚನ ಹಾಗೂ ರಾಜ್ಯದೆಲ್ಲೆಡೆ ಬರೋಬ್ಬರಿ 56 ಪ್ರದರ್ಶನಗಳ ಕಂಡ 'ಟಿಪ್ಪು ನಿಜಕನಸುಗಳು' ಸೇರಿದಂತೆ 22 ನಾಟಕಗಳ ದಾಖಲೆ ಪ್ರದರ್ಶನದ ಹಿನ್ನೆಲೆಯಲ್ಲಿ ಈಗ ರಂಗಾಯಣದ ಮೇಲೆ ಎಲ್ಲರ ದೃಷ್ಟಿ ಹರಿದಿದೆ.

ರಾಜ್ಯದಲ್ಲಿ ನೂತನ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಆರ್ಥಿಕ ಸುಸ್ಥಿತಿಯಲ್ಲಿರುವ ಮೈಸೂರು ರಂಗಾಯಣದ ನಿರ್ದೇಶಕರು ಯಾರಾಗಲಿದ್ದಾರೆ. ಸರ್ಕಾರ ಯಾರನ್ನು ನೇಮಕ ಮಾಡಬಹುದು ಎಂಬ ಚರ್ಚೆಗಳು ಈಗ ಆರಂಭವಾಗಿವೆ. ಮೈಸೂರು ಜಿಲ್ಲೆಯಲ್ಲಿ ಹಿರಿಯ ಕಲಾವಿದರಿಗೆ ಅವಕಾಶ ಸಿಗಲಿದೆಯೇ ಇಲ್ಲ ಬೇರೆ ಜಿಲ್ಲೆಯ ಕಲಾವಿದರಿಗೆ ಮಣೆ ಹಾಕುತ್ತಾರೋ ಕಾದು ನೋಡಬೇಕಿದೆ.

ರಂಗಾಯಣಕ್ಕೆ ಹಸಿರು ಸಿಂಗಾರ

ಕಳೆದ ಮೂರು ವರ್ಷಗಳಲ್ಲಿ ಮೈಸೂರು ರಂಗಾಯಣದಲ್ಲಿ ಹಲವಾರು ಬದಲಾವಣೆಗಳಾಗಿದ್ದು, ಹೊಸ ರೂಪದೊಂದಿಗೆ ಕಲಾಭಿಮಾನಿಗಳನ್ನು ಸೆಳೆಯುತ್ತಿದೆ. ರಂಗಾಯಣದ ಆವರಣ ಮೊದಲಿಗಿಂತಲೂ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದು, ಹಕ್ಕಿಗಳ ಚಿಲಿಪಿಲಿ ನಾದ ಕೇಳುವಂತಾಗಿದೆ. ಹಲಸು, ಸೀಬೆ, ಮಾವು, ಬೆಣ್ಣೆ ಹಣ್ಣು ಸೇರಿದಂತೆ ನೂರಾರು ಬಗೆಯ ಹಣ್ಣಿನ ಹಾಗೂ ಪರಿಮಳ ಬೀರುವ ಹೂವಿನ ಗಿಡಗಳು ಕಣ್ಮನ ಸೆಳೆಯುತ್ತಿವೆ. ಇಲ್ಲಿನ ಸಿಬ್ಬಂದಿ ಹೇಳುವಂತೆ ರಂಗಾಯಣ ಆವರಣದಲ್ಲಿ ಸುಮಾರು 300 ಗಿಡಗಳನ್ನು ನೆಟ್ಟು ಪೋಷಣೆ ಮಾಡಲಾಗಿದೆ ಹಾಗೆಯೇ ಕಲಾಮಂದಿರದ ಎದುರು 200 ಗಿಡಗಳನ್ನು ನೆಡಲಾಗಿದೆ. ಮೊದಲಿಗಿಂತಲೂ ರಂಗಾಯಣ ಅತ್ಯಾಕರ್ಷಕವಾಗಿ ಕಾಣುತ್ತಿದೆ. ಒಂದೇ ಮರವಿದ್ದ ವನರಂಗದಲ್ಲಿ 10ಕ್ಕೂ ಹೆಚ್ಚು ಗಿಡಗಳನ್ನು ನೆಡಲಾಗಿದ್ದು, ಮರಗಳಾಗುತ್ತಿವೆ. ಸಂಪೂರ್ಣ ರಂಗಾಯಣವೇ ಹಸಿರು ಗಿಡ–ಮರಗಳಿಂದ ಕಂಗೊಳಿಸುತ್ತಿದೆ.

ಬಿ.ವಿ.ಕಾರಂತರಿಂದ ಸ್ವಾಗತ

ರಂಗಭೀಷ್ಮ ಬಿ.ವಿ. ಕಾರಂತರೇ ರಂಗಾಯಣಕ್ಕೆ ರಂಗ ಪ್ರೇಮಿಗಳನ್ನು ಸ್ವಾಗತ ಕೋರುವಂತಿದೆ. ರಂಗಾಯಣದ ಮುಖ್ಯ ದ್ವಾರದ ಎದುರು ಆಗಮಿಸುತ್ತಿದ್ದಂತೆ ಬಿ.ವಿ. ಕಾರಂತರ ಪುತ್ಥಳಿ ಎದುರುಗೊಳ್ಳಲಿದ್ದು, ಕಲಾಪ್ರೇಕ್ಷಕರನ್ನು ಕೈಬೀಸಿ ಕರೆಯುವಂತಿದೆ. ಲಕ್ಷಾಂತರ ರೂ., ವೆಚ್ಚದಲ್ಲಿ ಪುತ್ಥಳಿ ನಿರ್ಮಾಣ ಮಾಡಿದ್ದು, ಮೈಸೂರು ರಂಗಾಯಣದಲ್ಲಿ ಬಿ.ವಿ. ಕಾರಂತರನ್ನು ಚಿರಸ್ಥಾಯಿಯನ್ನಾಗಿಸಲಾಗಿದೆ. ಹಾಗೆಯೇ ಸುಮಾರು 10 ಲಕ್ಷ ರೂ.ವೆಚ್ಚದಲ್ಲಿ ಬಿ.ವಿ. ಕಾರಂತರ ರಂಗಚಾವಡಿ ನಿರ್ಮಾಣ ಮಾಡಿದ್ದು, ತರಬೇತಿ ಶಿಬಿರಗಳ ಜೊತೆಗೆ ನಾಟಕಗಳ ಪ್ರದರ್ಶನಕ್ಕೆ ಹೆಚ್ಚಿನ ವೇದಿಕೆ ಕಲ್ಪಿಸಿದಂತಾಗಿದೆ.

ಶಿಲ್ಪ ಕಲಾಕೃತಿಗಳ ಆಕರ್ಷಣೆ

ಬಿ.ವಿ.ಕಾರಂತರ ಪುತ್ಥಳಿ ಸುತ್ತಲೂ ಆವರಿಸಿರುವ ಗಿಡ–ಮರಗಳ ನಡುವೆ ಶಿಲ್ಪ ಕಲಾಕೃತಿಗಳು ಮನ ಸೆಳೆಯುತ್ತಿವೆ. ಕಲಾವಿದರಿಂದ ನಡೆದ ವರ್ಕ್‌ಶಾಪ್‌ನಲ್ಲಿ ಹತ್ತಾರು ಶಿಲ್ಪಕಲಾಕೃತಿಗಳು ರೂಪುಗೊಂಡಿವೆ. ರಂಗಾಯಣಕ್ಕೆ ಭೇಟಿ ನೀಡುವವರ ಸೆಲ್ಫಿಸ್ಪಾಟ್‌ಗಳಾಗಿ ಪರಿವರ್ತನೆಯಾಗಿವೆ. ಹಾಗೆಯೇ ಭೂಮಿಗೀತ ವೇದಿಕೆಯ ಆಧುನೀಕರಣ, ಗೋಡೌನ್ ನಿರ್ಮಾಣವಾಗಿದೆ. ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ವೇಳೆ ಅಥವಾ ಇನ್ನಿತರೆ ನಾಟಕ ಉತ್ಸವಗಳಲ್ಲಿ ಕಲಾವಿದರ ಅಭ್ಯಾಸ ಹಾಗೂ ಪ್ರದರ್ಶನಕ್ಕೆ ರಂಗಾಯಣದಲ್ಲಿ ನಾಲ್ಕು ವೇದಿಕೆಗಳು ಸಜ್ಜಾಗಿವೆ.

21 ನಾಟಕಗಳ ನಿರ್ಮಾಣ

ಕಳೆದ ಮೂರು ವರ್ಷಗಳಲ್ಲಿ ರಂಗಾಯಣದಲ್ಲಿ 'ಟ್ವೆಲ್ಸ್‌ನೈಟ್', 'ಡೋರ್ ನಂ.8', 'ಸೀತಾ ಸ್ವಯಂವರ', 'ಕೊಡೋದಿಲ್ಲ ಬಿಡೋದಿಲ್ಲ', 'ಮ್ಯಾಕ್‌ಬೆತ್', 'ಪರ್ವ', 'ಮೂಕನ ಮಕ್ಕಳು(ಮರುಸೃಷ್ಟಿ)', 'ಕದಡಿದ ನೀರು', 'ತಾಮ್ರಪತ್ರ', 'ಸೂತ್ರಧಾರ', 'ಚಂದ್ರಗಿರಿಯ ತೀರದಲ್ಲಿ', 'ಚಿತ್ರಪಟ', 'ಕೃಷ್ಣೇಗೌಡನ ಆನೆ(ಮರುಸೃಷ್ಟಿ)', 'ಪ್ರಮೀಳಾರ್ಜುನಿಯಂ', 'ಮಿಸ್ಟರ್ ಬೋಗೀಸ್', 'ವಾಸಾಂಸಿ ಜೀರ್ಣಾನಿ', 'ಬೆಕ್ಕು–ಬಾವಿ', 'ಮಾನವರಾಗೋಣ(ಬೀದಿ ನಾಟಕ)', 'ಹಲಗಲಿ ಸಮರ' ಹಾಗೂ 'ಟಿಪ್ಪು ನಿಜಕನಸುಗಳು' ನಾಟಕ ಸೇರಿದಂತೆ 'ರಾಗ ರಂಗಾಯಣ' ವಿಶೇಷ ಸಂಗೀತ ಕಾರ್ಯಕ್ರಮವನ್ನು ನೀಡಲಾಯಿತು. ಹಾಗೆಯೇ 'ಗಾಂಧಿಪಥ', 'ತಾಯಿ' ಮತ್ತು 'ರಾಷ್ಟ್ರೀಯತೆ' ಪರಿಕಲ್ಪನೆಯಡಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವಗಳು ಯಶಸ್ವಿಯಾಗಿವೆ.

ನೂರಾರು ಹೊಸ ಕಲಾವಿದರು

ರಂಗಾಯಣದಲ್ಲಿ ನೂರಾರು ಹೊಸ ಕಲಾವಿದರಿಗೆ ಅವಕಾಶ ನೀಡಿ, ನೆಲೆ ಕಲ್ಪಿಸಲಾಗಿದೆ. ಭಾರತೀಯ ರಂಗ ಶಿಕ್ಷಣ ಶಾಲೆಯಲ್ಲಿ ಹಲವು ವಿದ್ಯಾರ್ಥಿಗಳು ಅಭ್ಯಾಸ ನಡೆಸಿದರೆ, ಸುಬ್ಬಯ್ಯನಾಯ್ಡು ಹಾಗೂ ನಾಗರತ್ನಮ್ಮ ಅವರ ಹೆಸರಿನಲ್ಲಿ ನಡೆದ ರಂಗ ತರಬೇತಿ ಶಿಬಿರಗಳ ಮೂಲಕ ನೂರಾರು ಹೊಸ ಕಲಾವಿದರಿಗೆ ಅವಕಾಶ ಮಾಡಿಕೊಡಲಾಗಿದೆ.

ಭಾರೀ ಜನಮನ್ನಣೆ ಗಳಿಸಿದ 2 ನಾಟಕಗಳು

ಮೂರು ವರ್ಷದ ಅವಧಿಯಲ್ಲಿ 20ಕ್ಕೂ ಹೆಚ್ಚು ನಾಟಕಗಳು ರಂಗ ರಚನೆಯಾಗಿ ಪ್ರದರ್ಶನವಾಗಿದ್ದರೂ ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರ 'ಪರ್ವ' ಕಾದಂಬರಿಯ ಮಹಾ ರಂಗಪ್ರಯೋಗ ಹಾಗೂ 'ಟಿಪ್ಪು ನಿಜಕನಸುಗಳು' ಅಧಿಕ ಪ್ರದರ್ಶನದೊಂದಿಗೆ ಭಾರೀ ಜನಮನ್ನಣೆ ಗಳಿಸಿದವು. 'ಪರ್ವ' 30ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡರೆ, 'ಟಿಪ್ಪು ನಿಜಕನಸುಗಳು' 56 ಭರ್ತಿ ಪ್ರದರ್ಶನ ಕಾಣುವ ಮೂಲಕ ರಂಗಾಸಕ್ತರ ಮನಗೆದ್ದಿತು.

ರಂಗಸಮಾಜ ಸ್ಥಾಪನೆಯಾಗಬೇಕು...


ರಾಜ್ಯದಲ್ಲಿರುವ ಎಲ್ಲಾ ರಂಗಾಯಣಗಳಿಗೆ ನಿರ್ದೇಶಕರುಗಳನ್ನು ಆಯ್ಕೆ ಮಾಡುವುದು ರಂಗ ಸಮಾಜ. ಈ ನಿಟ್ಟಿನಲ್ಲಿ ಮೊದಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ 7 ಜನ ಸದಸ್ಯರ ರಂಗಸಮಾಜ ಸ್ಥಾಪನೆಯಾಗಬೇಕು. ಬಳಿಕ ರಂಗಸಮಾಜದ ಸದಸ್ಯರ ಶಿಫಾರಸ್ಸಿನ ಮೇರೆಗೆ ರಂಗಾಯಣ ನಿರ್ದೇಶಕರ ನೇಮಕವಾಗಲಿದೆ. ಇಷ್ಟೆಲ್ಲಾ ಪ್ರಕ್ರಿಯೆಗಳು ಇನ್ನೊಂದು ತಿಂಗಳಿನಲ್ಲಿ ಮುಕ್ತಾಯಗೊಳ್ಳುವ ಸಾಧ್ಯತೆ ಇದ್ದು, ಪ್ರತಿಷ್ಠಿತ ಮೈಸೂರು ರಂಗಾಯಣ 11ನೇ ನಿರ್ದೇಶಕರಾಗಿ ಯಾರು ಆಯ್ಕೆಯಾಗಲಿದ್ದಾರೆ ಎಂಬುದು ಈಗ ಕುತೂಹಲ ಕೆರಳಿಸಿದೆ.

ರಂಗಾಯಣ ನಿರ್ದೇಶಕರು

ಬಿ.ವಿ.ಕಾರಂತ(14.1.1989–30.11.1995),
ಸಿ.ಬಸವಲಿಂಗಯ್ಯ(13.2.1996–8.4.2001),
ಪ್ರಸನ್ನ(9.4.2001–17.11.2003)
ಚಿದಂಬರ ರಾವ್ ಜಂಬೆ (4.2.2004–10.1.2008)
ಬಿ.ಜಯಶ್ರೀ (23.6.2009–24.10.2009)
ಲಿಂಗದೇವರು ಹಳೆಮನೆ(25.5.2010–7.6.2011)
ಡಾ.ಬಿ.ವಿ.ರಾಜಾರಾಂ(5.9.2011–7.6.2011),
ಹೆಚ್.ಜನಾರ್ಧನ್(ಜನ್ನಿ)(2.10.2013–29.9.2016)
ಭಾಗೀರಥಿ ಬಾಯಿ ಕದಂ (5.7.2017–14.9.2019)
ಅಡ್ಡಂಡ ಸಿ.ಕಾರ್ಯಪ್ಪ(31.12.2019– 14.5.2023)

ಪರಿಸರಕ್ಕೆ ಆದ್ಯತೆ ಕೊಡಿ, ರಂಗಾಯಣವನ್ನು ಇನ್ನಷ್ಟು ಸಂಪದ್ಭರಿತವಾಗಿಸಿ...


ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮನವಿ



ರಾಜ್ಯದ ಮನೆ ಮಾತಾಗಿರುವ ಮೈಸೂರು ರಂಗಾಯಣದಲ್ಲಿ ನಾನು ನೆಟ್ಟಿರುವ ಗಿಡಗಳು ಈಗ ಮರವಾಗಿದ್ದು, ಅವುಗಳನ್ನು ಕಡಿಯಬೇಡಿ. ಸ್ವಚ್ಛ ಹಾಗೂ ಹಸಿರು ಪರಿಸರಕ್ಕೆ ಆದ್ಯತೆ ಕೊಡಿ. ರಂಗಾಯಣವನ್ನು ಇನ್ನಷ್ಟು ಸಂಪತ್ಭರಿತವಾಗಿಸಿ ಎಂದು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮನವಿ ಮಾಡಿದ್ದಾರೆ. 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಅವರು, ನಾನು ರಂಗಾಯಣ ನಿರ್ದೇಶಕನಾಗಿ ನಿಶ್ಚಿತ ಯೋಜನೆಗಳನ್ನು ಇಟ್ಟುಕೊಂಡೇ ಕಾರ್ಯಾರಂಭ ಮಾಡಿದೆ. 2 ವರ್ಷದವರೆಗೆ ನಾನು ನಾಟಕ ನಿರ್ದೇಶನ ಮಾಡದೇ ಹೊರಗಿನ ಹಾಗೂ ಶ್ರೇಷ್ಠ ಕಲಾವಿದರಿಗೆ ಅವಕಾಶ ಮಾಡಿಕೊಡಲಾಯಿತು. ರಂಗ ಶಿಕ್ಷಣ ಶಾಲೆಯ ಅಭಿವೃದ್ಧಿ ಹಾಗೂ ಸರ್ಕಾರದಿಂದ ಹೆಚ್ಚಿನ ಅನುದಾನ ತರುವುದು ನನ್ನ ಮುಖ್ಯ ಉದ್ದೇಶವಾಗಿತ್ತು. ಅದರಂತೆಯೇ ಕಾರ್ಯನಿರ್ವಹಿಸಿದ್ದೇನೆ ಎಂದರು.

ಪರಿಸರ ಮತ್ತು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿ, ಒಂದೇ ಒಂದು ಪ್ಲಾಸ್ಟಿಕ್ ಚೂರು ಸೋಕದಂತೆ ನೋಡಿಕೊಂಡಿದ್ದೇನೆ. ಬಿ.ವಿ.ಕಾರಂತರ ಅವಧಿಯಲ್ಲಿದ್ದ ಗಿಡ–ಮರಗಳ ಸಂಖ್ಯೆ ಕಡಿಮೆಯಾಗಿತ್ತು. ಇಲ್ಲಿಯವರೆಗೆ ಗಿಡಗಳನ್ನು ನೆಡುವ ಪುನಾವರ್ತನೆಯ ಕೆಲಸ ಆಗಿರಲಿಲ್ಲ. ಅದನ್ನು ಗಮನಿಸಿ ನೂರಾರು ಗಿಡಗಳನ್ನು ನೆಟ್ಟು ಪೋಷಣೆ ಮಾಡಿದ್ದರಿಂದಾಗಿ ಇಂದು ಇಡೀ ರಂಗಾಯಣ ಹಚ್ಚ ಹಸಿರಿನಿಂದ ಕಂಗೊಳಿಸುವಂತಾಗಿದೆ. ಬಗೆ ಬಗೆಯ ಹಣ್ಣುಗಳಿವೆ ಎಂದು ಸ್ಮರಿಸಿದರು.

ಕೊರೊನಾ ಲಾಕ್‌ಡೌನ್ ಹಾಗೂ ಚುನಾವಣೆಯ ನೀತಿ ಸಂಹಿತೆಯಿಂದಾಗಿ ರಂಗ ಚಟುವಟಿಕೆಗಳಿಗೆ ತೊಡಕಾದರೂ ಇದರ ನಡುವೆಯೇ ಹೊಸ ನಾಟಕಗಳನ್ನು ನಿರ್ಮಾಣ ಮಾಡುವ, ರಂಗಭೂಮಿ ಆಸಕ್ತರನ್ನು ಕರೆತರುವ ಕೆಲಸ ಮಾಡಿದ್ದೇನೆ. ಹವ್ಯಾಸಿ ಕಲಾವಿದರ ಪ್ರೋತ್ಸಾಹಕ್ಕೆ ವರ್ಷಕ್ಕೆ 2 ರಂಗ ತರಬೇತಿ ಶಿಬಿರ, ಕಲಾವಿದರ ಆರ್ಥಿಕ ಸ್ಥಿತಿಗೆ ತೊಂದರೆಯಾಗದಂತೆ ಕನಿಷ್ಠ 20 ಸಾವಿರ ಮಾಸಿಕ ವೇತನ ನೀಡುವ ಕೆಲಸದ ಜೊತೆಗೆ ಖರ್ಚನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ, ರಾಜೀನಾಮೆ ನೀಡುವಾಗ ಸುಮಾರು 4.40 ಕೋಟಿ ರೂ. ಉಳಿಸಿ ಬಂದಿದ್ದೇನೆ.



ಸರ್ಕಾರದೊಂದಿಗೆ ಸದಾ ಸಂಪರ್ಕದಲ್ಲಿದ್ದು, ಶಾಸಕರ ಅನುದಾನದ ಜೊತೆಗೆ ಬಜೆಟ್‌ನಲ್ಲಿಯೂ ಅನುದಾನ ದೊರೆಯುವಂತೆ ಶ್ರಮಿಸಿದ್ದೇನೆ. ಈ ವೇಳೆ ನಾನು ರಾಜಕೀಯ ಮಾಡುತ್ತಿದ್ದೇನೆ ಎಂದು ಹಲವರು ದೂರಿದರು. ಅದು ನಿಜವೇ ಆದರೆ ಅದು ರಂಗಾಯಣ ಕೆಲಸಕ್ಕಾಗಿಯೇ ಹೊರತು ನನ್ನ ವೈಯಕ್ತಿಕ ವಿಷಯಕ್ಕಲ್ಲ ಎಂಬುದನ್ನು ಮೈಸೂರಿನ ಜನತೆ ಅರ್ಥಮಾಡಿಕೊಂಡಿದ್ದರು.

ರಾಷ್ಟ್ರ ಚಿಂತನೆಯುಳ್ಳ ಮೂರು ಬಹರೂಪಿ ರಾಷ್ಟ್ರೀಯ ರಂಗೋತ್ಸವ, ಸಂವಿಧಾನ ಕುರಿತು ಮೊಟ್ಟಮೊದಲು 'ಸೂತ್ರಧಾರ' ನಾಟಕ ನಿರ್ಮಾಣ ಮಾಡಿಸಿದ್ದೇನೆ. ರಂಗಾಯಣದ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿಯೂ ಶೇ.70ರಷ್ಟು ಪರಿಶಿಷ್ಟ ಜಾತಿ ಹಾಗೂ ಪಂಗಡ ಕಲಾವಿದರು ಇರುವಂತೆ ನೋಡಿಕೊಂಡಿದ್ದೇನೆ. ಎಲ್ಲಿಯೂ ಸ್ವಜನ ಪಕ್ಷಪಾತ ಮಾಡಿಲ್ಲ ಎಂದರು. ಮೂರು ವರ್ಷಗಳ ಕಾಲ ನನ್ನ ಪರಿಕಲ್ಪನೆಯಲ್ಲಿ ರಂಗಾಯಣ ಮುನ್ನಡೆಸಿದ್ದೇನೆ. ಒಳಗೊಂದು–ಹೊರಗೊಂದು ಮಾಡದೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಬಂದವನು ಎಂದು ಹೇಳಿಕೊಂಡೇ ಕೆಲಸ ಮಾಡಿದ್ದೇನೆ. ನಾನು ಕದ್ದುಮುಚ್ಚಿ ಏನೂ ಮಾಡಿಲ್ಲ. ಆದ್ದರಿಂದ ಮುಂದೆ ನಿರ್ದೇಶಕರಾಗಿ ಬರುವವರಲ್ಲಿ ನಾನು ಮಾಡುವ ಮನವಿ ಇಷ್ಟೇ. ನೆಟ್ಟು ಬೆಳೆಸಿರುವ ಗಿಡ–ಮರಗಳನ್ನು ಕಡಿಯಬೇಡಿ. ಸ್ವಚ್ಛ ಹಾಗೂ ಹಸಿರು ಪರಿಸರಕ್ಕೆ ಆದ್ಯತೆ ಕೊಡಿ. ನಾಟಕಗಳು ನಿರಂತರವಾಗಿ ನಡೆಯುತ್ತಿರುತ್ತವೆ. ನಾಟಕದ ವಿಚಾರವೇ ಆಗಲಿ, ಅತಿಥಿಗಳ ಆಹ್ವಾನಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ನಾನು ಮಾತನಾಡುವುದೂ ಇಲ್ಲ. ರಂಗಾಯಣ ಗೇಟಿನ ಬಳಿ ಬಂದು ಧರಣಿ ಮಾಡುವುದೂ ಇಲ್ಲ. ಅಲ್ಲದೆ ನಾನು ಮಾಡಿದ್ದು ಎಂದು ಎಲ್ಲಿಯೂ ಬೋರ್ಡ್ ಹಾಕಿಲ್ಲ. ರಂಗಾಯಣಕ್ಕೆ ಸರ್ಕಾರ ಅನುದಾನ ನೀಡದಿದ್ದರೂ ಒಂದು ವರ್ಷ ಕಾಲ ಯಾವುದೇ ತೊಂದರೆ ಇಲ್ಲದೆ ನಡೆಸಬಹುದಾದಷ್ಟು ಹಣವಿದೆ. ಅದಕ್ಕಾಗಿ ದುಡಿದಿದ್ದೇನೆ, ಕಷ್ಟಪಟ್ಟಿದ್ದೇನೆ. ದಯವಿಟ್ಟು ಇದೆಲ್ಲವನ್ನೂ ನಾಶ ಮಾಡದೆ. ಮೈಸೂರು ರಂಗಾಯಣ ಇನ್ನಷ್ಟು ಸಂಪದ್ಭರಿತವನ್ನಾಗಿಸಿ ಎಂದು ಮನವಿ ಮಾಡಿದ್ದಾರೆ.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಂಡೆ ಮಹಾಂಕಾಳಿ ಸನ್ನಿಧಿಯಲ್ಲಿ ಶಿವಣ್ಣನ ‘ಭೈರತಿ ರಣಗಲ್’ ಆರಂಭ



ಗೀತಾ ಶಿವರಾಜಕುಮಾರ್ ಅವರು ನಿರ್ಮಿಸುತ್ತಿರುವ, ನರ್ತನ್ ನಿರ್ದೇಶನದ, ಶಿವರಾಜಕುಮಾರ್ ನಾಯಕರಾಗಿ ನಟಿಸುತ್ತಿರುವ "ಭೈರತಿ ರಣಗಲ್" ಚಿತ್ರದ ಮುಹೂರ್ತ ಗವಿಪುರದ ಬಂಡೆ ಮಹಾಂಕಾಳಿ ದೇವಸ್ಥಾನದಲ್ಲಿ ನೆರವೇರಿತು. "ಮಫ್ತಿ" ಚಿತ್ರದಲ್ಲಿ ಶಿವರಾಜಕುಮಾರ್ ನಿರ್ವಹಿಸಿದ ಭೈರತಿ ರಣಗಲ್ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು ಈ ಚಿತ್ರದ ಕಥೆ ಮಾಡಲಾಗಿದೆ. ಇದು "ಮಫ್ತಿ" ಚಿತ್ರದ ಪ್ರೀಕ್ವೆಲ್. "ಮಫ್ತಿ" ಚಿತ್ರದಲ್ಲಿ ಮಧ್ಯಂತರದ ನಂತರ ಈ ಪಾತ್ರ ಬರುತ್ತದೆ. ಇಲ್ಲಿ ಭೈರತಿ ರಣಗಲ್ ಆಗಿದ್ದು ಹೇಗೆ ಎಂದು ತಿಳಿಯುತ್ತದೆ. ರವಿ ಬಸ್ರೂರ್ ಸಂಗೀತ ನಿರ್ದೇಶನ, ನವೀನ್ ಕುಮಾರ್ ಛಾಯಾಗ್ರಹಣ ಹಾಗೂ ಶಿವಕುಮಾರ್ ಕಲಾ ನಿರ್ದೇಶನ ಈ ಚಿತ್ರಕ್ಕಿದೆ ಎಂದು ಚಿತ್ರದ ನಿರ್ದೇಶಕ ನರ್ತನ್ ತಿಳಿಸಿದರು.

"ಮಫ್ತಿ" ಚಿತ್ರದ ಭೈರತಿ ರಣಗಲ್ ನನಗೆ ಇಷ್ಟವಾದ ಪಾತ್ರ. ಈ ಚಿತ್ರವನ್ನು ನಮ್ಮ ಸಂಸ್ಥೆಯಿಂದ ನಿರ್ಮಾಣ ಮಾಡುತ್ತಿದ್ದೇವೆ. ಚಿತ್ರದ ಪ್ರಾರಂಭಕ್ಕೆ ಸಮಯ ಈಗ ಕೂಡಿ ಬಂದಿದೆ. "ಮಫ್ತಿ" ಬಂದು ಆರು ವರ್ಷಗಳಾಗಿದೆ. ಈಗಲೂ ನಾನು ಹಾಗೆ ಇದ್ದೀನಿ. ಹಾಗಾಗಿ ಈ ಪಾತ್ರ ಮಾಡಲು ಅನುಕೂಲವಾಗುತ್ತದೆ. ಪ್ರೀಕ್ವೆಲ್ ಆಗಿರುವುದರಿಂದ ಡಿಫರೆಂಟ್ ಲುಕ್ ನಲ್ಲಿ ಕಾಣಿಸಿಕೊಳ್ಳುತ್ತೇನೆ. ನರ್ತನ್ ಕಥೆ ಚೆನ್ನಾಗಿ ಮಾಡಿಕೊಂಡಿದ್ದಾರೆ ಎಂದು ಚಿತ್ರದ ನಾಯಕ ಶಿವರಾಜಕುಮಾರ್ ಹೇಳಿದರು.

ಗೀತಾ ಶಿವರಾಜ್ ಕುಮಾರ್ ಮಾತನಾಡಿ, "ಭೈರತಿ ರಣಗಲ್" ಚಿತ್ರವನ್ನು ನಮ್ಮ ಗೀತಾ ಪಿಕ್ಚರ್ಸ್ ಮೂಲಕ ನಿರ್ಮಾಣ ಮಾಡಬೇಕೆಂದು ಮೊದಲೆ ನಿರ್ಧಾರವಾಗಿತ್ತು. ಈಗ ಚಿತ್ರ ಆರಂಭವಾಗಿದೆ. ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು. ನಿವೇದಿತಾ ಶಿವರಾಜಕುಮಾರ್, ಕೆ.ಪಿ.ಶ್ರೀಕಾಂತ್, ಛಾಯಾಗ್ರಹಕ ನವೀನ್ ಕುಮಾರ್ ಹಾಗೂ ಕಲಾ ನಿರ್ದೇಶಕ ಶಿವಕುಮಾರ್ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಪಾನ್ ಇಂಡಿಯಾ ‘ಅಜಾಗ್ರತ’ ಚಿತ್ರದಲ್ಲಿ ರಾಧಿಕಾ ಕುಮಾರಸ್ವಾಮಿ

ನಟಿ, ನಿರ್ಮಾಪಕಿ ರಾಧಿಕಾ ಕುಮಾರಸ್ವಾಮಿ ಅವರು ನಾಯಕಿಯಾಗಿ ನಟಿಸುತ್ತಿರುವ ಎಂ.ಶಶಿಧರ್ ನಿರ್ದೇಶನದ "ಅಜಾಗ್ರತ" ಚಿತ್ರದ ಮುಹೂರ್ತಇತ್ತೀಚೆಗೆ ಹೈದರಾಬಾದ್‌ನ ರಮಾನಾಯ್ಡು ಸ್ಟುಡಿಯೋದಲ್ಲಿ ನೆರವೇರಿತು. ತೆಲುಗು ಚಿತ್ರರಂಗದ ಖ್ಯಾತ ನಿರ್ಮಾಪಕ ಎ.ಎಂ.ರತ್ನಂ ಈ ಚಿತ್ರದ ಪ್ರಥಮ ಸನ್ನಿವೇಶಕ್ಕೆ ಆರಂಭ ಫಲಕ ತೋರಿದರು. ಹೆಸರಾಂತ ವಿತರಕ ಟ್ಯಾಗೋರ್ ಮಧು ಕ್ಯಾಮೆರಾ ಚಾಲನೆ ಮಾಡಿದರು. ಚಿತ್ರರಂಗದ ಹಲವು ಗಣ್ಯರು ಈ ಮುಹೂರ್ತ ಸಮಾರಂಭಕ್ಕೆ ಆಗಮಿಸಿ, ಶುಭ ಕೋರಿದರು.

ಬಾಲಿವುಡ್ ಖ್ಯಾತನಟ ಶ್ರೇಯಸ್ ತಲ್ಪಾಡೆ ಈ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದು, ರಾಧಿಕಾ ಕುಮಾರಸ್ವಾಮಿ ನಾಯಕಿ ಪಾತ್ರಕ್ಕೆ ಬಣ್ಣ ಹಚ್ಚಲಿದ್ದಾರೆ. ರಾವ್ ರಮೇಶ್, ಸುನೀಲ್, ಆದಿತ್ಯ ಮೆನನ್, ರಾಘವೇಂದ್ರ ಶ್ರವಣ್, ದೇವರಾಜ್, ಜಯಪ್ರಕಾಶ್, ವಿನಯಾಪ್ರಸಾದ್ ಇತರರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ತೆಲುಗು, ಕನ್ನಡ ಸೇರಿದಂತೆ ಏಳು ಭಾಷೆಗಳಲ್ಲಿ ಅಜಾಗ್ರತ ಚಿತ್ರವು ನಿರ್ಮಾಣವಾಗುತ್ತಿದೆ. ರಾಧಿಕಾ ಸಹೋದರ ರವಿರಾಜ್ ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಎಂ.ಶಶಿಧರ್ ಅವರ ನಿರ್ದೇಶನವಿರುವ ಈ ಚಿತ್ರಕ್ಕೆ ಸಂದೀಪ್ ವಲ್ಲೂರಿ ಅವರ ಛಾಯಾಗ್ರಹಣ, ಶ್ರೀಹರಿ ಅವರ ಸಂಗೀತ ನಿರ್ದೇಶನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನವಿದೆ. ಏಳು ಭಾಷೆಗಳಲ್ಲಿ ಮೂಡಿಬರಲಿರುವ ಈ ಚಿತ್ರವನ್ನು ಬೇರೆ ಭಾಷೆಗೆ ಡಬ್ ಮಾಡದೆ, ಆಯಾ ಭಾಷೆಗಳಲ್ಲಿ ಪ್ರತ್ಯೇಕವಾಗಿ ಚಿತ್ರೀಕರಣ ನಡೆಸಲಾಗುತ್ತಿದೆ,

‘ರಾಧಾ ಸರ್ಚಿಂಗ್ ರಮಣ ಮಿಸ್ಸಿಂಗ್’ ಇಂದು ತೆರೆಗೆ



ಕನ್ನಡದಲ್ಲಿ ಈಗ ಕಂಟೆಂಟ್ ಸಿನಿಮಾಗಳೇ ಹೆಚ್ಚಾಗಿ ಸೌಂಡ್ ಮಾಡುತ್ತಿವೆ. ಅಂತಹ ಮತ್ತೊಂದು ವಿಭಿನ್ನ ಪ್ರೇಮ ಕಥಾಹಂದರ ಹೊಂದಿರುವ ಚಿತ್ರ "ರಾಧಾ ಸರ್ಚಿಂಗ್ ರಮಣ ಮಿಸ್ಸಿಂಗ್" ಇಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಕನ್ನಡದಲ್ಲಿ ಸಾಕಷ್ಟು ಪ್ರೇಮಕಥೆಗಳು ಬಂದಿವೆ. ರಾಧಾ-ರಮಣ ಇಬ್ಬರು ಪ್ರೇಮಿಗಳು. ಒಬ್ಬರನೊಬ್ಬರು ಬಿಟ್ಟಿರದಷ್ಟು. ಕಾರಣಾಂತರದಿಂದ ತಪ್ಪಿಸಿಕೊಂಡಿರುವ ರಮಣನನ್ನು ರಾಧಾ ಹುಡುಕುವುದೇ ಚಿತ್ರದ ಪ್ರಮುಖ ಕಥಾಹಂದರ. ಸಾನ್ವಿ ಪಿಕ್ಚರ್ಸ್ ಅಂಡ್ ಅನಿಮೇಷನ್ಸ್ ಲಾಂಛನದಲ್ಲಿ ಅನಿವಾಸಿಗಳಾದ ಯಶಸ್ವಿ ಶಂಕರ್ ಹಾಗೂ ಸವಿತಾ ಯಶಸ್ವಿ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ತನ್ನ ಗೆಳೆಯನ ಜೀವನದಲ್ಲಿ ನಡೆದ ನೈಜ ಘಟನೆಯೊಂದನ್ನು ಇಟ್ಟುಕೊಂಡು ನಿರ್ದೇಶಕ ಎಂ.ಎನ್ ಶ್ರೀಕಾಂತ್ ಅವರು ಈ ಚಿತ್ರವನ್ನು ಮಾಡಿದ್ದಾರೆ. ನವನೀತ್ ಚರಿ ಅವರ ಸಂಗೀತ ನಿರ್ದೇಶನ ಹಾಗೂ ವಿಶ್ವಜಿತ್ ರಾವ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಕೀ ಕ್ರಿಯೇಷನ್ಸ್ ಮೂಲಕ ಈ ಚಿತ್ರ ಬಿಡುಗಡೆಯಾಗುತ್ತಿದೆ. ಸೆಲೆಬ್ರಟಿ ಫೋಟೋಗ್ರಾಫರ್ ರಾಘವ್ ಇಲ್ಲಿ ರಮಣನಾಗಿ ಕಾಣಿಸಿಕೊಂಡಿದ್ದಾರೆ. ಹಾಗೂ ಸಂಜನ ಬುರ್ಲಿ ರಾಧಾಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಯಮುನಾ ಶ್ರೀನಿಧಿ ಗೋಪಿನಾಥ್ ಭಟ್ ನಾಯಕಿಯ ತಂದೆ ತಾಯಿಯಾಗಿ ಬಣ್ಣ ಹಚ್ಚಿದ್ದಾರೆ. ಚಿರಾಗ್, ಪ್ರದೀಪ್ ತಿಪಟೂರು ಗುರು ಹೆಗಡೆ ಹಾಗೂ ಯಶಸ್ವಿ ಶಂಕರ್ ಚಿತ್ರದ ಉಳಿದ ತಾರಾಬಳಗದಲ್ಲಿದ್ದಾರೆ.

ರಕ್ತಾಕ್ಷ
ಶೀರ್ಷಿಕೆ ಹಾಡಿಗೆ ವಸಿಷ್ಠ ಸಿಂಹ ಧ್ವನಿ



‘ರಕ್ತಾಕ್ಷ’ ಸಿನಿಮಾ ಮೂಲಕ ಯುವ ಪ್ರತಿಭೆ ರೋಹಿತ್ ನಾಯಕನಾಗಿ ಪರಿಚಯವಾಗುತ್ತಿದ್ದಾರೆ. ಸಾಯಿ ಪ್ರೊಡಕ್ಷನ್ ಸಂಸ್ಥೆಯಡಿ ಚಿತ್ರ ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತುಕೊಂಡಿದ್ದಾರೆ. ವಾಸುದೇವ ಎಸ್.ಎನ್. ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮೊದಲ ಹಾಡು ರಿಲೀಸ್ ಆಗಿದೆ. ಧೀರೇಂದರ್ ದಾಸ್ ದಾಸ್ಮೋಡ ಸಂಗೀತ ಇರುವ ಈ ಟೈಟಲ್ ಟ್ರ್ಯಾಕ್‌ಗೆ ವಸಿಷ್ಠ ಸಿಂಹ ಧ್ವನಿಯಾಗಿದ್ದಾರೆ. ಇತ್ತೀಚೆಗೆ ಈ ಚಿತ್ರ ಹಾಗೂ ಹಾಡಿನ ಬಗ್ಗೆ ಚಿತ್ರತಂಡ ಒಂದಷ್ಟು ಮಾಹಿತಿ ಹಂಚಿಕೊಂಡಿದೆ.

ನಟ ಕಂ ನಿರ್ಮಾಪಕರಾದ ರೋಹಿತ್ ಮಾತನಾಡಿ, ಬಾಲ್ಯದಿಂದಲೂ ಕಲಾವಿದನಾಗಬೇಕು ಎಂಬ ಕನಸಿತ್ತು. ಅದು ಈಗ ನನಸಾಗಿದೆ. ಈ ಚಿತ್ರಕ್ಕಾಗಿ ಎರಡರಿಂದ ಮೂರು ಬಾರಿ ಬಾಡಿ ಟ್ರಾನ್ಸ್ ಫರ್ಮೇಶನ್ ಮಾಡಿದ್ದೇನೆ. ನಾನು ರೀಲ್ ಹೀರೋ ಆಗಲು ಬಂದಿಲ್ಲ. ರಿಯಲ್ ಹೀರೋ ಆಗಲು ಬಂದಿದ್ದೇನೆ. ನನ್ನ ಕೆಲಸದ ಮೂಲಕವೇ ಎಲ್ಲರಿಗೂ ಪರಿಚಯವಾಗಬೇಕು. ಉತ್ತರ ಕರ್ನಾಟಕದಲ್ಲಿಯೂ ತುಂಬಾ ಟ್ಯಾಲೆಂಟ್ಸ್ ಇದ್ದಾರೆ. ಅವರಿಗೆಲ್ಲಾ ನನ್ನ ಕೈಲಾದ ಅವಕಾಶ ಕೊಡುತ್ತೇನೆ. ಈ ಚಿತ್ರದಲ್ಲಿ ಕೆಲವೊಂದು ಸತ್ಯಘಟನೆಯನ್ನು ಉಲ್ಲೇಖ ಮಾಡಲಾಗಿದೆ ಎಂದರು.

ನಿರ್ದೇಶಕ ವಾಸುದೇವ ಎಸ್.ಎನ್. ಮಾತನಾಡಿ, ಇದು ನನ್ನ ಮೊದಲ ಚಿತ್ರ. ‘ರಕ್ತಾಕ್ಷ’ ಅಂದ ತಕ್ಷಣ ಮಾಸ್ ಟೈಟಲ್ ಎನಿಸುತ್ತದೆ,. ಸಸ್ಪೆನ್ಸ್, ಕ್ರೈಮ್ , ಥ್ರಿಲ್ಲರ್ ಎಂದು ಎಲ್ಲಾ ಹೇಳ್ತಿದ್ದಾರೆ. ಮಾಸ್ ಅಲ್ಲದೆ ಸಸ್ಪೆನ್ಸ್ ಥ್ರಿಲ್ಲರ್ ಆಗಿಯೂ ಚಿತ್ರ ಮೂಡಿಬಂದಿದೆ. ಸಾಂಗ್ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಸಿನಿಮಾ ಕೂಡ ಚೆನ್ನಾಗಿದೆ ಎಂದರು.


ನಟಿ ರೂಪಾ ರಾಯಪ್ಪ ಮಾತನಾಡಿ, ಈ ಚಿತ್ರದಲ್ಲಿ ನಾನು ಪ್ರಮುಖ ಪಾತ್ರವೊಂದನ್ನು ಮಾಡಿದ್ದೇನೆ. ಈ ಪಾತ್ರವನ್ನು ನಾನು ಆಯ್ಕೆ ಮಾಡಲು ಕಾರಣ ರೋಹಿತ್ ಅವರಲ್ಲಿನ ಪ್ರಾಮಾಣಿಕತೆ. ರೋಹಿತ್ ಎಲ್ಲಾ ಕಲಾವಿದರನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ಟೈಟಲ್ ಟ್ರ್ಯಾಕ್ ತುಂಬಾ ಚೆನ್ನಾಗಿ ಮೂಡಿಬಂದಿದೆ. ಎಂದರು.

ಮೂಲತಃ ಉತ್ತರ ಕರ್ನಾಟಕ ಭಾಗದ ರಾಯಚೂರು ಜಿಲ್ಲೆಯ ಮುದ್ಗಲ್ ಎಂಬ ಪುಟ್ಟ ಪಟ್ಟಣದ ರೋಹಿತ್ ಮಾಡಲಿಂಗ್ ಜೊತೆಗೆ ಎರಡು ವರ್ಷಗಳ ರಂಗಭೂಮಿ ಅನುಭವ ಪಡೆದಿದ್ದಾರೆ. ಪ್ರತಿಷ್ಠಿತ ಬ್ರ್ಯಾಂಡ್ ಪ್ರತಿನಿಧಿಸಿರುವ ರೋಹಿತ್ ಎಬಿ ಪಾಸಿಟಿವ್ ಸಿನಿಮಾದಲ್ಲಿ ಖಳ ನಾಯಕನಾಗಿ ಅಭಿನಯಿಸಿದ್ದರು. ಇದೀಗ ರಕ್ತಾಕ್ಷ ಸಿನಿಮಾ ಮೂಲಕ ಹೀರೋ ಆಗಿ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದಾರೆ. ರೂಪಾ ರಾಯಪ್ಪ, ಅರ್ಚನಾ ಕೊಟ್ಟಿಗೆ, ಪ್ರಮೋದ್‌ಶೆಟ್ಟಿ, ರಚನಾ ದಶರತ್, ಗುರುದೇವ್ ನಾಗರಾಜ, ವಿಲಾಸ್ ಕುಲಕರ್ಣಿ, ಶಿವಮೊಗ್ಗ ರಾಮಣ್ಣ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.

‘ಆನಂದ್’ ಆಡಿಯೋ ಸಂಸ್ಥೆಗೆ ಡೈಮಂಡ್ ಬಟನ್

ಕಳೆದ 24 ವರ್ಷಗಳಿಂದ ಸಂಗೀತ ಪ್ರಿಯರಿಗೆ ಸುಮಧುರ ಹಾಡುಗಳನ್ನು ಕಲ್ಪಿಸುತ್ತಾ ಬಂದಿರುವ ಪ್ರತಿಷ್ಠಿತ ಆನಂದ್ ಆಡಿಯೋ ಸಂಸ್ಥೆಗೆ ಮುಂದಿನ ವರ್ಷ ರಜತ ವರ್ಷದ ಸಂಭ್ರಮ. ಈಗ ಆನಂದ್ ಆಡಿಯೋ ಯೂಟ್ಯೂಬ್ ಚಾನಲಿಗೆ ಒಂದು ಕೋಟಿ ಜನರು ಚಂದಾದಾರರಾಗಿದ್ದಾರೆ. ಹಾಗಾಗಿ ಯೂಟ್ಯೂಬ್ ಸಂಸ್ಥೆಯಿಂದ ಆನಂದ್ ಆಡಿಯೋ ಸಂಸ್ಥೆಗೆ ಡೈಮಂಡ್ ಬಟನ್ ಸಿಕ್ಕಿದೆ. ಮೇ 24, ಆನಂದ್ ಆಡಿಯೋ ಮಾಲೀಕರಾದ ಮೋಹನ್ ಚಾಬ್ರಿಯಾ ಅವರ ಹುಟ್ಟು ಹಬ್ಬ. ಅಂದೇ ಡೈಮಂಡ್ ಬಟನ್ ದೊರಕಿರುವುದು ಖುಷಿಯ ವಿಚಾರ. ಇದಕ್ಕೆ ಕಾರಣರಾದ ಕನ್ನಡ ಚಿತ್ರರಂಗದ ನಿರ್ಮಾಪಕರು, ನಿರ್ದೇಶಕರು, ಸಂಗೀತ ನಿರ್ದೇಶಕರು, ಗಾಯಕರಿಗೆ ಆನಂದ್ ಆಡಿಯೋ ಸಂಸ್ಥೆಯ ಶ್ಯಾಮ್ ಚಾಬ್ರಿಯಾ ಮತ್ತು ಆನಂದ್ ಚಾಬ್ರಿಯಾ ಧನ್ಯವಾದ ತಿಳಿಸಿದ್ದಾರೆ.

ಸಿನಿಪದಬಂಧ-476
ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ
1. ಮುಂಬರುವ ದಿನ ನಿಮಗೂ ಕಾದಿದೆ? ಜಗ್ಗೇಶ್ ಬಳಸಿದ ಸಹಜ ಶಬ್ದ ! 7
6."ಚೆಲುವೆಯ ನೋಟ ಚೆನ್ನ...," ಹಾಡಿನಲ್ಲಿ ಇದರ ನೆರಳು ಕೂಡಾ ಚೆನ್ನ ! 2
7. ತನ್ನೆದುರೇ ತನ್ನ ಕೊರಳು ಕಡಿಯಲು ಕತ್ತಿ ಮಸೆಯುವವರಿದ್ದಾರೆ ಎಂಬ ಅರಿವಿಲ್ಲದ ಪ್ರಾಣಿ 6
8. _ _ _ ಧ್ರುವದಿಂ ದಕ್ಷಿಣ ಧ್ರುವಕೂ 3
9.ತಿಮ್ಮನಿಗೆ ಕವಿದ ಮಸುಕು 2
10.ಜಯಶ್ರೀದೇವಿಯ ‘ಸಿತಾರ’ 3
12.ವೀರ ಹಿಡಿದ ಖಡ್ಗ 3
14.ಮಾತು ಬಾರದವ ‘ಸೇಡು’ ತೀರಿಸಿಕೊಂಡ 2
16.ಇದೊಂದು ಸುಂದರವಾದ ಲಯಬದ್ಧ ಸಂಗೀತ 3
17.ಕಿತ್ತೂರು ಚೆನ್ನಮ್ಮ ಎಂದೊಡನೆ ಇವರ ಜೊತೆಗೆ ನೆನಪಿಗೆ ಬರುವ ನಟಿ 6
19. ವಿಷ್ಣುವರ್ಧನ್ "ಕುಂತೀಪುತ್ರ" 2
20.ಪುಟ್ಟಣ್ಣ ಕಣಗಾಲ್ ಅವರ ಶ್ರೇಷ್ಠ ಕೊಳ 7

ವಿಜೇತರು: ಎಸ್.ರಾಜಣ್ಣ, ನಂ. 1201, ಡಾ.ವಿಷ್ಣುವರ್ಧನ್ ರಸ್ತೆ, ಚಾಮರಾಜ ಮೊಹಲ್ಲಾ, ಕಾಂತರಾಜ ಅರಸ್ ರಸ್ತೆ ಹತ್ತಿರ, ಮೈಸೂರು-570004

ಸಿನಿ ಪದಬಂಧ 475ರ ಸರಿ ಉತ್ತರ

ಅ	ದೇ	ಕ	ಣ್ಣು			ಜ	ನ	ನಾ	ಯ	ಕ
ಮ್ಮ				ಸಂ	ಗ್ರಾ	ಮ		ಗ		
ನಿ	ರ್ವಾ	ಪ	ಕ			ದ		ಕ	ಲ್ಪ	ನಾ
ನ್ನ		ಥ		ಪ್ರೇ	ಮಾ	ಗ್ನಿ		ನೈ		ರಿ
ತೋ				ಮ						ಮು
ಳಿ		ಕ	ರಿ	ಮ	ಲೆ		ಸ	ನಾ	ತ	ನಿ
ನ	ಗಾ	ರಿ		ಯಿ			ಪ್ತ			ದ
ಲ್ಲಿ		ನಾ			ದಾ		ಪ		ತೆ	ರೆ
	ಪ	ಗ	ಡೆ		ದಾ	ಯಾ	ದಿ			ಮಾ
	ಟೇ				ಗಿ			ಬಂ	ಗಾ	ರಿ
ಕಿ	ಲ	ಕಿ	ಲ		ರಿ	ಯ	ಲ್			

ಮೇಲಿನಿಂದ ಕೆಳಕ್ಕೆ
1.ಪರದೆ ಹಿಂದೆ ರವಿ ಬಂಗಾರದ ಪಂಜು ಹಚ್ಚುವಲ್ಲಿ ಸುರಿದ ಹಿಮ 6
2.ರಾಜ್ ಕುಮಾರ್ ಪರೋಪಕಾರಿಯಾದರೆ ವಿಷ್ಣುವರ್ಧನ್!? 7
3. ತ್ರಿಮೂರ್ತಿಗಳಲ್ಲಿ ಇಬ್ಬರನ್ನು ಇರಿಸಿಕೊಂಡಿರುವ ಗಾಯಕ 5
4.ಹೀರೋ ಹೀರೋ ಹೀರೋ ಹೀರೋ... ನಾನೇ ನಾನೇ ನಾನೇ ನಾನೇ...ಎಂದವನು 3
5.ನಿರ್ದೇಶಕ ಕಟ್ಟೆ ರಾಮಚಂದ್ರ ಅವರಿಗಿರುವ ತಿಳುವಳಿಕೆ 3
10.ಬಾಗಿಲನು ತೆರೆದು ಹರಿಯ ಸೇವೆ ಬಯಸಿದ ಸಂತ 7
11.ವಿಶ್ವಕೊಬ್ಬನೇ ಪರಾಕ್ರಮಿ ನಮ್ಮ ವಿಷ್ಣುವರ್ಧನ್ 6
13.ಕಾಮನೆಂಡತಿಯ ಪುಸ್ತಕ ವಯಸ್ಕರಿಗೆ ಮಾತ್ರ ! 5
15."ಚಳಿ ಚಳಿ ತಾಳೆನು...,"ಹಾಡಿಗೆ ಬಂದ ನಟಿ 3
18. ಇಲ್ಲೇ ಮೇಲಿನಿಂದ ಕೆಳಕ್ಕೆ 11 ರಲ್ಲಿರುವ ಚಿತ್ರದ ನಾಯಕಿ 3

ಚಾಂಷುಗರ್ಸ್‌ನಲ್ಲಿ ಕಬ್ಬು ಅರೆಯುವ ಕಾರ್ಯಕ್ಕೆ ಚಾಲನೆ

ಪ್ರಸಕ್ತ ಸಾಲಿನಲ್ಲಿ 11 ಲಕ್ಷ ಟನ್ ಕಬ್ಬು ಅರೆಯುವ ಗುರಿ: ಉಪಾಧ್ಯಕ್ಷ ಮಣಿ



ಭಾರತೀನಗರ, ಜೂ.1– ಇಲ್ಲಿನ ಶ್ರೀಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯಲ್ಲಿ ಪ್ರಸಕ್ತ ಸಾಲಿನ ಕಬ್ಬು ಅರೆಯುವ ಕಾರ್ಯಕ್ಕೆ ಕಾರ್ಖಾನೆ ಉಪಾಧ್ಯಕ್ಷ ಆರ್.ಮಣಿ ಗುರುವಾರ ಮುಂಜಾನೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕಾರ್ಖಾನೆಯಲ್ಲಿ 2023–24ನೇ ಸಾಲಿನ ಕಬ್ಬು ಅರೆಯುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ನಮ್ಮ ಕಾರ್ಖಾನೆ ವ್ಯಾಪ್ತಿಯಲ್ಲಿ 10 ಲಕ್ಷ ಟನ್ ಕಬ್ಬು ಇದೆ. ಬೇರೆ ತಾಲೂಕಿನಿಂದಲೂ ರೈತರ ಸಹಕಾರದಿಂದ ಕಬ್ಬು ತಂದು 11 ಲಕ್ಷ ಟನ್ ಅರೆಯುವ ನಿರೀಕ್ಷೆ ಹೊಂದಲಾಗಿದೆ ಎಂದರು.

ಕಳೆದ ಸಾಲಿನಲ್ಲಿ 10.35 ಲಕ್ಷ ಟನ್ ಕಬ್ಬು ಅರೆದು 9.58 ರಷ್ಟು ಇಳುವರಿ ಪಡೆಯಲಾಗಿತ್ತು. ಇದು ಮಂಡ್ಯ ಜಿಲ್ಲೆಯಲ್ಲಿ ಅಧಿಕ ಇಳುವರಿಯಾಗಿದೆ. ಕಳೆದ ವರ್ಷ ಟನ್ ಕಬ್ಬಿಗೆ 2770 ರೂ. ಹಣ ನೀಡಲಾಗಿತ್ತು. ಅಕ್ಟೋಬರ್‌ನಲ್ಲಿ ಸರ್ಕಾರ ಟನ್ ಕಬ್ಬಿಗೆ 2864 ಕೊಡುವಂತೆ ಆದೇಶ ಹೊರಡಿಸಿತ್ತು. ಬಳಿಕ ಬಾಕಿ 96 ರೂ.ಗಳನ್ನು ನಂತರ ಬಟವಾಡೆ ಮಾಡಲಾಗಿದೆ. ಅಲ್ಲದೇ ರೈತರು ಸರಬರಾಜು ಮಾಡಿದ ಕಬ್ಬಿನ ಎಲ್ಲಾ ಬಾಕಿಯನ್ನು ಬಟವಾಡೆ ಮಾಡಲಾಗಿದೆ ಎಂದ ಅವರು, ಪ್ರಸಕ್ತ ಸಾಲಿನಲ್ಲಿ ಮುಂಗಡ 2822 ರೂಪಾಯಿ ನೀಡುತ್ತಿದ್ದೇವೆ. ಮುಂಬರುವ ದಿನಗಳಲ್ಲಿ ಸರ್ಕಾರ ನಿಗದಿ ಪಡಿಸಿದ ಕಬ್ಬಿನ ಎಫ್‌ಆರ್‌ಪಿ ಹಣ ನೀಡುತ್ತೇವೆ ಎಂದು ವಿವರಿಸಿದರು. ಕಳೆದ 3 ವರ್ಷಗಳಿಂದ ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಲು, ಕಾರ್ಮಿಕರು ಕಾರ್ಖಾನೆ ಹೆಚ್ಚು ಕಬ್ಬು ಅರೆಯಲು ಸಹಕರಿಸಿದ್ದು, ಈ ಸಾಲಿನಲ್ಲೂ ರೈತರು, ಕಾರ್ಮಿಕರು ಅದೇ ರೀತಿಯ ಸಹಕಾರ ನೀಡಬೇಕು ಎಂದು ತಿಳಿಸಿದರು.

ಕಾರ್ಖಾನೆಯಿಂದ ಕಾಂಪೋಸ್ಟ್ ವಿತರಣೆ

ರಸಗೊಬ್ಬರದ ಬೆಲೆ ಏರಿಕೆಯಾಗಿರುವುದರಿಂದ ಕಾರ್ಖಾನೆಯಿಂದ ಕಾಂಪೋಸ್ಟ್ ಗೊಬ್ಬರವನ್ನು ಪ್ರತಿ ಟನ್‌ಗೆ 1566 ರೂ.ನಂತೆ ನೀಡಲಾಗುವುದು. ಕಾಂಪೋಸ್ಟ್ ಗೊಬ್ಬರ ಬಳಕೆಯಿಂದ ಮಣ್ಣಿನ ಫಲವತ್ತತೆ ಹೆಚ್ಚಾಗಲಿದೆ. ಮುಂಗಾರು ಹಂಗಾಮು, ಬೇಸಿಗೆ ಹಂಗಾಮಿಗೆ ರೈತರಿಗೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಎಲ್ಲಾ ತಳಿಯ ಕಬ್ಬಿನ ಬಿತ್ತನೆ ವಿತರಣೆ ಮಾಡಲಾಗುವುದು. ರೈತರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಾರ್ಖಾನೆ ಉಪಾಧ್ಯಕ್ಷ ಮಣಿ ತಿಳಿಸಿದರು.

ಪ್ರಯೋಜನ ಪಡೆದುಕೊಳ್ಳಿ: ಕಬ್ಬು ಕಟಾವು ಮಾಡುವ ಕೂಲಿ ಕಾರ್ಮಿಕರ ಕೊರತೆ, ಕೂಲಿ ಹೆಚ್ಚಳದ ಹಿನ್ನೆಲೆಯಲ್ಲಿ ಕಬ್ಬು ಕಟಾವು ಯಂತ್ರ ಪರಿಚಯಿಸಲಾಗುತ್ತಿದೆ. ದಿನವೊಂದಕ್ಕೆ 250 ಟನ್ ಕಬ್ಬು ಕಟಾವು ಮಾಡಬಹುದಾಗಿದೆ. ಪ್ರತಿ ಟನ್ ಕಬ್ಬು ಕಟಾವಿಗೆ ರೈತರಿಗೆ 650 ರಿಂದ 700 ರೂ.ಗಳು ಖರ್ಚಾಗಲಿದೆ. ಕಬ್ಬಿನ ತಾಕುಗಳ ಕ್ಷೇತ್ರದಲ್ಲಿ ಹೆಚ್ಚು ಇಳುವರಿ ಪಡೆಯುವ ಬಗ್ಗೆ ರೈತರಿಗೆ ಪ್ರಾತ್ಯಕ್ಷಿಕೆ ನೀಡಲಾಗುವುದು. ಸದರಿ ಸಾಲಿನಲ್ಲಿ ಹೆಚ್ಚು ಇಳುವರಿ ಬರುವ ಕಬ್ಬು ಕೊಡುವಂತಹ ಕಬ್ಬಿನ ತಳಿಗಳನ್ನು ರೈತರಿಗೆ ಪರಿಚಯಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಬ್ಬು ಅಭಿವೃದ್ಧಿ ಇಲಾಖೆಯೊಂದಿಗೆ ಸಂಪರ್ಕ ಹೊಂದಿದ್ದೇವೆ. ಇದರ ಪ್ರಯೋಜನ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಕಬ್ಬು ಅರೆಯುವ ಕಾರ್ಯಕ್ಕೆ ಚಾಲನೆ ನೀಡುವ ಮುನ್ನ ಗಣಪತಿ ಹೋಮ, ಶ್ರೀ ಚಾಮುಂಡೇಶ್ವರಿ ಪೂಜೆ ನಡೆಸಿ ಪೂರ್ಣಾಹುತಿ ನೀಡಲಾಯಿತು. ಬಳಿಕ ನೌಕರರಿಗೆ ಕಾರ್ಖಾನೆ ಉಪಾಧ್ಯಕ್ಷ ಆರ್.ಮಣಿ ಹಸ್ತಲಾಘವ ಮಾಡುವ ಮೂಲಕ ಶುಭ ಹಾರೈಸಿದರು. ತದನಂತರ ಪ್ರಸಾದ ವಿನಿಯೋಗ ನಡೆಯಿತು.

ಇದೇ ವೇಳೆ ಕಾರ್ಖಾನೆ ಜನರಲ್ ಮ್ಯಾನೇಜರ್ ಎಂ.ರವಿ, ಅಧಿಕಾರಿಗಳಾದ ಮಣಿಮಾರನ್, ಸೆಂಥಿಲ್, ಕಬ್ಬು ವಿಭಾಗದ ಮುಖ್ಯಸ್ಥ ಎಸ್.ಎಂ. ಮಹದೇವು ಪ್ರಭು, ಆಡಳಿತಾಧಿಕಾರಿಗಳಾದ ನಿತೀಶ್, ನಿಂಗಣ್ಣ ಸೇರಿದಂತೆ ಕಾರ್ಮಿಕರು, ರೈತರು ಉಪಸ್ಥಿತರಿದ್ದರು.

ಮನ್‌ಮುಲ್‌ನಿಂದ ವಿಶ್ವ ಹಾಲು ದಿನಾಚರಣೆ



ಮಂಡ್ಯ, ಜೂ.1– ಮಂಡ್ಯ ಜಿಲ್ಲಾ ಹಾಲು ಒಕ್ಕೂಟ (ಮನ್‌ಮುಲ್)ದ ವತಿಯಿಂದ ವಿಶ್ವ ಹಾಲು ದಿನಾಚರಣೆ ಅಂಗವಾಗಿ ನಗರದ ಜಿಲ್ಲಾಸ್ಪತ್ರೆ ರೋಗಿಗಳು ಮತ್ತು ಪ್ರೇರಣ ಅಂಧರ ಸಂಸ್ಥೆ ವಿದ್ಯಾರ್ಥಿಗಳಿಗೆ ಉಚಿತವಾಗಿ ಹಾಲು ವಿತರಿಸುವ ಮೂಲಕ ವಿಶ್ವ ಹಾಲು ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮನ್‌ಮುಲ್ ಪ್ರಭಾರ ಅಧ್ಯಕ್ಷ ಎಂ.ಎಸ್.ರಘುನಂದನ್ ಮಾತನಾಡಿ, ಹಾಲಿನ ಪ್ರಾಮುಖ್ಯತೆ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಅಗತ್ಯ. ಪೌಷ್ಟಿಕಾಂಶದ ಕೊರತೆ ನೀಗಿಸಲು ಹಾಲು ಬಹಳ ಮುಖ್ಯ. ಆದ್ದರಿಂದ ಹಾಲಿನ ಕೊರತೆ ಇರುವ ಕಡೆ ಹಾಲನ್ನು ಸರಬರಾಜು ಮಾಡಲಾಗುವುದು ಎಂದರು.

ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಮಂಜೇಶ್ ಮಾತನಾಡಿ, ವಿಶ್ವ ಹಾಲು ದಿನವನ್ನು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ 2001 ರಿಂದ ಪ್ರತಿವರ್ಷ ಜೂ.1ರಂದು ಆಚರಿಸಲಾಗುತ್ತಿದೆ. ಇದರ ಉದ್ದೇಶ ಹಾಲು ಮತ್ತು ಹೈನುಗಾರಿಕೆ ಮಹತ್ವವನ್ನು ವಿಶ್ವದೆಲ್ಲೆಡೆ ಪಸರಿಸುವುದಾಗಿದೆ. ಹಾಲಿನ ಪೌಷ್ಟಿಕಾಂಶದ ಮೌಲ್ಯ ಮತ್ತು ಅದರ ಉತ್ಪನ್ನಗಳ ಬಗ್ಗೆ ಮತ್ತು ಅದರ ಆರ್ಥಿಕ ಪ್ರಾಮುಖ್ಯತೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ವಿಶ್ವ ಹಾಲು ದಿನದ ಮಹತ್ವವಾಗಿದೆ ಎಂದರು.

ಮನ್‌ಮುಲ್ ನಿರ್ದೇಶಕ ಯು.ಸಿ.ಶಿವಕುಮಾರ್, ಮನ್‌ಮುಲ್ ಮಾರುಕಟ್ಟೆ ಅಧಿಕಾರಿ ಸಾಗರ್ ಸೇರಿದಂತೆ ಇತರರಿದ್ದರು.

ಸಚಿವ ಚಲುವರಾಯಸ್ವಾಮಿ ಹುಟ್ಟುಹಬ್ಬ ಆಚರಣೆ

ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ



ಕೆ.ಆರ್.ಪೇಟೆ, ಜೂ.1– ಕಾಂಗ್ರೆಸ್ ಮುಖಂಡ ವಿಜಯ್ ರಾಮೇಗೌಡ ಅಭಿಮಾನಿ ಬಳಗದಿಂದ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹುಟ್ಟುಹಬ್ಬ ಆಚರಿಸಲಾಯಿತು.

ತಾಪಂ ಮಾಜಿ ಸದಸ್ಯ ಮಾಧವಪ್ರಸಾದ್ ಮಾತನಾಡಿ, ಮಂಡ್ಯ ಜವಾಬ್ದಾರಿ ವಹಿಸಿಕೊಂಡು ಜಿಲ್ಲೆಯ 7 ಕ್ಷೇತ್ರಗಳ ಪೈಕಿ 6 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಲು ಪ್ರಮುಖ ಪಾತ್ರ ವಹಿಸಿ, ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ಕೃಷಿ ಸಚಿವರಾಗಿರುವ ಚಲುವರಾಯಸ್ವಾಮಿ ಅವರ ಹುಟ್ಟುಹಬ್ಬದ ಪ್ರಯುಕ್ತ ಸಮಾಜ ಸೇವಕ ಬೂಕನಕೆರೆ ವಿಜಯ್ ರಾಮೇಗೌಡರ ಅಭಿಮಾನಿ ಬಳಗದಿಂದ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದ್ದೇವೆ. ಆ ದೇವರು ನಿಮಗೆ ಮತ್ತಷ್ಟು ಆಯಸ್ಸು, ಆರೋಗ್ಯ ಕರುಣಿಸಿ ರಾಜ್ಯದ ಅಭಿವೃದ್ಧಿಗೆ ಶ್ರಮಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು.

ಈ ಸಂದರ್ಭ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶಿವಕುಮಾರ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಎಸ್.ಬಸವೇಗೌಡ, ಪುರಸಭಾ ಮಾಜಿ ಅಧ್ಯಕ್ಷ ಹೆಚ್.ಕೃಷ್ಣೇಗೌಡ, ಕಾಂಗ್ರೆಸ್ ಮುಖಂಡರಾದ ಪ್ರಕಾಶ್, ಸಿದ್ದಿಕ್, ರಮೇಶ್, ಮಲ್ಲಿಕಾರ್ಜುನ್, ಗ್ರಾಪಂ ಮಾಜಿ ಅಧ್ಯಕ್ಷ ಧನಂಜಯ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಪ್ರವೀಣ್ ಕುಮಾರ್, ಮಂಜೇಗೌಡ, ವಿಜಯ ರಾಮೇಗೌಡರ ಆಪ್ತ ಸಹಾಯಕ ಬಸವರಾಜು, ಅಜಯ್, ರವಿ, ಅಭಿಷೇಕ್, ವರುಣ್ ಸೇರಿದಂತೆ ನೂರಾರು ಕಾಂಗ್ರೆಸ್ ಮುಖಂಡರು ಹಾಗೂ ವಿಜಯರಾಮೇಗೌಡರ ಅಭಿಮಾನಿಗಳು ಉಪಸ್ಥಿತರಿದ್ದರು.

ಸ್ಪರ್ಧಾತ್ಮಕ ಪರೀಕ್ಷೆಗಳ ಅರಿವು ಕಾರ್ಯಾಗಾರ



ಪಾಂಡವಪುರ, ಜೂ.1– ಪಿಯುಸಿ ವಿದ್ಯಾರ್ಥಿಗಳಿಗಾಗಿ ಬಿಜಿಎಸ್ ಸಂಸ್ಥೆಯಿಂದ ನೀಟ್, ಸಿಇಟಿ, ಜೆಇಇಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್ ಆರಂಭಿಸಲಾಗುವುದು ಎಂದು ಹೇಮಗಿರಿ ಶಾಖೆ ಬಿಜಿಎಸ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಜೆ.ಎನ್.ರಾಮಕೃಷ್ಣೇಗೌಡ ತಿಳಿಸಿದರು.

ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಪಿಯುಸಿ ವಿದ್ಯಾರ್ಥಿಗಳು, ಪೋಷಕರಿಗಾಗಿ ಆಯೋಜಿಸಿದ್ದ ನೀಟ್, ಸಿಇಟಿ, ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗಳ ಅರಿವು ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಬಿಜಿಎಸ್ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಬಹುಪಾಲು ಗ್ರಾಮೀಣ ಮಕ್ಕಳಾಗಿದ್ದಾರೆ. ಆ ಮಕ್ಕಳು ಪಿಯುಸಿ ಪರೀಕ್ಷೆ ಮುಗಿದ ಬಳಿಕ ಅವರ ಮುಂದಿನ ಭವಿಷ್ಯಕ್ಕಾಗಿ ನೀಟ್, ಸಿಇಟಿ, ಜೆಇಇಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳು ಅವಶ್ಯಕ. ನಗರ ಪ್ರದೇಶ ಮಕ್ಕಳಿಗಾದರೆ ಅಲ್ಲಿ ಸಾಕಷ್ಟು ಸ್ಪರ್ಧಾತ್ಮಕ ಪರೀಕ್ಷೆ ಕೋಚಿಂಗ್ ಸೆಂಟರ್‌ಗಳಿವೆ. ನಮ್ಮ ಗ್ರಾಮೀಣ ಮಕ್ಕಳಿಗೆ ಅಂತಹ ಸೌಲಭ್ಯಗಳು ಕಡಿಮೆ ಇರುವುದರಿಂದ ಶಿಕ್ಷಣ ಸಂಸ್ಥೆಯಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆ ಕೋಚಿಂಗ್ ತರಬೇತಿ ನೀಡಲು ತೀರ್ಮಾನಿಸಿ ಅದಕ್ಕಾಗಿ ಪ್ರತಿಷ್ಠಿತ ಎಕ್ಸ್‌ಎಲ್ ಅಕಾಡೆಮಿ ತರಬೇತುದಾರರನ್ನು ಸಂಪರ್ಕಿಸಲಾಗಿದೆ ಎಂದರು.

ಎಕ್ಸ್‌ಎಲ್ ಅಕಾಡೆಮಿ ತರಬೇತುದಾರ ಎಸ್.ಪಿ.ಸೋಮಣ್ಣ ಮಾತನಾಡಿದರು. ಈ ವೇಳೆ ಎಕ್ಸ್‌ಎಲ್ ಅಕಾಡೆಮಿ ನಿರ್ದೇಶಕ ಪ್ರೊ. ಬಿ.ಕೆ.ಕುಮಾರ್, ತರಬೇತುದಾರ ಮಂಜುನಾಥ್, ಪ್ರಾಂಶುಪಾಲ ಮಹದೇವು, ಮುಖ್ಯಶಿಕ್ಷಕ ರಘು, ಉಪನ್ಯಾಸಕ ಯುವರಾಜ್ ಸೇರಿದಂತೆ ಇತರರಿದ್ದರು.

ಜೂ.4, ನಾಲ್ವಡಿ ಕೃಷ್ಣರಾಜ ಜಯಂತಿ, ಅಕ್ಷರ ಜಾತ್ರೆ

ಸಮ್ಮೇಳನಾಧ್ಯಕ್ಷರಾಗಿ ಡಾ.ಚಂದ್ರಶೇಖರ್ ಆಯ್ಕೆ



ಮಂಡ್ಯ, ಜೂ.1– ಡಾ.ಜೀಶಂಪ ಸಾಹಿತ್ಯ ವೇದಿಕೆ ಮಂಡ್ಯ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ ಆಶ್ರಯದಲ್ಲಿ ಮಂಡ್ಯ ನಿರ್ಮಾತೃ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಜೂ.4ರಂದು ನಗರದ ಗಾಂಧಿ ಭವನದಲ್ಲಿ ಬೆಳಗ್ಗೆ 10.30ಕ್ಕೆ ತೃತೀಯ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕವಿ ಹಾಗೂ ಖ್ಯಾತ ವೈದ್ಯ ಡಾ.ಕೆ.ಚಂದ್ರಶೇಖರ್ ಅವರನ್ನು ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಅಕ್ಷರ ಜಾತ್ರೆಯನ್ನು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ. ನಿಂಗರಾಜೇಗೌಡ ಉದ್ಘಾಟಿಸುವರು. ಚಲನಚಿತ್ರ ಸಾಹಿತಿ ಡಾ.ನಾಗೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಕನ್ನಡ ಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ರಾಜರ್ಷಿ ಒಡೆಯರ್ ಕುರಿತು ಮಾತನಾಡುವರು. ಕನ್ನಡ ರತ್ನ ಪ್ರಶಸ್ತಿ ಪ್ರದಾನ ಮಾಡುವರು. ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ ಕಲಾರತ್ನ ಪ್ರಶಸ್ತಿ ಪ್ರದಾನ ಮಾಡುವರು ಎಂದು ವಿವರಿಸಿದರು.

ಇದೇ ವೇಳೆ ಡಾ.ಕೆ.ಚಂದ್ರಶೇಖರ್ ಅವರ ಅನುಸಂಧಾನ ಕೃತಿಯನ್ನು ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ.ಹೆಚ್.ಎಸ್. ಮುದ್ದೇಗೌಡ ಬಿಡುಗಡೆ ಮಾಡುವರು. ಪವನ್ ಡೆವಲಪರ್ ಎಂ.ಡಿ.ಪವನ್ ವೈದ್ಯರತ್ನ ಪ್ರಶಸ್ತಿ ಪ್ರದಾನ ಮಾಡುವರು. ಖ್ಯಾತ ಮಾನಸಿಕ, ಲೈಂಗಿಕ ಹಾಗೂ ನರರೋಗ ತಜ್ಞ ಡಾ.ಟಿ.ಎಸ್.ಸತ್ಯನಾರಾಯಣರಾವ್, ಹಿರಿಯ ಇಎನ್‌ಟಿ ವೈದ್ಯ ಡಾ.ಎಂ.ಎಸ್. ರಾಮಲಿಂಗೇಗೌಡ, ಹಿರಿಯ ಮೂಳೆ ತಜ್ಞ ಡಾ.ಎ.ಬಿ. ಪುಟ್ಟಸ್ವಾಮಿಗೌಡ, ಹಿರಿಯ ನರರೋಗ ತಜ್ಞ ಡಾ.ಪಿ.ಎಂ.ಸೂರ್ಯ ನಾರಾಯಣ ಶರ್ಮಾ, ಎಸ್.ಡಿ.ಜಯರಾವ್ ಆಸ್ಪತ್ರೆ ವೈದ್ಯ, ಗಾಯಕ ಡಾ.ಮಾದೇಶ್ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ವೈದ್ಯರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಕನ್ನಡರತ್ನ ಪ್ರಶಸ್ತಿ ಪುರಸ್ಕೃತರು: ಕಿರಣಗೆರೆ ಜಗದೀಶ್ (ರೇಷ್ಮೆ ರತ್ನ), ಟಿ.ಟಿ.ಕೃಷ್ಣ (ಆರಕ್ಷಕ ಸೇವೆ), ಮೇಲುಕೋಟೆ ಬೆಟ್ಟಸ್ವಾಮಿಗೌಡ (ಸಂಘಟನೆ), ಹೆಮ್ಮಿಗೆ ಶಂಕರ್ (ಸಮಾಜ ಸೇವೆ), ಕೆ.ವಿ.ತ್ಯಾಗರಾಜು (ರೇಷ್ಮೆ ರತ್ನ), ಆರ್.ಬಚ್ಚೇಗೌಡ (ಆಡಳಿತ ರತ್ನ), ಜಿ.ಮುರಳಿ ಕೃಷ್ಣ (ಚಲನಚಿತ್ರ ಪ್ರಚಾರಕಲೆ), ಚಂದ್ರಹಾಸ ಮಂಡ್ಯ (ಆಡಳಿತ ರತ್ನ), ಡಾ. ಆರ್. ರಾಮಸ್ವಾಮಿ (ಕೃಷಿ), ಶೇಷಣ್ಣ (ಮಾಧ್ಯಮ), ಕೆ.ಎಸ್.ಜಯಕುಮಾರ್ (ಸಮಾಜಸೇವೆ), ಟಿ.ಎಸ್.ರಾಜಣ್ಣ (ಕೃಷಿ), ಚಾ.ಶಿ. ಜಯಶಂಕರ್ (ಶಿಕ್ಷಣ ಮತ್ತು ಸಂಘಟನೆ), ಬಿ. ಬಸವರಾಜು (ಸಮಾಜಸೇವೆ), ನಾರಾಯಣ (ಆರಕ್ಷಕ ಸೇವೆ) ಅವರಿಗೆ ಕನ್ನಡ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಡಾ.ಕಿರಣ್‌ಕುಮಾರ್ (ಸಿನಿಮಾ), ಸಂಪಹಳ್ಳಿ ಬಸವರಾಜು (ರಂಗಭೂಮಿ), ರಾಣಿ ಈಶ್ವರಿ (ರಂಗಭೂಮಿ), ಭೈರಯ್ಯ ಕೆ.ಆರ್.ಪೇಟೆ (ಜನಪದ), ಎಂ.ಕೆ.ಜಗದೀಶ್ (ರಂಗಭೂಮಿ) ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾರತ್ನ ಪ್ರಶಸ್ತಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿವರಿಸಿದರು.

ಅಕ್ಷರ ಜಾತ್ರೆ ಕವಿಗೋಷ್ಠಿ ಮಧ್ಯಾಹ್ನ 2.30ಕ್ಕೆ ನಡೆಯಲಿದ್ದು, ಸಮ್ಮೇಳನಾಧ್ಯಕ್ಷ ಡಾ.ಕೆ.ಚಂದ್ರಶೇಖರ್ ಸೇರಿದಂತೆ ರಾಜ್ಯದ ಹಲವೆಡೆಯಿಂದ ಆಗಮಿಸುವ ಕವಿಗಳು, ಸಾಹಿತಿಗಳು ಪಾಲ್ಗೊಳ್ಳಲಿದ್ದು, ಈ ಸಂದರ್ಭ ಹಲವು ಕವಿಗಳಿಗೆ ಕಾವ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ನಾಗೇಶ್, ಸದಸ್ಯ ನಾಗೇಶ್ ಇದ್ದರು.

ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ 83 ರೂ. ಇಳಿಕೆ



ನವದೆಹಲಿ, ಜೂ.1–ತಿಂಗಳ ಮೊದಲ ದಿನವೇ, ಜೂನ್ 1 ರಂದು ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಇಳಿಕೆಯಾಗಿದೆ. ಸರ್ಕಾರಿ ತೈಲ ಕಂಪನಿಗಳು (ಒಎಂಸಿ) ಬಿಡುಗಡೆ ಮಾಡಿದ ದರಪಟ್ಟಿ ಪ್ರಕಾರ, ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆ 83 ರೂ.ನಷ್ಟು ಇಳಿಕೆಯಾಗಿದೆ. 19 ಕೆಜಿ ವಾಣಿಜ್ಯ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗೆ ಈಗ 1773 ರೂ. ಆಗಿದೆ. ಈ ಮೊದಲು ಸಿಲಿಂಡರ್ ರೂ.1856.50 ಇತ್ತು. ಆದರೆ, ಗೃಹಬಳಕೆಯ ಗ್ಯಾಸ್ ಸಿಲಿಂಡರ್ ದರದಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ.


ದಾವಣಗೆರೆಯಲ್ಲಿ ಅವಳಿ ಮಕ್ಕಳನ್ನು ಉಸಿರುಗಟ್ಟಿಸಿ ಕೊಲೆಗೈದ ತಂದೆ!

ದಾವಣಗೆರೆ, ಜೂ.1– ದಾವಣಗೆರೆಯಲ್ಲಿ ತಂದೆಯೊಬ್ಬ ತನ್ನ ಅವಳಿ ಮಕ್ಕಳನ್ನು ಉಸಿರುಗಟ್ಟಿಸಿ ಕೊಲೆಗೈದ ಅಮಾನವೀಯ ಘಟನೆ ನಡೆದಿದೆ. ಮೃತ ಮಕ್ಕಳು ನಾಲ್ಕು ವರ್ಷದ ಅದ್ವೈತ್ ಮತ್ತು ಅನ್ವಿತ್ ಎಂದು ತಿಳಿದುಬಂದಿದೆ. ತನ್ನ ಮಕ್ಕಳನ್ನು ಕೊಂದ 35 ವರ್ಷದ ಅಮರ ಕಿತ್ತೂರು ಮೂಲತಃ ಗೋಕಾಕ ನಿವಾಸಿಯಾಗಿದ್ದು, ದಾವಣಗೆರೆ ನಗರದ ಆಂಜನೇಯ ಮಿಲ್ ಬಡಾವಣೆಯಲ್ಲಿ ಕುಟುಂಬದೊಂದಿಗೆ ವಾಸವಾಗಿದ್ದ.

ಅಮರ ಹರಿಹರದ ಕಾರ್ಗಿಲ್ ಫ್ಯಾಕ್ಟರಿಯಲ್ಲಿ ಕೆಮಿಕಲ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು ತನ್ನ ಪತ್ನಿ ಜಯಲಕ್ಷ್ಮಿ ತವರು ಮನೆ ವಿಜಯಪುರಕ್ಕೆ ಹೋಗಿದ್ದರು. ಅಮರ ತ್ನನ ಮಕ್ಕಳನ್ನು ಹಾವೇರಿ ಜಿಲ್ಲೆಯ ರಾಣೆಬೆನ್ನೂರ ತಾಲೂಕಿನ ಚಳಗೆರೆ ಟೋಲ್‌ಗೇಟ್‌ಗೆ ಕಾರಿನಲ್ಲಿ ಕರೆದುಕೊಂಡು ಹೋಗಿ ಅಲ್ಲಿ ಇಬ್ಬರ ಬಾಯಿಗೂ ಟೇಪ್ ಅಂಟಿಸಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ. ನಂತರ ಮಕ್ಕಳ ಶವವನ್ನು ಕಾರಿನಲ್ಲಿ ತಂದಿದ್ದನು. ಮಕ್ಕಳ ಸಾವಿನ ಬಗ್ಗೆ ಸಂಶಯ ಬಂದು ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರ ತನಿಖೆಯ ವೇಳೆ ಮಕ್ಕಳನ್ನು ತಾನೇ ಕೊಲೆ ಮಾಡಿದ್ದಾಗಿ ಅಮರ ಒಪ್ಪಿಕೊಂಡಿದ್ದಾನೆ. ಈ ಸಂಬಂಧ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಳ್ಳೆಯದಕ್ಕೆ ಸಲ್ಯೂಟ್; ಸರಿತಪ್ಪಿದರೆ ಒದೆ, ಗುಂಡೇಟು

ಶಾಂತಿ ಕದಡುವವರಿಗೆ ಗೃಹ ಸಚಿವ ಡಾ.ಪರಮೇಶ್ವರ್ ಆಯ್ಕೆ ಅವಕಾಶ



ಬೆಂಗಳೂರು, ಜೂ.1(ಕೆಎಂಶಿ)– ಪೊಲೀಸ್ ಇಲಾಖೆಯು ಶಿಸ್ತಿನ ಇಲಾಖೆಯಾಗಿದ್ದು, ಇದರಲ್ಲಿ ಒಳ್ಳೆಯದಿದ್ದರೆ ಸಲ್ಯೂಟ್ ಸಿಗಲಿದೆ. ಒಳ್ಳೆಯದಲ್ಲದಿದ್ದರೆ ಒದೆಯೂ ಸಿಗುತ್ತದೆ. ಮುಂದುವರಿದು ಗುಂಡು ಹಾರಿಸುವುದು ಇರುತ್ತದೆ. ಇವುಗಳಲ್ಲಿ ಯಾರಿಗೆ ಯಾವುದು ಬೇಕಿದೆಯೋ ತೀರ್ಮಾನ ಮಾಡಿ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಶಾಂತಿ ಕದಡುವವರಿಗೆ ಆಯ್ಕೆ ಅವಕಾಶ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಾಠಿ ಏಟು ತಿನ್ನಬೇಕೋ ಇಲ್ಲವೇ ಗುಂಡು ಹಾರಿಸಿಕೊಳ್ಳಬೇಕೋ ಅಥವಾ ಶಾಂತಿಯಿಂದ ರಾಜ್ಯ ಇರಬೇಕೋ ಎಂಬುದನ್ನು ನಾಡಿನ ಜನರೇ ತೀರ್ಮಾನಿಸಿ ಎಂದು ತಿಳಿಸಿದರು. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಯಾರು ಶಾಂತಿ ಕದಡುತ್ತಾರೆ, ಸಮಾಜದ ಸ್ವಾಸ್ಥ್ಯವನ್ನು ಕದಡುತಾರೋ ಅಂತಹ ಸಂಘಟನೆ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದೇವೆ. ಅವರು ಯಾರು ಅದನ್ನು ಮಾಡುವುದಿಲ್ಲವೆಂದರೆ ಭಯಪಡುವ ಅಗತ್ಯ ಇಲ್ಲ. ಅಂತಹುದನ್ನು ಮಾಡುವುದಾದರೆ ಅವರಿಗೆ ಭಯ ಆಗುತ್ತದೆ ಎಂದು ಹೇಳಿದರು.

ನಾಗರಿಕ ಸಮುದಾಯ ಹಾಗೂ ಸಂಘಟನೆಗಳಿಗೆ ನಾನು ಮನವಿ ಮಾಡುವುದು ಇಷ್ಟೇ. ನಮ್ಮದು ಕುವೆಂಪು ಅವರು ಹೇಳಿದಂತೆ ಸರ್ವಜನಾಂಗದ ಶಾಂತಿಯ ತೋಟ ಮಾಡುತ್ತೇವೆ. ಜನರು ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಸಹಕಾರ ಕೊಡಬೇಕು ಎಂದರು. ಯಾವುದೇ ಕಾರಣಕ್ಕೂ ನೈತಿಕ ಪೊಲೀಸ್ ಗಿರಿ ಹಾಗೂ ಮತೀಯ ಘಟನೆಗಳನ್ನು ಸಹಿಸುವುದಿಲ್ಲ. ಅದನ್ನು ತಡೆಯಲು ಯಾವ ರೀತಿ ಕಠಿಣ ಕ್ರಮ ಕೈಗೊಳ್ಳಬೇಕು ಅದನ್ನು ಕೈಗೊಳ್ಳುತ್ತೇವೆ ಎಂದು ತಿಳಿಸಿದರು. ಪಿಎಸ್‌ಐ ಪರೀಕ್ಷೆ ಅಕ್ರಮದ ಬಗ್ಗೆ ಹಿರಿಯ ಅಧಿಕಾರಿಗಳ ಚರ್ಚೆ ಮಾಡಿದ್ದು, ಮುಂದೆ ಯಾವ ರೀತಿ ಕ್ರಮ ಕೈಗೊಳ್ಳಬೇಕು ಆ ರೀತಿಯ ಕ್ರಮ ಕೈಗೊಳ್ಳುತ್ತೇವೆ. ಯಾರು ನೇರ ಹಾಗೂ ಪರೋಕ್ಷವಾಗಿ ಭಾಗಿಯಾಗಿದ್ದಾರೆ ಅವರು ವಿರುದ್ಧ ಕ್ರಮ ಕೈಗೊಳ್ಳಲು ಹಿಂದೇಟು ಹಾಕುವುದಿಲ್ಲ. ಭಜರಂಗದಳ ನಿಷೇಧದ ಮಾಡುವ ಸಂದರ್ಭ ಬರಲಾರದು. ಒಂದು ವೇಳೆ ಬಂದರೆ ಮಾಡುತ್ತೇವೆ ಎಂದು ಹೇಳಿದರು.

ಪ್ರತಿ ದಿನವೂ ಪರಿಸರ ಸಂರಕ್ಷಣೆ ಮಾಡಬೇಕು: ಡಿಸಿಎಫ್ ಡಾ. ಬಸವರಾಜ

ಜೂನ್ ತಿಂಗಳಾದ್ಯಂತ ವಿಶೇಷ ಕಾರ್ಯಕ್ರಮಗಳ ಆಯೋಜನೆ



ಮೈಸೂರು, ಜೂ. 1 (ಸಿಎನ್)– ಪರಿಸರ ಮಾಲಿನ್ಯದ ಬಗ್ಗೆ ಪ್ರತಿಯೊಬ್ಬರಿಗೂ ಅರಿವಿರಬೇಕು. ಯಾವೆಲ್ಲಾ ತಪ್ಪುಗಳಿಂದ ಪರಿಸರ ಕಲುಷಿತವಾಗುತ್ತಿದೆ ಎಂಬುದನ್ನು ಮನಗಂಡು, ಅದಕ್ಕೆ ತಕ್ಕ ಹಾಗೆ ಪರ್ಯಾಯ ಉಪಾಯದೊಂದಿಗೆ, ನಮ್ಮ ಸುತ್ತಮುತ್ತಲಿನ ಪರಿಸರ ಸಂರಕ್ಷಿಸುವ ಕೆಲಸಕ್ಕೆ ಮುಂದಾಗಬೇಕು ಎಂದು ಮೈಸೂರು ದಕ್ಷಿಣ ವಿಭಾಗದ ಅರಣ್ಯ ಉಪ ಸಂರಕ್ಷಣಾಧಿಕಾರಿ ಡಾ. ಕೆ.ಎನ್. ಬಸವರಾಜ ಕರೆ ನೀಡಿದರು.

ನಗರದ ಅಕ್ಕಮಹಾದೇವಿ ರಸ್ತೆಯ ಎಂಬಿಸಿಟಿ ಸಭಾಂಗಣದಲ್ಲಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ಸಹಯೋಗದಿಂದ 'ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರ' ಘೋಷವಾಕ್ಯದಡಿ ಗುರುವಾರ ಆಯೋಜಿಸಲಾಗಿದ್ದ 'ವಿಶ್ವ ಪರಿಸರ ಮಾಸಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪರಿಸರ ದಿನಾಚರಣೆಗೆ ಇಂತಹ ದಿನವೆಂದಿಲ್ಲ, ಪ್ರತಿಯೊಂದು ದಿನವು ಪರಿಸರ ದಿನವೇ ಆಗಿದೆ. ಆಧುನಿಕ ಯುಗದಲ್ಲಿ ಪರಿಸರ ಸಂರಕ್ಷಣೆಗೆ ಹೆಚ್ಚು ಒತ್ತು ನೀಡದೆ, ಮುಂದಿನ ಪೀಳಿಗೆ ಹಿತದೃಷ್ಟಿ ಕಾಯದೇ ಮನಬಂದಂತೆ ಪರಿಸರವನ್ನು ಹಾಳುಗೆಡುವುತ್ತಿದ್ದೇವೆ. ಇದು ಹೀಗೆ ಮುಂದುವರಿದರೆ ಮುಂದಿನ ಪೀಳಿಗೆ ಗಂಭೀರವಾದ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸುಮಾರು 30 ವರ್ಷಗಳ ಹಿಂದೆ ಇದ್ದ ರಣಹದ್ದುಗಳ ಸಂತತಿ ಈಗ ಇಲ್ಲ. ಶೇ.98 ಕಡಿಮೆಯಾಗಿ, ನಾಯಿಗಳ ಸಂತಾನೋತ್ಪತ್ತಿ 9 ಮಿಲಿಯನ್‌ಗೆ (90 ಲಕ್ಷ) ಹೆಚ್ಚಾಗಿದೆ. ಇದರಿಂದ ಪ್ರಕೃತಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ರಣಹದ್ದುಗಳು ನಾವು ಬಿಸಾಡುವ ಮಾಂಸ, ರಸ್ತೆ ಬದಿ ಸತ್ತು ಬಿದ್ದಂತಹ ಪ್ರಾಣಿ ಹಾಗೂ ಸತ್ತ ವ್ಯಕ್ತಿ ದೇಹವನ್ನು ಸೇವಿಸಿ ಪರಿಸರವನ್ನು ಸ್ವಚ್ಛಗೊಳಿಸುತ್ತಿದ್ದವು. ಆದರೆ ರಣಹದ್ದುಗಳ ಸಂಖ್ಯೆ ಕ್ಷೀಣಿಸಿ, ನಾಯಿಗಳ ಸಂತತಿ ಹೆಚ್ಚಾಗಿದೆ. ನಾವು ಹಾಕುವಂತಹ ಮಾಂಸಾಹಾರ ಸೇವಿಸಿದ ನಾಯಿಗಳು ಮಾಂಸಾಹಾರಕ್ಕೆ ಹಪಹಪಿಸುತ್ತಿರುತ್ತವೆ. ಅವುಗಳಿಗೆ ಮಾಂಸಾಹಾರ ಸಿಗದಿದ್ದಾಗ ಮನುಷ್ಯರ ಮೇಲೆ ದಾಳಿ ಮಾಡುತ್ತವೆ. ಅದರಿಂದಾಗಿ ವರ್ಷದಲ್ಲಿ ದೇಶದಲ್ಲಿ ನಾಯಿಕಡಿತ ಸಂಖ್ಯೆ 1 ಕೋಟಿ 30 ಲಕ್ಷಕ್ಕೆ ಏರಿಕೆಯಾಗಿದೆ. ಅಲ್ಲದೇ ನಾಯಿ ಕಡಿತದಿಂದ ಬರುವ ರೇಬಿಸ್ ರೋಗಕ್ಕೆ ಕಡಿವಾಣ, ಚಿಕಿತ್ಸೆಗೆ ಕೇಂದ್ರ ಸರ್ಕಾರದಿಂದ 1300 ಕೋಟಿ ವ್ಯಯಿಸಲಾಗುತ್ತಿದೆ. ಹಾಗಾಗಿ ನಾಯಿಗಳಿಗೆ ಆದಷ್ಟೂ ಸಸ್ಯಹಾರ ನೀಡಿದರೆ ಒಳಿತು ಎಂದು ಸಲಹೆ ನೀಡಿದರು.

ಚಿರತೆಗಳ ಕಾಟಕ್ಕೆ ನಾವೇ ಹೊಣೆ: ಸುಮಾರು 30–40 ವರ್ಷ ಹಿಂದೆ ಮಾಂಸಹಾರ ಸೇವನೆ ತೀರಾ ವಿರಳವಾಗಿತ್ತು. ಆದರೆ ಈಗ ಬಹು ಪ್ರಮಾಣದಲ್ಲಿ ಮಾಂಸಹಾರ ಸೇವನೆ ಮಾಡುತ್ತಿದ್ದೇವೆ. ನಾವು ತಿಂದು ಉಳಿದಂತಹ ಆಹಾರವನ್ನು ಎಲ್ಲೆಂದರಲ್ಲಿ ಚೆಲ್ಲುತ್ತೇವೆ. ಇದರ ವಾಸನೆ ಹಿಡಿದು ಚಿರತೆಗಳು ಬರುತ್ತವೆ. ಅಲ್ಲದೇ ನಾಯಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಚಿರತೆಗೆ ಸುಲಭವಾಗಿ ಸಿಗುವ ನಾಯಿ ಬೇಟೆಯಾಡಲು ಸಹ ಚಿರತೆಗಳು ಗ್ರಾಮೀಣ ಪ್ರದೇಶಗಳತ್ತ ಬರುತ್ತಿವೆ ಎಂದರು.

ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ: ಸುಮಾರು 20 ವರ್ಷಗಳ ಹಿಂದೆ ಮನೆಗೆ ಸಾಮಗ್ರಿ ಖರೀದಿಸಲು ಒಂದು ಬ್ಯಾಗ್ ಬಳಸುತ್ತಿದ್ದೆವು. ಆದರೆ ಈಗ ಪೂರ್ಣ ಪ್ರಮಾಣದಲ್ಲಿ ಪ್ಲಾಸ್ಟಿಕ್ ಮೇಲೆ ಅವಲಂಬಿತರಾಗಿದ್ದೇವೆ. ಆ ಪ್ಲಾಸ್ಟಿಕ್‌ನಿಂದ ಹೊರಸೂಸುವ 3.6%ರಷ್ಟು ಗ್ಯಾಸ್ ಪ್ರಮಾಣ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತದೆ. ನಾವು ಓಡಾಡುವ ವಾಹನಗಳಲ್ಲಿ ಒಂದು ಬ್ಯಾಗ್ ಇರಿಸಿಕೊಳ್ಳುವ ಅಭ್ಯಾಸ ರೂಢಿಸಿಕೊಳ್ಳಬೇಕು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು, ಅಲ್ಲದೇ ಕಾರ್ಖಾನೆಗಳು ಜನರಿಗೆ ಕೈಗೆಟಕುವ ದರದಲ್ಲಿ ಸಿಗುವಂತಹ ಬ್ಯಾಗ್‌ಗಳನ್ನು ಉತ್ಪತ್ತಿ ಮಾಡಬೇಕು ಎಂದರು.

ಚಾ. ಬೆಟ್ಟದಲ್ಲಿ 40 ಲೋಡ್ ಪ್ಲಾಸ್ಟಿಕ್: ಮಾರ್ಚ್ 3ರಂದು 1 ತಿಂಗಳ ಕಾಲ 'ಪ್ಲಾಸ್ಟಿಕ್ ಮುಕ್ತ ಚಾಮುಂಡಿ' ಸ್ವಚ್ಛತಾ ಅಭಿಯಾನ ಕೈಗೊಂಡಿದ್ದೆವು. ಚಾಮುಂಡಿ ಬೆಟ್ಟದಲ್ಲಿ ಸುಮಾರು 40 ಲೋಡ್ ಪ್ಲಾಸ್ಟಿಕ್ ಸಂಗ್ರಹವಾಗಿತ್ತು. ಚಾಮುಂಡಿ ಬೆಟ್ಟ ಪ್ಲಾಸ್ಟಿಕ್ ಮುಕ್ತವಾಗಬೇಕು ಆ ನಿಟ್ಟಿನಲ್ಲಿ ಈಗಾಗಲೇ ಜಿಲ್ಲಾಧಿಕಾರಿ ಡಾ. ಕೆವಿ.ರಾಜೇಂದ್ರ ಹಾಗೂ ಮುಜರಾಯಿ ಇಲಾಖೆಯೊಂದಿಗೆ ಮಾತನಾಡಿದ್ದೇನೆ. ಜೊತೆಗೆ ಸಾರ್ವಜನಿಕರು ತನು, ಮನ, ಧನ ಸಹಾಯ ಮಾಡುವ ಮೂಲಕ, ಬೆಟ್ಟದ ಅಭಿವೃದ್ಧಿಗೆ ಸಹಾಯ ಮಾಡಬಹುದು ಎಂದರು.

ಜೂನ್ ಪೂರ್ತಿ ಪರಿಸರ ದಿನಾಚರಣೆ: ವಿಶ್ವ ಪರಿಸರ ಮಾಸಾಚರಣೆ ಸಮಿತಿಯಿಂದ ಜೂನ್ ತಿಂಗಳಲ್ಲಿ 16 ಕಾರ್ಯಕ್ರಮಗಳ ಮೂಲಕ ಪರಿಸರ ಮಾಲಿನ್ಯದ ಕುರಿತು ಜಾಗೃತಿ ಅಭಿಯಾನ ಕೈಗೊಳ್ಳಲಾಗುವುದು. ಮೊದಲಿಗೆ ಜೂನ್ 5 ರಂದು ದಟ್ಟಗಳ್ಳಿ, ಶ್ರೀರಾಂಪುರ ಉದ್ಯಾನವನದಲ್ಲಿ ಗಿಡ ನೆಡುವ ಕಾರ್ಯಕ್ರಮ. ಬಳಿಕ 10ರಂದು ಪರಿಸರ ಸ್ನೇಹಿ ಎಕ್ಸ್‌ಪೋ, 13ಕ್ಕೆ ಗೃಹಿಣಿಯರಿಗೆ ಮಾಹಿತಿ ಕಾರ್ಯಾಗಾರ, 17ಕ್ಕೆ ಹಸಿರು ಸಂಗಮ ಅನ್ವೇಷಣೆ ಕಾರ್ಯಕ್ರಮ, 18ಕ್ಕೆ ಚಾಮುಂಡಿ ಬೆಟ್ಟದಲ್ಲಿ ಬೈಸಿಕಲ್ ಥಾನ್, 21ಕ್ಕೆ ವಿಶ್ವ ಯೋಗ ದಿನಾಚರಣೆ, 25ಕ್ಕೆ ಶಾಲಾ ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ ಮತ್ತು ಚರ್ಚಾ ಸ್ಪರ್ಧೆ, 29ಕ್ಕೆ ಮಡಿಕೇರಿ ಚಾರಣಕ್ಕೆ ಟ್ರೆಕ್ಕಿಂಗ್, 30ಕ್ಕೆ ಸಮಾರೋಪ ಸಮಾರಂಭ ಆಯೋಜಿಸಲಾಗಿದೆ ಎಂದು ವಿಶ್ವ ಪರಿಸರ ಮಾಸಾ ಚರಣೆ ಸಮಿತಿ ಸಂಸ್ಥಾಪಕ ಎ.ಎಸ್. ಯೋಗನರಸಿಂಹ ಮಾಹಿತಿ ನೀಡಿದರು.

ಮುಖ್ಯ ಅತಿಥಿಯಾಗಿ ಸಂರಕ್ಷಣಾ ಜೀವಶಾಸ್ತ್ರಜ್ಞ ಸಂಜಯ್ ಗುಬ್ಬಿ, ಮೈಸೂರು ಬಿಎಐ ಸಂಸ್ಥಾಪಕ ನಾಗರಾಜ್ ವಿ. ಭೈರಿ, ಕಾರ್ಯದರ್ಶಿ ಬಾಲಾಜಿ ಕೆ.ಎಸ್, ವಿಶ್ವ ಪರಿಸರ ಮಾಸಾಚರಣೆ ಸಮಿತಿ ಸಂಸ್ಥಾಪಕ ಎ.ಎಸ್. ಯೋಗನರಸಿಂಹ, ವಿ.ಪ.ಮಾ.ಸ. ಕಾರ್ಯದರ್ಶಿ ವಿ. ಗುರುದತ್, ಮುರಳಿಧರ್, ವಿಶ್ವನಾಥ್, ಶ್ರವಣ್ ಮತ್ತಿತರರಿದ್ದರು.

2024ರ ಏಪ್ರಿಲ್‌ನಿಂದ ದೇವನಹಳ್ಳಿ ಘಟಕದಲ್ಲಿ ಐ ಫೋನ್ ಉತ್ಪಾದನೆ ಆರಂಭ: ಜುಲೈ 1ರ ವೇಳೆಗೆ ಭೂಮಿ ಹಸ್ತಾಂತರ

ಬೆಂಗಳೂರು, ಜೂ.1(ಕೆಎಂಶಿ)– ಮುಂಚೂಣಿ ಐಫೋನ್ ತಯಾರಿಕಾ ಕಂಪನಿ ಫಾಕ್ಸ್ ಕಾನ್ 2024ರ ಏಪ್ರಿಲ್ 1ರ ವೇಳೆಗೆ ದೇವನಹಳ್ಳಿ ಘಟಕದಲ್ಲಿ ಉತ್ಪಾದನೆ ಆರಂಭಿಸುವ ಗುರಿ ಹೊಂದಿದ್ದು, ಇದಕ್ಕೆ ಪೂರಕವಾಗಿ ಜುಲೈ 1ರ ಹೊತ್ತಿಗೆ ಪೂರ್ತಿಯಾಗಿ ಭೂಮಿ ಹಸ್ತಾಂತರಿಸುವುದಾಗಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ಹೇಳಿದರು.

ಜಾರ್ಜ್ ಚು ಅವರ ನೇತೃತ್ವದಲ್ಲಿ ಫಾಕ್ಸ್ ಕಾನ್ ಕಂಪನಿಯ ಉನ್ನತ ಅಧಿಕಾರಿಗಳ ತಂಡವು ಸೌಜನ್ಯದ ಭೇಟಿ ನೀಡಿದ್ದ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನೇತೃತ್ವದ ಹೊಸ ಸರ್ಕಾರವು 50,000 ಜನರಿಗೆ ಉದ್ಯೋಗ ಒದಗಿಸುವ 13,600 ಕೋಟಿ ರೂಪಾಯಿಯ ಮೊತ್ತದ ಈ ಯೋಜನೆ ಜಾರಿಗೆ ವೇಗ ನೀಡಿದಂತಾಗಿದೆ ಎಂದರು. ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ (ಐಟಿಐಆರ್) ಕಾರ್ಯಯೋಜನೆಗಾಗಿ 300 ಎಕರೆ ಗುರುತಿಸಲಾಗಿದೆ. 2024ರ ಏಪ್ರಿಲ್ 1ರ ವೇಳೆಗೆ ಇಲ್ಲಿ ಕಂಪನಿಯು ತಯಾರಿಕೆ ಶುರು ಮಾಡುವ ಗುರಿ ಹಾಕಿಕೊಂಡಿದೆ. ಇದನ್ನು ಗಮನದಲ್ಲಿರಿಸಿಕೊಂಡು ಜುಲೈ 1ಕ್ಕೆ ಮುಂಚೆ ಕಂಪನಿಗೆ ಭೂಮಿ ಹಸ್ತಾಂತರಿಸಲಾಗುವುದು ಎಂದರು. ಕಂಪನಿಯು ದಿನಕ್ಕೆ 50 ಲಕ್ಷ ಲೀಟರ್ ನೀರು ಬೇಕಾಗುವುದಾಗಿ ತಿಳಿಸಿದೆ. ಇದನ್ನು ಪೂರೈಸುವ ಜೊತೆಗೆ ಗುಣಮಟ್ಟದ ವಿದ್ಯುತ್, ರಸ್ತೆ ಸಂಪರ್ಕ ಇತ್ಯಾದಿ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

ಕಂಪನಿಯ ಸಿಬ್ಬಂದಿಗೆ ಬೇಕಾಗುವ ಕೌಶಲ ವಿವರಗಳನ್ನು ಕೂಡ ಕೇಳಲಾಗಿದೆ. ಅದಕ್ಕೆ ತಕ್ಕಂತೆ ಸರ್ಕಾರದ ವತಿಯಿಂದ ಅರ್ಹರಿಗೆ ಕೌಶಲಗಳ ತರಬೇತಿ ಕೊಟ್ಟು ಮಾನವ ಸಂಪನ್ಮೂಲ ಲಭ್ಯವಾಗಿಸಲು ಒತ್ತು ಕೊಡುವುದಾಗಿಯೂ ಅವರು ತಿಳಿಸಿದರು. ತೈವಾನ್ ಮೂಲದ ಮುಂಚೂಣಿ ಕಂಪನಿಯು ಮೂರು ಹಂತಗಳಲ್ಲಿ ಘಟಕ ನಿರ್ಮಾಣ ಪೂರೈಸಿ ಅಂತಿಮವಾಗಿ ಇಲ್ಲಿ ವರ್ಷಕ್ಕೆ 2 ಕೋಟಿ ಮೊಬೈಲ್‌ಗಳನ್ನು ತಯಾರಿಸುವ ಯೋಜನೆ ಹಾಕಿಕೊಂಡಿದೆ. ಈಗಾಗಲೇ ಭೂಮಿಗಾಗಿ ನಿಗದಿಗೊಳಿಸಿರುವ ಮೊತ್ತದಲ್ಲಿ ಶೇಕಡ 30ರಷ್ಟನ್ನು (90 ಕೋಟಿ ರೂ) ಕಂಪನಿಯು ಕೆಐಎಡಿಬಿಗೆ ಪಾವತಿಸಿದೆ.

ವಿಧಾನಸೌಧ ಕೊಠಡಿಯಿಂದ ಸಿದ್ಧಗಂಗಾ ಶ್ರೀಗಳ ಫೋಟೋ ಹೊರಕ್ಕೆ; ಬಿಜೆಪಿ ಕಿಡಿ



ಬೆಂಗಳೂರು, ಜೂ.1– ವಿಧಾನಸೌಧದ ಕೊಠಡಿಯಲ್ಲಿ ಹಾಕಲಾಗಿದ್ದ ಸಿದ್ದಗಂಗಾ ಶ್ರೀ ಡಾ। ಶಿವಕುಮಾರ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರ ಭಾವಚಿತ್ರವನ್ನು ತೆರವುಗೊಳಿಸಿ, ಪಡಸಾಲೆಯಲ್ಲಿ ರಾಶಿ ಹಾಕಿರುವುದನ್ನು ರಾಜ್ಯ ಬಿಜೆಪಿ ಟ್ವೀಟ್ ಮಾಡಿ ಖಂಡಿಸಿದೆ. 'ಇದು ಅಹಂಕಾರದ ಪರಮಾವಧಿ' ಎಂದು ಆಕ್ರೋಶ ವ್ಯಕ್ತಪಡಿಸಿದೆ. ಆಡಳಿತ ಪಕ್ಷ ಕಾಂಗ್ರೆಸ್ ಸರಕಾರಕ್ಕೆ ಕೇಸರಿ ಎಂದರೆ ದ್ವೇಷ ಮತ್ತು ಶತ್ರುಭಾವ. ಇಂದು ನಡೆದಾಡುವ ದೇವರು, ಕಾಯಕಯೋಗಿ, ತ್ರಿವಿಧ ದಾಸೋಹಿ ಪರಮ ಪೂಜನೀಯ ಡಾ. ಶಿವಕುಮಾರ ಮಹಾಸ್ವಾಮೀಜಿಯವರ ಭಾವಚಿತ್ರವನ್ನು ವಿಧಾನ ಸೌಧದ ಕೊಠಡಿಯಿಂದ ತೆರವುಗೊಳಿಸಿ ಪಡಸಾಲೆಯಲ್ಲಿ ತಂದು ಹಾಕಿ ಅಪಮಾನಿಸಿರುವುದು ಅಕ್ಷಮ್ಯ ಅಪರಾಧ ಎಂದು ಬಿಜೆಪಿ ಟೀಕಿಸಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ರಾಜ್ಯದ ಜನತೆಯ ಕ್ಷಮೆ ಕೋರಬೇಕು. ಜತೆಗೆ ಡಾ. ಶಿವಕುಮಾರ ಮಹಾಸ್ವಾಮೀಜಿಯವರ ಭಾವಚಿತ್ರವನ್ನು ಸಕಲ ಗೌರವಗಳೊಂದಿಗೆ ಪುನಃ ಕೊಠಡಿಯೊಳಗೆ ಲಗತ್ತಿಸಬೇಕು ಎಂದು ರಾಜ್ಯ ಬಿಜೆಪಿ ಆಗ್ರಹಿಸಿದೆ.

ಮೈಸೂರು ಮಿತ್ರ

ಶುಕ್ರವಾರ 2 ಜೂನ್ 2023

ಮಾವು, ಹಲಸು ಮೇಳದಲ್ಲಿ 22 ಲಕ್ಷ ರೂ. ವಹಿವಾಟು

ಮಡಿಕೇರಿ, ಜೂ.1– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತೋಟಗಾರಿಕೆ ಇಲಾಖೆ ಹಾಗೂ ಕೊಡಗು ಜಿಲ್ಲಾ ಹಾಪ್‌ಕಾಮ್ಸ್ ಸಹಯೋಗದೊಂದಿಗೆ ಮಡಿಕೇರಿ ನಗರದ ಹಾಪ್‌ಕಾಮ್ಸ್ ಮುಖ್ಯ ಕಚೇರಿ ಆವರಣದಲ್ಲಿ ಮೇ 26 ರಿಂದ 28 ರವರೆಗೆ ಮೂರು ದಿನ ಮಾವು ಮತ್ತು ಹಲಸು ಮೇಳ ಯಶಸ್ವಿಯಾಗಿ ನಡೆದಿದ್ದು, ಸುಮಾರು 22 ಲಕ್ಷ ರೂ.ಗಳ ವಹಿವಾಟು ನಡೆದಿದೆ.

ಈ ಮೇಳದಲ್ಲಿ ಮಂಡ್ಯ, ರಾಮನಗರ, ಮಂಗಳೂರು, ಮೈಸೂರು ಭಾಗಗಳಿಂದ ರೈತರು ತಾವೇ ಬೆಳೆದಿರುವ ಹಾಗೂ ನೈಸರ್ಗಿಕವಾಗಿ ಮಾಗಿಸಿದ ಒಟ್ಟು 17 ವಿವಿಧ ತಳಿಗಳಾದ ಮಲ್ಲಿಕಾ, ಅಲ್ಫಾನ್ಸೋ, ಮಲಗೋವಾ, ತೋತಪುರಿ, ನೀಲಂ, ರಸಪುರಿ, ಸೇಂದೂರ, ಬಾದಾಮಿ, ಕೇಸರ್ ಹಾಗೂ ಇತ್ಯಾದಿ ಹಣ್ಣುಗಳನ್ನು 20 ಮಳಿಗೆಗಳಲ್ಲಿ ಮಾರಾಟ ಮಾಡಲಾಗಿದೆ.

ಇದರ ಜೊತೆಗೆ ಪುತ್ತೂರು ಎರಡು ಪ್ರಮುಖ ನರ್ಸರಿಗಳು ವಿವಿಧ ಜಾತಿಯ ಹಲಸಿನ ತಳಿಗಳು, ಮಾವು ತಳಿಗಳನ್ನು, ಹಾಗೂ ಇತರೆ ಹಣ್ಣಿನ ಕಸಿ ಗಿಡಗಳನ್ನು ಮಾರಾಟ ಮಾಡಲಾಗಿದೆ. ಇದೇ ಪ್ರಥಮ ಬಾರಿಗೆ ಮಾವಿನ ಹಣ್ಣು ಹಾಗೂ ಹಲಸಿ ನಿಂದ ಸಂಸ್ಕರಣೆ ಮಾಡಿರುವ ಪದಾರ್ಥ ಗಳನ್ನು ಸಹ ಮಾರಾಟಕ್ಕೆ ಇಡಲಾಗಿತ್ತು.

ಮೂರು ದಿನಗಳ ಮಾವು ಮತ್ತು ಹಲಸು ಮೇಳದಲ್ಲಿ 6000 ಗ್ರಾಹಕರು ಭೇಟಿ ನೀಡಿದ್ದು, ಅಂದಾಜು 21000 ಕೆ.ಜಿ.(21 ಎಂಟಿ) ಮಾವಿನ ಹಣ್ಣುಗಳು ಮಾರಾಟವಾಗಿದೆ. ಹಾಗೂ ಅಂದಾಜು 6 ಸಾವಿರ ವಿವಿಧ ಜಾತಿಯ ಹಲಸಿನ ತಳಿಗಳು, ಮಾವು ತಳಿಗಳನ್ನು ಹಾಗೂ ಇತರೆ ಹಣ್ಣಿನ ಕಸಿ ಗಿಡಗಳನ್ನು ಮಾರಾಟವಾಗಿದೆ. ಒಟ್ಟಾರೆ ಮೇಳದಲ್ಲಿ 21 ರಿಂದ 22 ಲಕ್ಷ ವಹಿವಾಟು ನಡೆದಿದೆ.

ಇದರಿಂದ ಕೊಡಗಿನ ಗ್ರಾಹಕರಿಗೆ ವಿವಿಧ ರೀತಿಯ ಮಾವಿನ ಹಣ್ಣುಗಳನ್ನು ರಿಯಾಯಿತಿ ದರದಲ್ಲಿ ಪರಿಚಯಿಸುವುದರೊಂದಿಗೆ ರೈತರಿಗೂ ಸಹ ಮಧ್ಯವರ್ತಿಗಳು ಇಲ್ಲದೇ ನೇರವಾಗಿ ಮಾರಾಟ ಮಾಡಿರುವುದರಿಂದ ಲಾಭದಾಯಕವಾಗಿದೆ ಎಂದು ತೋಟಗಾರಿಕೆ ಉಪ ನಿರ್ದೇಶಕ ಎಚ್.ಆರ್. ನಾಯಕ್ ಅವರು ತಿಳಿಸಿದ್ದಾರೆ.

ದುಸ್ಥಿತಿಯಲ್ಲಿರುವ ಮಡಿಕೇರಿ ಪೊಲೀಸ್ ಚೌಕಿಗಳು

ತುಕ್ಕು ಹಿಡಿದ ಚಾವಣಿ, ಆತಂಕದಿಂದ ಜೀವಿ, ಅಂಗಡಿಗಳ ಮುಂದೆ ನಿಂತು ಕರ್ತವ್ಯ ನಿರ್ವಹಣೆ





ಮಡಿಕೇರಿ, ಜೂ.1– ತುಕ್ಕು ಹಿಡಿದಿರುವ ಮೇಲ್ಚಾವಣಿ.. ಒಳಗೆ ನಿಂತರೆ ಎಲ್ಲಿ ಕುಸಿದು ಬೀಳುವುದೋ ಎಂಬ ಆತಂಕ.. ರಸ್ತೆ ಬದಿಯ ಅಂಗಡಿ ಮುಂಗಟ್ಟುಗಳ ಬಳಿ ನಿಂತು ಸೀಟಿ ಹೊಡೆಯುವ ಪೊಲೀಸರು.. ಬಿಸಿಲು, ಮಳೆಗೆ ಆರಕ್ಷಕರಿಗೆ ರಕ್ಷಣೆ ನೀಡದ ಮಡಿಕೇರಿ ನಗರದ ಪ್ರಮುಖ ವೃತ್ತಗಳಲ್ಲಿರುವ ಪೊಲೀಸ್ ಚೌಕಿಗಳ ಕತೆ ಇದು.

ಹೌದು, ಮಡಿಕೇರಿ ನಗರದಾದ್ಯಂತ ಇರುವ ಪೊಲೀಸ್ ಚೌಕಿಗಳು ತುಕ್ಕು ಹಿಡಿದು ಈಗಲೋ ಆಗಲೋ ಬೀಳುವ ಸ್ಥಿತಿಯಲ್ಲಿವೆ. ಮಡಿಕೇರಿ ನಗರದ ಎಸ್‌ಬಿಐ ಬಳಿ, ಹಳೇ ಖಾಸಗಿ ಬಸ್ ನಿಲ್ದಾಣದ ಅಜ್ಜಮಾಡ ದೇವಯ್ಯ



ವೃತ್ತದ ಬಳಿ, ಮಂಗೇರಿರ ಮುತ್ತಣ್ಣ ವೃತ್ತದ ಬಳಿ, ಜನರಲ್ ತಿಮ್ಮಯ್ಯ ವೃತ್ತದ ಬಳಿ, ಪ್ರವಾಸಿ ತಾಣ ರಾಜಾಸೀಟ್ ಬಳಿ ಇರುವ ಪೊಲೀಸ್ ಚೌಕಿಗಳೆಲ್ಲಾ ಹೀಗೆ ತುಕ್ಕು ಹಿಡಿದು ಈಗಲೋ ಆಗಲೋ ಬೀಳುವ ಸ್ಥಿತಿಯಲ್ಲಿವೆ.

ವಾರಾಂತ್ಯ ಮತ್ತು ಸರಕಾರಿ ರಜೆ ದಿನಗಳಂದು ಪ್ರವಾಸಿಗರ ದಂಡೇ ಮಡಿಕೇರಿ ನಗರಕ್ಕೆ ಹರಿದು ಬರುತ್ತದೆ. ಇದರಿಂದಾಗಿ ನಗರದಲ್ಲಿ ವಾಹನಗಳ ದಟ್ಟಣೆಯೂ ಮಿತಿಮೀರಿರುತ್ತದೆ. ವಾಹನಗಳ ದಟ್ಟಣೆಯನ್ನು ನಿಯಂತ್ರಿಸಲು ಹರಸಾಹಸ ಪಡುವ ಸಂಚಾರಿ ಪೊಲೀಸರು, ಮಾತ್ರ ಪ್ರಮುಖ ವೃತ್ತಗಳಲ್ಲಿರುವ ರಸ್ತೆ ಬದಿಯಲ್ಲೋ ಅಥವಾ ಅಂಗಡಿ ಮುಂಗಟ್ಟುಗಳ ಎದುರು ನಿಂತು ವಾಹನಗಳ ಸಂಚಾರವನ್ನು ನಿಯಂತ್ರಿಸುವ ಮೂಲಕ ಕರ್ತವ್ಯವನ್ನು ನಿಭಾಯಿಸಬೇಕಿದೆ. ಏಕೆಂದರೆ ಪೊಲೀಸ್ ಚೌಕಿಗಳಲ್ಲಿ ನಿಂತು ವಾಹನಗಳ ಸಂಚಾರವನ್ನು ನಿಯಂತ್ರಿಸೋಣವೆಂದರೆ ತುಕ್ಕು ಹಿಡಿದ ಪೊಲೀಸ್ ಚೌಕಿಗಳು ಎಲ್ಲಿ ಕುಸಿದು ಬೀಳುವುದೋ ಎಂಬ ಆತಂಕ ಕಾಡುತ್ತಿವೆ.



ಯಾವುದೋ ಕಾಲದಲ್ಲಿ ನಿಲ್ಲಿಸಿದ್ದ ಪೊಲೀಸ್ ಚೌಕಿಗಳು ಸೂಕ್ತ ನಿರ್ವಹಣೆ ಇಲ್ಲದೇ ಸಂಪೂರ್ಣ ತುಕ್ಕು ಹಿಡಿದಿದ್ದು, ಕೈಇಟ್ಟಲ್ಲಿ ಕಿತ್ತು ಬರುವ ಸ್ಥಿತಿಯಲ್ಲಿವೆ. ಕೆಲವು ಪೊಲೀಸ್ ಚೌಕಿಗಳ ತಳಭಾಗ ಸಿಮೆಂಟ್ ಕಿತ್ತು ಹೋಗಿರುವುದು ಕಂಡು ಬರುತ್ತದೆ. ಇನ್ನು ರಾಜಾಸೀಟು ಬಳಿ ಇರುವ ಪೊಲೀಸ್ ಚೌಕಿ ಒಳಭಾಗ ಸಂಪೂರ್ಣ ಕಸದ ಕೊಂಪೆಯಂತಾಗಿದೆ.

ಇಂತಹ ಚೌಕಿಗಳಲ್ಲಿ ಕರ್ತವ್ಯ ನಿಭಾಯಿಸೋದೆ ಟ್ರಾಫಿಕ್ ಪೊಲೀಸರಿಗೆ ಒಂದು ಸವಾಲು ಎಂಬಂತಾಗಿದೆ. ಇನ್ನಾದರೂ ಸಂಬಂಧಿಸಿದ ಇಲಾಖೆ ಈ ಬಗ್ಗೆ ಗಮನ ಹರಿಸಿ, ಮಡಿಕೇರಿ ನಗರದಲ್ಲಿ ಬದಲಿ ಪೊಲೀಸ್ ಚೌಕಿಗಳನ್ನು ಸ್ಥಾಪಿಸಲು ಮುಂದಾಗಬೇಕಿದೆ. ಆ ಮೂಲಕ ವಾಹನಗಳ ದಟ್ಟಣೆಯನ್ನು ನಿಯಂತ್ರಿಸಲು ಹರಸಾಹಸಪಡುವ ಸಂಚಾರಿ ಪೊಲೀಸರಿಗೆ ಅನುಕೂಲ ಕಲ್ಪಿಸಬೇಕಿದೆ.

ಮತದಾರರಿಗೆ ಶಾಸಕ ಮಂಥರ್‌ಗೌಡ ಕೃತಜ್ಞತೆ



ಗುಡ್ಡೆಹೊಸೂರು, ಜೂ.1– ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಂಥರ್‌ಗೌಡರು ಗುಡ್ಡೆಹೊಸೂರು, ಬಸವನಹಳ್ಳಿ, ರಸಲ್‌ಪುರ, ಬೆಟ್ಟಗೇರಿ ಈ ವಿಭಾಗಗಳಲ್ಲಿ ಅಂಗಡಿಗಳು ಮತ್ತು ಹಲವು ಮನೆಗಳಿಗೆ ಭೇಟಿ ನೀಡಿ, ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಇದಕ್ಕೂ ಮೊದಲು ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಂಭ್ರಮಿಸಿದರು. ಈ ಸಂದರ್ಭ ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ, ಮುಖಂಡ ಮಂಜುನಾಥ್ ಗುಂಡೂರಾವ್, ಮಾಜಿ ಬ್ಲಾಕ್ ಅಧ್ಯಕ್ಷ ಬಿ.ಎಸ್. ಚಂದ್ರಶೇಖರ್, ವಲಯ ಅಧ್ಯಕ್ಷ ಬಿ.ಎಸ್.ಶುಭಶೇಖರ್, ಗ್ರಾಪಂ ಸದಸ್ಯರಾದ ರಮೇಶ್, ನಾರಾಯಣ, ಬಿ.ಸಿ.ಮಲ್ಲಿಕ, ಬಿ.ಟಿ.ಪ್ರಸನ್ನ, ಭೀಮಯ್ಯ ಗುಡ್ಡೆಮನೆ, ರವಿಕುಮಾರ್, ಪಿ.ಬಿ.ಯತೀಶ್, ನವೀನ್.ಬಿ.ಸಿ, ಬಿ.ಎಸ್. ದಿನೇಶ್, ನಂಗಾರು ಜಗ್ಗ ಮುಂತಾದವರು ಹಾಜರಿದ್ದರು.

ಗುಡ್ಡೆಹೊಸೂರಿನಿಂದ ತೆರಳಿದ ಶಾಸಕರು ನಂಜರಾಯಪಟ್ಟಣ ವಾಲ್ನೂರು, ಚೆಟ್ಟಳ್ಳಿ ಗ್ರಾಮಗಳಿಗೆ ತೆರಳಿ ಮತದಾರರಿಗೆ ಅಭಿನಂದನೆ ಸಲ್ಲಿಸುವುದರೊಂದಿಗೆ ಜನರ ಅಹವಾಲುಗಳನ್ನು ಸ್ವೀಕರಿಸಿದ್ದಾರೆ.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಜೂ.1– ಪೊನ್ನಂಪೇಟೆ ಮತ್ತು ವಿರಾಜಪೇಟೆ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ನಿರ್ವಹಣೆ ಕಾರ್ಯ ನಿರ್ವಹಿಸಬೇಕಿರುವುದರಿಂದ ಜೂ.3 ರಂದು ಬೆಳಗ್ಗೆ 9.30 ರಿಂದ ಸಂಜೆ 4 ಗಂಟೆವರೆಗೆ ಪೊನ್ನಂಪೇಟೆ, ಗೋಣಿಕೊಪ್ಪಲು, ನಲ್ಲೂರು, ಹುದಿಕೇರಿ, ತಿತಿಮತಿ, ಹಾತೂರು, ಪಾಲಿಬೆಟ್ಟ, ಶ್ರೀಮಂಗಲ, ಬಾಳಲೆ, ಕಾನೂರು, ಬಿರುನಾಣಿ, ಕುಟ್ಟ ವಿರಾಜಪೇಟೆ, ಬಿ.ಶೆಟ್ಟಿಗೇರಿ, ಬೇತ್ರಿ, ಕಡಂಗಮರೂರು, ಕಾಕೋಟುಪರಂಬು, ಅಮ್ಮತ್ತಿ, ಸಿದ್ದಾಪುರ, ಮಾಲ್ದಾರೆ, ಮೂರ್ನಾಡು, ಮರುಗೋಡು, ನಾಪೋಕ್ಲು, ಕಕ್ಕಬೆ, ಅರೆಕಾಡು, ಐಯ್ಯಂಗೇರಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಶಿಕ್ಷಣದ ಮೂಲಕ ಗುರಿ ತಲುಪಲು ಸಾಧ್ಯ: ಪೊನ್ನಣ್ಣ

ಎಸ್‌ಎಸ್‌ಎಲ್‌ಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಾಸಕರಿಂದ ಸನ್ಮಾನ

ವಿರಾಜಪೇಟೆ, ಜೂ.1– ವಿದ್ಯಾರ್ಥಿಗಳು ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸುವ ಮೂಲಕ ಜೀವನದಲ್ಲಿ ತಮ್ಮ ಗುರಿ ಮುಟ್ಟುವಂತಾಗಬೇಕು ಎಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಕರೆ ನೀಡಿದ್ದಾರೆ.

ನಗರದಲ್ಲಿರುವ ಪ್ರಗತಿ ಶಾಲಾ ಆಡಳಿತ ಮಂಡಳಿ ವತಿಯಿಂದ ಶಾಲಾ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿರಾಜಪೇಟೆ ತಾಲೂಕಿನ ನಾಲ್ಕು ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಹೊರಗಿನ ಪ್ರಪಂಚದ ಅರಿವು ಅಗತ್ಯ. ಕಂಪ್ಯೂಟರ್ ಯುಗದಲ್ಲಿ ಪುಸ್ತಕದಲ್ಲಿರುವ ಪಾಠದೊಂದಿಗೆ ಇತರೆ ವಿಷಯಗಳ ಬಗ್ಗೆ ಕಲಿತು ಶಿಸ್ತು ಮತ್ತು ಛಲದಿಂದ ಗುರಿಮುಟ್ಟಲು ಮುಂದಾಗಬೇಕು ಹಾಗೂ ವಿದ್ಯಾರ್ಥಿಗಳು ಗುರು ಹಿರಿಯರಿಗೆ ಗೌರವ ನೀಡುವ ಮೂಲಕ ಅವರಿಂದ ಉತ್ತಮ ಶಿಕ್ಷಣ ಪಡೆಯಲು ಪ್ರಯತ್ನಿಸಬೇಕು ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬಿಳಗಿ ಮಾತನಾಡಿದರು. ಹೆಚ್ಚು ಅಂಕ ಪಡೆದ



ವಿರಾಜಪೇಟೆ ಸಂತ ಅನ್ನಮ್ಮ ಪ್ರೌಢಶಾಲೆ ವಿದ್ಯಾರ್ಥಿನಿ ಟಿ.ವಿ.ವೈಷ್ಣವಿ (ಶೇ.99.20), ಕಳತ್ಮಾಡು ಲಯನ್ಸ್ ಪ್ರೌಢಶಾಲೆಯ ವಿದ್ಯಾರ್ಥಿ ದೀತ್ಯಾ ದೇಚಮ್ಮ (ಶೇ.98.88), ಗೋಣಿಕೊಪ್ಪಲು ಸಂತ ಥಾಮಸ್ ಪ್ರೌಢಶಾಲೆ ವಿದ್ಯಾರ್ಥಿ ಎಸ್.ಎಂ.ಶಾಹಿರಾ (ಶೇ.97.92), ಟಿ.ಶೆಟ್ಟಿಗೇರಿ ರೂಟ್ಸ್ ಪ್ರೌಢಶಾಲೆ ವಿದ್ಯಾರ್ಥಿ ಶ್ರಾವ್ಯ ಚೋಂದಮ್ಮ (ಶೇ.97.92) ಅವರನ್ನು ಆಡಳಿತ ಮಂಡಳಿ ವತಿಯಿಂದ ಶಾಸಕ ಪೊನ್ನಣ್ಣ ಅವರು ಸನ್ಮಾನಿಸಿ, ಗೌರವಿಸಿದರು. ಬಳಿಕ ಸನ್ಮಾನಿತ ವಿದ್ಯಾರ್ಥಿಗಳು ಮಾತನಾಡಿದರು.

ಈ ಸಂದರ್ಭ ಶಾಸಕ ಎ.ಎಸ್.ಪೊನ್ನಣ್ಣ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗೂ ವೇದಿಕೆಯಲ್ಲಿ ಶಾಲಾ ಆಡಳಿತ ಮಂಡಳಿಯಿಂದ ಸನ್ಮಾನಿಸಲಾಯಿತು. ಪ್ರಗತಿಶಾಲಾ ಮುಖ್ಯ ವ್ಯವಸ್ಥಾಪಕರಾದ ಮಾದಂಡ ತಿಮ್ಮಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು, ವೇದಿಕೆಯಲ್ಲಿ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಮಾದಂಡ ಎಸ್.ಪೂವಯ್ಯ, ಶಿಕ್ಷಣ ಇಲಾಖೆಯ ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿ ಅಯ್ಯಪ್ಪ ಉಪಸ್ಥಿತರಿದ್ದರು.

ಶಿಕ್ಷಕಿ ಕೆ.ಎನ್.ಪ್ರತೀಮ ಸ್ವಾಗತಿಸಿದರು, ಪ್ರೌಢಶಾಲಾ ಮುಖ್ಯ ಶಿಕ್ಷಕಿ ನೀತು ನಂಬಿಯರ್ ನಿರೂಪಿಸಿದರೆ, ಪ್ರಾಥಮಿಕ ಮುಖ್ಯ ಶಿಕ್ಷಕಿ ಪಿ.ಎಸ್.ವಿಮಲ ವಂದಿಸಿದರು.

ಕುಂಡಾಮೇಸ್ತ್ರಿ ಯೋಜನೆ ಸಮಗ್ರ ತನಿಖೆಗೆ ಆಗ್ರಹ

ಮಡಿಕೇರಿ, ಜೂ.1– ಮಡಿಕೇರಿ ನಗರಕ್ಕೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವಲ್ಲಿ ವಿಫಲವಾಗಿರುವ ಕುಂಡಾಮೇಸ್ತ್ರಿ ಯೋಜನೆಯ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಸೋಮವಾರಪೇಟೆ ತಾಲೂಕು ಸಂಚಾಲಕ ಲಕ್ಷ್ಮಣ್ ಗರಗಂದೂರು ಸಂಸದ ಪ್ರತಾಪ್ ಸಿಂಹ ಅವರಿಗೆ ಮನವಿ ಸಲ್ಲಿಸಿದ್ದಾರೆ



ಮಡಿಕೇರಿ ನಗರಕ್ಕೆ ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸಲು ಕೆಲವು ವರ್ಷಗಳ ಹಿಂದೆ ಬೇತ್ರಿ ಯೋಜನೆಯನ್ನು ರೂಪಿಸಲಾಗಿತ್ತು. ಆದರೆ ಕೆಲವು ಜನಪ್ರತಿನಿಧಿಗಳ ಸ್ವಹಿತಾಸಕ್ತಿಗಾಗಿ ಕುಂಡಾಮೇಸ್ತ್ರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಈ ಯೋಜನೆ ಅನುಷ್ಠಾನಗೊಂಡು 7 ವರ್ಷ ಕಳೆದರೂ ನಗರಕ್ಕೆ ಕುಡಿಯುವ ನೀರಿನ ಭಾಗ್ಯ ದೊರೆತ್ತಿಲ್ಲ. ಬೇಸಿಗೆಯಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವ ದೌರ್ಭಾಗ್ಯ ತಪ್ಪಿಲ್ಲ ಎಂದು ಆರೋಪಿಸಿದರು. ತಕ್ಷಣ ಕುಂಡಾಮೇಸ್ತ್ರಿ ಯೋಜನೆಯ ಲೋಪವನ್ನು ಪತ್ತೆಹಚ್ಚಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಕೊಡಗು ಜಿಲ್ಲೆಗೆ ರೈಲು ಮಾರ್ಗದ ಸಂಪರ್ಕ ಕಲ್ಪಿಸುವ ಯೋಜನೆ ವಿಳಂಬವಾಗುತ್ತಿದ್ದು, ಇದನ್ನು ಚುರುಕುಗೊಳಿಸಲು ಕ್ರಮ ಕೈಗೊಳ್ಳಬೇಕು. ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಜಿಲ್ಲಾಧಿಕಾರಿಗಳ ಕಚೇರಿ ತಡೆಗೋಡೆಯ ಅವೈಜ್ಞಾನಿಕ ಕಾಮಗಾರಿಯ ಕುರಿತು ಕೂಡ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಮುಂದಾಗಬೇಕು ಎಂದು ಲಕ್ಷ್ಮಣ್ ಒತ್ತಾಯಿಸಿದರು.

ಕೃಷಿ ಸಾಲಕ್ಕಾಗಿ ಒತ್ತಾಯಿಸಿ ರೈತರ ಪ್ರತಿಭಟನೆ

ಚಾಮರಾಜನಗರ, ಜೂ. 1– ಕೃಷಿ ಸಾಲ ಕೊಡುವಂತೆ, ನಕಲಿ ಅಕೌಂಟ್ ದಾರರ ವಿರುದ್ಧ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಆಶ್ರಯದಲ್ಲಿ ರೈತರು ನಗರದ ಬ್ಯಾಂಕ್ ಆಫ್ ಬರೋಡ ಶಾಖೆ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.



ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಅವರ ನೇತೃತ್ವದಲ್ಲಿ ಜಮಾಯಿಸಿದ ರೈತರು ಬ್ಯಾಂಕ್ ವ್ಯವಸ್ಥಾಪಕರು, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಬ್ಯಾಂಕ್ ವ್ಯವಸ್ಥಾಪಕ ಓಂರಾಜು 15 ದಿನಗಳೊಳಗೆ ಕೃಷಿ ಸಾಲ ಕೊಡುವುದಾಗಿ ಭರವಸೆ ನೀಡಿದ ಮೇಲೆ ಪ್ರತಿಭಟನೆ ಕೈಬಿಡಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನಾ ನೇತೃತ್ವ ವಹಿಸಿದ್ದ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಮಾತನಾಡಿ, ನಗರದ ಬ್ಯಾಂಕ್ ಆಫ್ ಬರೋಡಾ ಶಾಖೆಯಲ್ಲಿ ನೂರಾರು ರೈತರ ಖಾತೆಯನ್ನು ನಕಲಿ ಅಕೌಂಟ್ ಎಂದು ಗುರುತಿಸಿದ್ದು, ಆ ರೈತರಿಗೆ ಹೊಸ ಕೃಷಿ ಸಾಲ ಕೊಡುತ್ತಿಲ್ಲ. ಸಾಲ ತೀರುವಳಿ ಮಾಡಿಕೊಳ್ಳಲು ಮುಂದೆ ಬರುವ ರೈತರಿಂದ ಹೆಚ್ಚುವರಿ ಹಣ ವಸೂಲು ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಬೇಬಾಕಿ ಪತ್ರ ಕೊಡುತ್ತಿಲ್ಲ. ಅವರಿಗೆ ಹೊಸ ಕೃಷಿ ಸಾಲ ಕೊಡದೇ ಬ್ಯಾಂಕ್ ಅಧಿಕಾರಿಗಳು ರೈತರ ವಿರೋಧಿ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿದರು.

ರೈತರು ಹೊಸ ಕೃಷಿ ಸಾಲ ಕೇಳಲು ಬ್ಯಾಂಕ್ ಬಂದರೆ ಅಧಿಕಾರಿಗಳು ನಿಮ್ಮದು ನಕಲಿ ಖಾತೆ ಇದೆ ಎಂದು ಹೇಳುವ ಮೂಲಕ ರೈತರಿಗೆ ಕಿರುಕುಳ ಕೊಡುತ್ತಿದ್ದಾರೆ. ಸರ್ಕಾರ ವಿವಿಧ ಯೋಜನೆಗಳಿಂದ ಖಾತೆಗೆ ಬರುವ ಸಹಾಯಧನ, ಪರಿಹಾರ ಹಣವನ್ನು ರೈತರಿಗೆ ಕೊಡುತ್ತಿಲ್ಲ. ಸಿಬಿಲ್ ಸ್ಕೋರ್ ಕೇಳುವುದು, ರೈತರನ್ನು ಏಕೆ ಸಿವಿಲ್ ಸ್ಕೋರ್ ಕೇಳುತ್ತಿದ್ದೀರಿ, ಅನೇಕ ಉದ್ಯಮಿಗಳು ಸಾವಿರಾರು ಕೋಟಿಗಳನ್ನು ಗುಳುಂ ಮಾಡಿ ಪರಾರಿಯಾಗಿದ್ದಾರೆ. ಅವರ್‍ಯಾರಿಗೂ ಸಿಬಿಲ್ ಸ್ಕೋರ್ ಕೇಳಿಲ್ಲ. 1 ಲಕ್ಷ, 50 ಸಾವಿರ ಸಾಲ ತೆಗೆದುಕೊಳ್ಳಲು ಬಂದರೆ ಆಧಾರ್ ಕಾರ್ಡ್ ನೋಡಿ ಸಿಬಿಲ್ ಸ್ಕೋರ್ ಕೇಳುವುದು ಎಷ್ಟು ಸರಿ. ಸಿಬಿಲ್ ಸ್ಕೋರ್ ನೋಡಿ ಬ್ಯಾಂಕ್‌ನಿಂದ ಸಾಲ ಸಿಗುವುದಿಲ್ಲ ಎಂದು ಶಾಖಾ ಅಧಿಕಾರಿಗಳು ಹೇಳಿ ರೈತರನ್ನು ವಾಪಸ್ ಕಳುಹಿಸುತ್ತಿರುವುದು ಅತ್ಯಂತ ಖಂಡನೀಯ ಎಂದು ದೂರಿದರು.

ಸಾಲದ ಹಣ ಕಟ್ಟಿರುವ ರೈತರಿಗೆ ಹೊಸ ಸಾಲ ಕೊಡಬೇಕು. ನಕಲಿ ಅಕೌಂಟ್ ದಾರರನ್ನು ಗುರುತಿಸಿ ಬ್ಯಾಂಕ್‌ನಲ್ಲಿ ಅವರ ಭಾವಚಿತ್ರ ಹಾಕಬೇಕು. ಬ್ಯಾಂಕ್‌ನಲ್ಲಿ ನಕಲಿ ಅಕೌಂಟ್ ಹೊಂದಿರುವವರ ವಿರುದ್ಧ ತನಿಖೆ ನಡೆಸಿ. ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜು, ಪ್ರಧಾನ ಕಾರ್ಯದರ್ಶಿ ಮಲೆಯೂರು ಹರ್ಷ, ಉಪಾಧ್ಯಕ್ಷ ಹೆಗ್ಗೋಠಾರ ಶಿವಸ್ವಾಮಿ, ಪ್ರವೀಣ್, ಶಿವಮೂರ್ತಿ, ಚಂದ್ರಪ್ಪ, ಕೆಂಪಣ್ಣ, ಸುಂದರಪ್ಪ, ಇತರರು ಭಾಗವಹಿಸಿದ್ದರು

ಯುವ ಜನರು ತಂಬಾಕು ಸೇವನೆ ತ್ಯಜಿಸಿ

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುನಾಥ ಪ್ರಸನ್ನ



ಚಾಮರಾಜನಗರ, ಜೂ.1– ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ತಂಬಾಕು ಸೇವನೆ ಚಟವನ್ನು ವಿದ್ಯಾರ್ಥಿಗಳು, ಯುವ ಜನರು ತ್ಯಜಿಸಬೇಕೆಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಪ್ರಸನ್ನ ಸಲಹೆ ಮಾಡಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿಂದು ನೆಹರು ಯುವ ಕೇಂದ್ರ, ಶ್ರೀ ವರಮಹಾಲಕ್ಷ್ಮೀ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ತಂಬಾಕಿನಿಂದ ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರಿ ಸಾವು ನೋವುಗಳು ಹೆಚ್ಚಾಗುತ್ತವೆ. ತಂಬಾಕು ಕ್ಯಾನ್ಸರ್ ಹಾಗೂ ಇತರೆ ಖಾಯಿಲೆಗಳಿಗೆ ಕಾರಣವಾಗಬಹುದು. ತಂಬಾಕಿನಿಂದ ಉತ್ತಮ ಜೀವನಶೈಲಿಯು ಬದಲಾಗುವ ಸಾಧ್ಯತೆಗಳು ಉಂಟು. ಈ ರೀತಿ ಚಟಗಳಿಂದ ಯುವಜನರು ದೂರವಿರುವುದು ಸೂಕ್ತ ಎಂದರು.

ಸಾಮಾನ್ಯವಾಗಿ ವಿದ್ಯಾರ್ಥಿಗಳು, ಯುವ ಜನತೆ ಯಾವುದೇ ಅರಿವಿಲ್ಲದೆ ತಂಬಾಕು ಸೇವನೆಗೆ ಬಲಿಯಾಗುತ್ತಿದ್ದಾರೆ. ಪೋಷಕರು ಹಾಗೂ ತಮ್ಮ ಸುತ್ತಲಿನ ಜನರಿಗೆ ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ತಿಳಿಸಿ ಅವರಿಗೆ ಸರಿದಾರಿಗೆ ತರುವಲ್ಲಿ ಪ್ರಯತ್ನಿಸಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಪ್ರಸನ್ನ ಅವರು ತಿಳಿಸಿದರು.

ಜಿಲ್ಲಾ ತಂಬಾಕು ನಿಯಂತ್ರಣ ಘಟಕ ಹಾಗೂ ಸಾಮಾಜಿಕ ಕಾರ್ಯಕರ್ತರಾದ ವೀರಣ್ಣ ಮಾತನಾಡಿ, ತಂಬಾಕಿನಲ್ಲಿ ರಾಸಾಯನಿಕಗಳನ್ನು ಬಳಸುವುದರಿಂದ ಅನಾರೋಗಕ್ಕೆ ಗುರಿಯಾಗಬೇಕಾಗುತ್ತದೆ. ಚಿಕ್ಕ ವಯಸ್ಸಿನಲ್ಲೇ ತಂಬಾಕು ಸೇವನೆಯಿಂದ ಸಾವು ಸಂಭವಿಸುವ ಸಾಧ್ಯತೆ ಉಂಟಾಗುತ್ತದೆ. ಸತತವಾಗಿ 8 ರಿಂದ 10 ವರ್ಷದವರೆಗೆ ತಂಬಾಕು ಸೇವನೆಯಿಂದ ಗಂಭೀರ ಕಾಯಿಲೆಗಳಿಗೆ ತುತ್ತಾಗಬೇಕಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ಚಂದ್ರಮ್ಮ ಮಾತನಾಡಿ, ಸಿಗರೇಟ್‌ನಂತಹ ಚಟಗಳಲ್ಲಿ ಕೆಲವು ವಿದ್ಯಾರ್ಥಿಗಳು ಸಿಲುಕಿಕೊಂಡಿದ್ದಾರೆ. ಸಿನಿಮಾ, ಮತ್ತಿತರ ಮನರಂಜನೆ ಕಾರ್ಯಕ್ರಮಗಳಿಗೆ ಯುವ ಜನತೆ ಮಾರುಹೋಗಿ ಅದನ್ನೇ ಅನುಸರಿಸತೊಡಗಿದ್ದಾರೆ. ವಿದ್ಯಾರ್ಥಿಗಳು ಯಾವುದೇ ಚಟಗಳಿಗೆ ಬಲಿಯಾಗದೇ ಭವಿಷ್ಯದಲ್ಲಿ ಮುಂದೆ ಬರಬೇಕು. ಉತ್ತಮ ಪ್ರಜೆಯಾಗಿ ರೂಪಿತವಾಗಬೇಕು ಎಂದರು.

ನಂತರ ವಿದ್ಯಾರ್ಥಿಗಳಿಗೆ ಚಾರ್ಜರ್ ಬಲ್ಬ್‌ಗಳನ್ನು ವಿತರಣೆ ಮಾಡಲಾಯಿತು. ಶ್ರೀ ವರಮಹಾಲಕ್ಷ್ಮೀ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆಯ ಅಧ್ಯಕ್ಷ ಜಿ. ಬಂಗಾರು, ಅಗ್ನಿಶಾಮಕ ಅಧಿಕಾರಿ ಶಿವಾಜಿರಾವ್ ಪವಾರ್, ತಾಲೂಕು ಆರೋಗ್ಯಾಧಿಕಾರಿ ಡಾ. ಮಂಜುನಾಥ್, ನಗರಸಭೆ ಆರೋಗ್ಯ ನಿರೀಕ್ಷಕ ಮಂಜು, ನೆಹರು ಯುವ ಕೇಂದ್ರದ ಸಹನಾ, ಯುವ ಸ್ಪಂದನಾಧಿಕಾರಿ ಮಾದಲಾಂಬಿಕೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿಶ್ವ ತಂಬಾಕು ವಿರೋಧಿ ಜಾಥಾಕ್ಕೆ ಚಾಲನೆ



ಕೊಳ್ಳೇಗಾಲ, ಜೂ.1– ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಆರೋಗ್ಯ ಇಲಾಖೆ, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ತಂಬಾಕು ವಿರೋಧಿ ದಿನ ಜಾಥಾಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಆನಂದ್ ಚಾಲನೆ ನೀಡಿದರು

ಬಳಿಕ ಮಾತನಾಡಿದ ಅವರು, ತಂಬಾಕು ಸೇವನೆ ಆರೋಗ್ಯಕರವಲ್ಲ, ಹಾಗಾಗಿ ಉತ್ತಮ , ಮೌಲ್ಯಯುತ ಜೀವನಕ್ಕಾಗಿ ಸಾರ್ವಜನಿಕರು ದುಶ್ಚಟಗಳಿಂದ ದೂರವಿರಿ ಎಂದರು. ಭಾರತ ದೇಶದಲ್ಲಿ ಹಲವು ಎನ್‌ಜಿಓ ಸಂಸ್ಥೆಗಳು ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿವೆ ಎಂದರು.

ಜಾಥಾಕ್ಕೆ ಚಾಲನೆ ಬಳಿಕ ಪಟ್ಟಣದ ವಿವಿಧ ರಸ್ತೆಗಳಲ್ಲಿ ತಂಬಾಕು ನಿಷೇಧ ಕುರಿತು ಕರಪತ್ರಗಳನ್ನು ನೀಡುವುದರ ಮೂಲಕ ಜನ ಸಾಮಾನ್ಯರಲ್ಲಿ ಅರಿವು ಮೂಡಿಸಲಾಯಿತು. ಈ ಸಂದರ್ಭದಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶ ಶ್ರೀಮತಿ ನಂದಿನಿ, ಹಿರಿಯ ವಕೀಲ ಮಲ್ಲಿಕಾರ್ಜುನ, ತಾಲೂಕು ಆರೋಗ್ಯಾಧಿಕಾರಿ ಡಾ. ಗೋಪಾಲ್ ಇನ್ನಿತರರು ಇದ್ದರು.

ರತ್ನಮ್ಮ ನಿಧನ

ಚಾಮರಾಜನಗರ, ಜೂ.1– ತಾಲೂಕು



ಅಮಚವಾಡಿ ಗ್ರಾಮದ ಶ್ರೀ ಬಸವಣ್ಣನವರ ಧರ್ಮಪತ್ನಿ ರತ್ನಮ್ಮ (70) ಗುರುವಾರ ಮಧ್ಯಾಹ್ನ ನಿಧನರಾಗಿದ್ದಾರೆ.

ಮೃತರು ಪತಿ ಬಸವಣ್ಣ, ಪುತ್ರರಾದ ಆರ್‌ಟಿಒ ಶಂಭು, ನಾಗೇಶ್ ಮತ್ತು ಪುತ್ರಿ ನಾಗಮಣಿ ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಅಮಚವಾಡಿಯಲ್ಲಿ ನಡೆಯಲಿದೆ.

ನಿವೃತ್ತ ಉಪನ್ಯಾಸಕ ಹೆಚ್.ಮುನಿಸ್ವಾಮಿಗೆ ಬೀಳ್ಕೊಡುಗೆ

ಚಾಮರಾಜನಗರ, ಜೂ. 1– ನಗರದ ಸರ್ಕಾರಿ ಪದವಿಪೂರ್ವ ಬಾಲಕರ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ್ದ ಹೆಚ್.ಮುನಿಸ್ವಾಮಿ ಅವರಿಗೆ ಕಾಲೇಜು ವತಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು.

ಕಾಲೇಜಿನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದ ಹೆಚ್. ಮುನಿಸ್ವಾಮಿ ಮಾತನಾಡಿ, ಸರ್ಕಾರಿ ಸೇವೆಯಲ್ಲಿ ವರ್ಗಾವಣೆ, ವಯೋನಿವೃತ್ತಿ ಸರ್ವೆಸಾಮಾನ್ಯವಾದದ್ದು, ಕಾಲೇಜಿನಲ್ಲಿ ಭೂಗೋಳಶಾಸ್ತ್ರ ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಟ್ಟ ಕಾಲೇಜು ಪ್ರಾಂಶುಪಾಲ ಸೋಮಣ್ಣ ಹಾಗೂ



ಸಹೋದ್ಯೋಗಿಗಳಿಗೆ ಎಂದೆಂದಿಗೂ ಚಿರಋಣಿಯಾಗಿರುವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ಸೋಮಣ್ಣ ಮಾತನಾಡಿ, ಕಾಲೇಜಿನಲ್ಲಿ ಭೂಗೋಳಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿರುವ ಹೆಚ್.ಮುನಿಸ್ವಾಮಿಯವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಶ್ರೀಕಂಠಸ್ವಾಮಿ, ಕೃಷ್ಣಮೂರ್ತಿ, ಸವಿತಾ, ಶೀಲಾ, ಅತಿಥಿ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

ವಿಪ್ರ ಸಮುದಾಯದಿಂದ ಪುಟ್ಟರಂಗಶೆಟ್ಟಿಗೆ ಗೌರವ ಸಮರ್ಪಣೆ



ಚಾಮರಾಜನಗರ, ಜೂ.1– ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 4ನೇ ಬಾರಿ ಆಯ್ಕೆಯಾದ ಸಿ.ಪುಟ್ಟರಂಗಶೆಟ್ಟಿ ಅವರನ್ನು ವಿಪ್ರ ಸಮುದಾಯದ ಪರವಾಗಿ ಭ್ರಮರಾಂಭ ಬಡಾವಣೆಯ ಮನೆಯೊಂದರಲ್ಲಿ ಗೌರವಿಸಿ, ಸನ್ಮಾನಿಸಲಾಯಿತು.

ನಗರದ ಅಗ್ರಹಾರದ ಬೀದಿ ಪಟ್ಟಾಭಿರಾಮ ಮಂದಿರದ ಅಧ್ಯಕ್ಷರು ಹಾಗೂ ಹಿರಿಯ ವಕೀಲರಾದ ಕೆ.ಬಾಲಸುಬ್ರಮಣ್ಯಂ ಮಾತನಾಡಿ, ಜನರ ಮೆಚ್ಚುಗೆಗೆ ಪಾತ್ರರಾಗಿರುವ ಚಾಮರಾಜನಗರದ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಎಲ್ಲರ ಮನಸ್ಸನ್ನು ಗೆದ್ದಿದ್ದಾರೆ. ಅವರ ಗೆಲುವು ನಗರದ ಅಭಿವೃದ್ಧಿಗೆ ಸಹಾಯವಾಗಲಿದೆ. ಧಾರ್ಮಿಕ ಕಾರ್ಯಗಳಿಗೂ ಅವರ ಕೊಡುಗೆ ಅಪಾರವಾಗಿದೆ. ಅವರಿಗೆ ಚಾಮರಾಜೇಶ್ವರ ಸ್ವಾಮಿಯ ಆಶೀರ್ವಾದ ಎಂದಿಗೂ ಇದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೈಗಾರಿಕ ಉದ್ಯಮಿ ಕೆಂಪನಪುರ ಶ್ರೀಧರ್, ಡಾ.ಬಾಲಸುಬ್ರಮಣ್ಯ, ನಾಗೇಂದ್ರ ಪ್ರಸಾದ್ (ಬೆಳ್ಳಿ) ಮಾಜಿ ನಗರಸಭಾ ಸದಸ್ಯೆ ಶಾಂತಲ, ಅರ್ಚಕರಾದ ಕಾರ್ತಿಕ್ ಭಾರದ್ವಾಜ್, ಕಾರ್ ರವಿ, ಶೇಖರ್, ಕಾಶಿ, ರಾಘವೇಂದ್ರ, ಲಕ್ಷ್ಮಿನರಸಿಂಹ ಹಾಗೂ ಇನ್ನು ಮುಂತಾದವರು ಹಾಜರಿದ್ದರು.

ತಾಯಿ ಮಕ್ಕಳ ಆಸ್ಪತ್ರೆಗೆ ಶಾಸಕರ ಭೇಟಿ



ಗುಂಡ್ಲುಪೇಟೆ, ಜೂ.1– ವೈದ್ಯರು ಆಸ್ಪತ್ರೆಗೆ ಬರುವ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಬೇಕು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪಟ್ಟಣದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ದೊರಕದೆ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಬಂದ ದೂರುಗಳ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯಾಧಿಕಾರಿಗಳ ಜೊತೆ ಸಭೆ ನಡೆಸಿ ಅವರು ಮಾತನಾಡಿದರು. ಆಸ್ಪತ್ರೆಯನ್ನು ಶುಚಿತ್ವವಾಗಿ ಇಟ್ಟುಕೊಳ್ಳುವುದರಿಂದ ರೋಗಿಗಳು ಬೇಗ ಗುಣಮುಖರಾಗುತ್ತಾರೆ. ತಾಲೂಕು ಕೇಂದ್ರದಲ್ಲಿರುವ ಆಸ್ಪತ್ರೆಯ ಬಗ್ಗೆ ಅತಿ ಹೆಚ್ಚಿನ ದೂರುಗಳು ಕೇಳಿಬರುತ್ತಿವೆ. ಹೆರಿಗೆಗೆಂದು ಬರುವವರಿಂದ ಲಂಚಕ್ಕೆ ಬೇಡಿಕೆಯಿಡುತ್ತಿರುವ ಹಾಗೂ ಸಕಾಲದಲ್ಲಿ ಆಂಬುಲೆನ್ಸ್ ದೊರಕದಿರುವ ಬಗ್ಗೆ ದೂರುಗಳು ಕೇಳಿಬರುತ್ತಿದ್ದು ಇದು ತಪ್ಪಬೇಕು, ಆಸ್ಪತ್ರೆಗೆ ಯಾವುದೇ ಸವಲತ್ತುಗಳು ಬೇಕಾಗಿದ್ದರೂ ನನ್ನ ಗಮನಕ್ಕೆ ತಂದರೆ ಪೂರೈಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ವಿಶ್ವೇಶ್ವರಯ್ಯ, ತಾಲೂಕು ಆರೋಗ್ಯಾಧಿಕಾರಿ ಡಾ.ಗಿರಿದಾಸ್, ಆಸ್ಪತ್ರೆಯ ಆಡಳಿತ ವೈದ್ಯ ಡಾ.ಅರುಣ್, ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್.ನಂಜಪ್ಪ, ಜಿಪಂ ಮಾಜಿ ಸದಸ್ಯ ಕೆ.ಎಸ್.ಮಹೇಶ್, ತಾಪಂ ಮಾಜಿ ಅಧ್ಯಕ್ಷ ಎಚ್.ಎನ್.ಬಸವರಾಜು ಸೇರಿದಂತೆ ಹಲವರು ಇದ್ದರು.

ಮೈಸೂರು ಮಿತ್ರ

ಶಾಲಾ–ಕಾಲೇಜುಗಳಲ್ಲಿ ಪ್ರತಿದಿನ ಸಂವಿಧಾನದ ಪ್ರಸ್ತಾವನೆ ಓದಲು ಆದೇಶ

- ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸೂಚನೆ
- ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸಮಸ್ಯೆ ಆಗದಂತೆ ಕ್ರಮ ವಹಿಸಲು ಸೂಚನೆ

ಬೆಂಗಳೂರು: ರಾಜ್ಯದ ಶಾಲಾ– ಕಾಲೇಜುಗಳಲ್ಲಿ ಪ್ರತಿದಿನ ವಿದ್ಯಾರ್ಥಿಗಳಿಂದ ಸಂವಿಧಾನದ ಪ್ರಸ್ತಾವನೆ ಓದುವಂತೆ ಪೂರಕ ಆದೇಶ ಹೊರಡಿಸುವಂತೆ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸೂಚನೆ ನೀಡಿದ್ದಾರೆ. ವಿಕಾಸಸೌಧದಲ್ಲಿ ಗುರುವಾರ ಅಧಿಕಾರಿಗಳ ಸಭೆಯಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ಓದುವ ಮೂಲಕ ಎಲ್ಲರೂ ಸಂವಿಧಾನ ತೋರಿದ ಮಾರ್ಗದಲ್ಲಿ ಕೆಲಸ ಮಾಡಲು ಸೂಚಿಸಿದರು. ಇದೇ ವೇಳೆ ರಾಜ್ಯದ ಎಲ್ಲಾ ಶಾಲೆ ಕಾಲೇಜು ಮತ್ತು ವಿಶ್ವವಿದ್ಯಾಲಯದಲ್ಲಿ ಪ್ರತಿದಿನ ಸಂವಿಧಾನದ ಪ್ರಸ್ತಾವನೆಯನ್ನು ವಿದ್ಯಾರ್ಥಿಗಳಿಂದ ಹೇಳಿಸುವುದಕ್ಕೆ ಪೂರಕವಾಗಿ ಆದೇಶ ಹೊರಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಸ್ಕಾಲರ್ ಶಿಪ್ ಸಮಸ್ಯೆ ಆಗದಂತೆ ಕ್ರಮ: ರಾಜ್ಯದಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ವಿಳಂಬ ಕಾರಣಕ್ಕಾಗಿ ಕಾಲೇಜು ದಾಖಲಾತಿ ಸಮಸ್ಯೆ ಆಗುತ್ತಿದೆ. ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸಚಿವರು ಇದೇ ಸಂದರ್ಭದಲ್ಲಿ ಸೂಚಿಸಿದರು. ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ನಲ್ಲಿ ಕೇಂದ್ರದ್ದು ಶೇ.60 ಹಾಗೂ ರಾಜ್ಯದ್ದು ಶೇ.40 ಪಾಲಿದೆ. ಈ ನಿಟ್ಟಿನಲ್ಲಿ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ವಿದ್ಯಾರ್ಥಿಗಳಿಗೆ ಸಮಸ್ಯೆ ಆಗದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಭೆಯ ಬಳಿಕ ತಿಳಿಸಿದರು. ಸಂವಿಧಾನ ಬದ್ಧವಾಗಿ ಕೆಲಸ ಮಾಡಲು ಪ್ರಮಾಣ ವಚನ ಸ್ವೀಕಾರ ಮಾಡಿದ್ದೇವೆ. ಒಂದು ವೇಳೆ ಯಾರಾದರೂ ಉಲ್ಲಂಘನೆ ಮಾಡಿದರೆ ಚಾಟಿ ಬೀಸುತ್ತೇನೆ ಎಂದು ಇದೇ ಸಂದರ್ಭದಲ್ಲಿ ಎಚ್ಚರಿಕೆ ನೀಡಿದರು.

ಪಠ್ಯ ಪರಿಷ್ಕರಣೆ: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಲೇ ಪಠ್ಯ ಪರಿಷ್ಕರಣೆಗೆ ಮುಂದಾಗಿದೆ. ಪಾಠಗಳ ಮೂಲಕ ಮಕ್ಕಳ ಮನಸ್ಸನ್ನು ಕಲುಷಿತಗೊಳಿಸಲು ನಡೆಸಿರುವ ಕೃತ್ಯವನ್ನು ಕ್ಷಮಿಸಲು ಸಾಧ್ಯವಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದು, ಬಿಜೆಪಿ ಸರ್ಕಾರ ಸೇರ್ಪಡೆ ಮಾಡಿದ್ದ ಅನಗತ್ಯ ಪಠ್ಯವನ್ನು ತೆಗೆದು ಹಾಕಲು ನೂತನ ಸರ್ಕಾರ ಕ್ರಮವಹಿಸಲಿದೆ ಎಂಬ ಸೂಚನೆಯನ್ನು ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಒಂದನೇ ಪುಟದಿಂದ

ತರಬೇತಿ ವಿಮಾನ ಪತನ

ಪ್ಯಾರಚೂಟ್ ಮೂಲಕ ಕೆಳಕ್ಕೆ ಜಿಗಿದಿದ್ದಾರೆ. ನಂತರ ಭೋಗಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಸಪ್ಪಯ್ಯನಪುರಕ್ಕೆ ಸೇರಿದ ಗೋಮಾಳದಲ್ಲಿ ವಿಮಾನ ಪತನಗೊಂಡಿದೆ.

ಭಾರೀ ಸದ್ದು: ವಿಮಾನದಲ್ಲಿ ತಾಂತ್ರಿಕದೋಷ ಕಾಣಿಸಿಕೊಳ್ಳುತ್ತಿದ್ದಂತೆಯೇ ಭಾರೀ ಪ್ರಮಾಣದ ಸ್ಫೋಟದ ಶಬ್ದ ಉಂಟಾಗಿದೆ. ವಿಮಾನ ಭೂಮಿಗೆ ಬಹಳ ಹತ್ತಿರದಲ್ಲಿಯೇ ಎರಡು–ಮೂರು ಸುತ್ತು ಪಲ್ಟಿ ಹೊಡೆದಿದೆ. ಈ ವೇಳೆ ಇಬ್ಬರು ಪೈಲಟ್‌ಗಳು ಪ್ಯಾರಚೂಟ್‌ನಿಂದ ಕೆಳಗೆ ಜಿಗಿಯುತ್ತಿರುವುದನ್ನು ಗ್ರಾಮಸ್ಥರು ಕಣ್ಣಾರೆ ಕಂಡಿದ್ದಾರೆ. ಕೆಲವೇ ಕ್ಷಣದಲ್ಲಿ ವಿಮಾನದ ಬೆಂಕಿ ಕಾಣಿಸಿಕೊಂಡು ಕೆಳಗುರುಳಿದೆ. ಕೂಡಲೇ ಸ್ಥಳೀಯರು ಸ್ಥಳಕ್ಕೆ ದೌಡಾಯಿಸಿ, ನೋಡಿದಾಗ ವಿಮಾನ ಸಂಪೂರ್ಣವಾಗಿ ಸುಟ್ಟು ಹೊಗೆ ಬರುತ್ತಿತ್ತು ಎಂದು ಪ್ರತ್ಯಕ್ಷದರ್ಶಿಗಳು ಸುದ್ದಿಗಾರರಿಗೆ ತಿಳಿಸಿದ್ದಾರೆ.

ವಿಮಾನದ ಭಾಗಗಳು ಚೂರು ಚೂರಾಗಿ ಬಿದ್ದಿದ್ದು, ಕೆಲವು ಅವಶೇಷಗಳು ಹೊತ್ತಿ ಉರಿದಿವೆ. ಇದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡು ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಕಿಲೋ ಮೀಟರ್ ದೂರ ಪತ್ತೆ: ವಿಮಾನ ಪತನಗೊಂಡ ಸುಮಾರು ಒಂದು ಕಿ.ಮೀ. ದೂರದಲ್ಲಿ ಪೈಲೆಟ್‌ಗಳಿಬ್ಬರು ಪ್ಯಾರಾಚೂಟ್ ಮೂಲಕ ಭೂ ಸ್ಪರ್ಶ ಮಾಡಿದ್ದರು. ಇವರನ್ನು ಪತ್ತೆ ಹಚ್ಚಿದ ಸ್ಥಳೀಯರು, ಇವರ ನೆರವಿಗೆ ಮುಂದಾದರು. ಅವರಿಗೆ ಆಗಿದ್ದ ಸಣ್ಣಪುಟ್ಟ ಗಾಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಕರೆದೊಯ್ಯಲು ಮುಂದಾದರಾದರೂ ಪೈಲೆಟ್‌ಗಳು ಆಸ್ಪತ್ರೆಗೆ ತೆರಳಲು ನಿರಾಕರಿಸಿದರು. ನಂತರ ಸ್ವಲ್ಪ ಸಮಯದ ಬಳಿಕ ಬೆಂಗಳೂರಿನಿಂದ ವಾಯುಸೇನೆಯ ಮೂರು ಹೆಲಿಕಾಪ್ಟರ್ ಸ್ಥಳಕ್ಕೆ ಬಂದು, ಪೈಲಟ್‌ಗಳನ್ನು ಕರೆದೊಯ್ಯಿತು. ವಿಮಾನ ಪತನಗೊಂಡಿರುವ ಸ್ಥಳಕ್ಕೆ ಧಾವಿಸುತ್ತಿದ್ದಂತೆಯೇ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ, ಬೆಂಕಿ ನಂದಿಸಿದರು. ಇದಾದ ಕೆಲವೇ ಕ್ಷಣಗಳಲ್ಲಿ ಸ್ಥಳಕ್ಕೆ ವಾಯುಸೇನೆಯ ಅಧಿಕಾರಿಗಳು ಭೇಟಿ ನೀಡಿ ಘಟನೆಯ ಕುರಿತು ಮಾಹಿತಿ ಕಲೆ ಹಾಕಿದರು.

ವಿಮಾನವೊಂದು ಪತನಗೊಂಡ ವಿಚಾರ ತಿಳಿದು ಭೋಗಾಪುರ ಮತ್ತು ಸಪ್ಪಯ್ಯನಪುರ ಸುತ್ತಮುತ್ತಲಿನ ಸಾವಿರಾರು ಜನರು ಘಟನಾ ಸ್ಥಳಕ್ಕೆ ದೌಡಾಯಿಸಿದರು. ವಿಮಾನದ ಅವಶೇಷಗಳನ್ನು ಕುತೂಹಲದಿಂದ ವೀಕ್ಷಿಸಿದರು. ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಅವಶೇಷಗಳನ್ನು ಕೆಲವರು ಕುತೂಹಲದಿಂದ ಮುಟ್ಟಿದರು. ಈ ವೇಳೆ ಪೊಲೀಸರು ಜನರನ್ನು ನಿಯಂತ್ರಿಸಲು ಹರಸಾಹಸಪಡಬೇಕಾಯಿತು. ಸ್ಥಳಕ್ಕೆ ಎಡಿಸಿ ಕ್ಯಾತ್ಯಾಯಿನಿದೇವಿ, ತಹಸೀಲ್ದಾರ್ ಬಸವರಾಜು, ಡಿವೈಎಸ್‌ಪಿ ಪ್ರಿಯದರ್ಶಿ ಸಾಣೆಕೊಪ್ಪ, ವಾಯುಸೇನೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದರು.

> ನಾವು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆವು. ವಿಮಾನ ಬಹಳ ಹತ್ತಿರದಲ್ಲಿಯೇ ಹಾರಾಡುತ್ತಿತ್ತು. ನೋಡ ನೋಡುತ್ತಿದ್ದಂತೆಯೇ ವಿಮಾನದ ಸುತ್ತ ಹೊಗೆ ಹಾಗೂ ಬೆಂಕಿ ಕಾಣಿಸಿಕೊಂಡಿತ್ತು. ಇಬ್ಬರು ಮೇಲಿಂದ ಕೆಳಕ್ಕೆ ಜಿಗಿದರು. ಹತ್ತಿರಕ್ಕೆ ಹೋಗಿ ನೋಡಿದಾಗ ವಿಮಾನ ಸುಟ್ಟು ಹೋಗಿತ್ತು. –ಮಹದೇವಶೆಟ್ಟಿ, ಪ್ರತ್ಯಕ್ಷದರ್ಶಿ, ಕರಡಿಮೋಳೆ ಗ್ರಾಮ.

> ಇಬ್ಬರು ಪೈಲಟ್‌ಗಳು ಪ್ಯಾರಚೂಟ್ ಮೂಲಕ ಕೆಳಕ್ಕೆ ಇಳಿದಿರುವುದನ್ನು ನೋಡಿ ಸ್ಥಳಕ್ಕೆ ಹೋದೆವು. ಅವರಿಗೆ ಸಣ್ಣ–ಪುಟ್ಟ ಗಾಯಗಳಾಗಿತ್ತು. ಆಸ್ಪತ್ರೆಗೆ ಹೋಗೋಣ ಬನ್ನಿ ಎಂದೆವು. ಅವರು ಎಷ್ಟು ದೂರ ಇದೆ ಎಂದರು. ನಾವು 10 ರಿಂದ 12 ಕಿ.ಮೀ. ಆಗುತ್ತದೆ ಎಂದೆವು. ಆಗ ಅವರು ಬೆಂಗಳೂರಿನಿಂದ ನಮ್ಮ ರಕ್ಷಣಾ ತಂಡ ಬರಲಿದೆ ಎಂದರು. ಇದಾದ 10 ನಿಮಿಷದಲ್ಲಿ ಬೆಂಗಳೂರಿನಿಂದ ಮೂರು ಹೆಲಿಕಾಪ್ಟರ್ ಸ್ಥಳಕ್ಕೆ ಆಗಮಿಸಿ ಅವರನ್ನು ಕರೆದುಕೊಂಡು ಹೋದವು.
> –ಸೋಮಶೇಖರ್, ಭೋಗಾಪುರ

ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ಸಹಕರಿಸಿ

ಬೀಗ ಕೇಂದ್ರ ಸರ್ಕಾರದ ಕೈಯ್ಯಲ್ಲಿದೆ. ಅವರಿಗೆ ಯಾವಾಗ ಎಷ್ಟು ನೀರು ಬಿಡಬೇಕು ಎಂದು ಅವರು ತೀರ್ಮಾನಿಸಿ ಬಿಡುತ್ತಾರೆ. ನಾವು ವಿದ್ಯುತ್ ಉತ್ಪಾದಿಸಿ ಹಿಡಿದಿಟ್ಟ ಉಳಿದ ನೀರನ್ನು ತಮಿಳುನಾಡಿಗೆ ಬಿಡುತ್ತೇವೆ. ಅದನ್ನು ಆ ರಾಜ್ಯದ ರೈತರು ಕೃಷಿಗೆ ಬಳಕೆ ಮಾಡಿಕೊಳ್ಳಬಹುದು. ಕರ್ನಾಟಕ ಸರ್ಕಾರ ಅಣೆಕಟ್ಟು ನಿರ್ಮಾಣ ಮಾಡಿದರೂ ಹಿಡಿದಿಟ್ಟ ನೀರಿನಲ್ಲಿ ವಿದ್ಯುತ್ ಉತ್ಪಾದನೆ ಮತ್ತು ಕುಡಿಯುವ ನೀರಿಗಷ್ಟೇ ಬಳಸುತ್ತೇವೆ.

ಸರ್ಕಾರ ಈ ತೀರ್ಮಾನವನ್ನು ಕೇಂದ್ರ ಜಲಶಕ್ತಿ ಸಚಿವಾಲಯ ಹಾಗೂ ನ್ಯಾಯಾಲಯದ ಗಮನಕ್ಕೂ ತಂದಿದ್ದೇವೆ. ಈ ಹಿಂದೆ ನಾನು ಇದೇ ಜಲಸಂಪನ್ಮೂಲ ಇಲಾಖೆ ಸಚಿವರಾಗಿದ್ದ ಸಂದರ್ಭದಲ್ಲಿ ಡಿಪಿಆರ್ ಸಿದ್ಧಪಡಿಸಿ ಸಂಪುಟ ಒಪ್ಪಿಗೆ ಪಡೆದು 5400 ಕೋಟಿ ರೂ. ಅಂದಾಜು ವೆಚ್ಚವನ್ನು ನಿಗದಿ ಮಾಡಲಾಗಿತ್ತು.

ತದ ನಂತರ ಬಂದ ಬಿಜೆಪಿ ಸರ್ಕಾರ ಯೋಜನೆ ಅನುಷ್ಠಾನದ ಬಗ್ಗೆ ಒಂದು ಇಂಚು ಕೆಲಸ ಮಾಡಲಿಲ್ಲ. ನಾವು ಮೇಕೆದಾಟು ಯೋಜನೆ ಹೋರಾಟ ನಡೆಸಿದ ಸಂದರ್ಭದಲ್ಲಿ ಒಂದು ಸಾವಿರ ಕೋಟಿ ರೂ. ಬಜೆಟ್‌ನಲ್ಲಿ ಘೋಷಣೆ ಮಾಡಿದ್ದನ್ನು ಬಿಟ್ಟರೆ, ಬೇರೇನೂ ಮಾಡಲಿಲ್ಲ. ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಘಟಕ ಆರಂಭಿಸುವುದರಿಂದ ಅವರಿಗೆ ಆಗುವ ತೊಂದರೆ ಏನು? ನಮ್ಮಲ್ಲಿ ನೀರು ಸಂರಕ್ಷಣೆ ಮಾಡಿಕೊಂಡು ಕುಡಿಯುವ ನೀರು ಪೂರೈಸಬಹುದು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಹೀಗಾಗಿ ತಮಿಳುನಾಡಿನವರು ಆತಂಕಪಡುವ ಅಗತ್ಯವಿಲ್ಲ. ಈ ಯೋಜನೆಯಿಂದ ಯಾವುದೇ ತೊಂದರೆ ಇಲ್ಲ, ಹೀಗಾಗಿ ತಮಿಳುನಾಡಿನವರಿಗೆ ಹೃದಯ ಶ್ರೀಮಂತಿಕೆ ಇರಲಿ. ನಮ್ಮಲ್ಲೂ ಹೃದಯ ಶ್ರೀಮಂತಿಕೆ ಇದೆ. ನಾವು ಜಗಳವಾಡಿ ಕೋರ್ಟ್ ಕಚೇರಿ ಅಲೆದಿದ್ದು ಸಾಕು. ಸೌಹಾರ್ದತೆಯಿಂದ ಕುಡಿಯುವ ನೀರು ಹಾಗೂ ತಮಿಳುನಾಡಿನ ರೈತರಿಗೆ ಅನುಕೂಲವಾಗುವ ಯೋಜನೆಗೆ ಸಹಕರಿಸಿ ಎಂದು ಮನವಿ ಮಾಡಿದರು.

ಇಂದು ಗ್ಯಾರಂಟಿಗಳ ನಿರ್ಧಾರ ಗ್ಯಾರಂಟಿ

ನೀಡಿದರೆ ಸಾಕೇ ಎಂಬುದರ ಬಗ್ಗೆ ಚರ್ಚೆ ನಡೆದಿದ್ದು, ಪ್ರಯಾಣದ ದೂರವನ್ನು ನಿಗದಿಪಡಿಸಬೇಕೇ ಅಥವಾ ರಾಜ್ಯದ ಎಲ್ಲಿಂದ ಎಲ್ಲಿಗಾದರೂ ಪ್ರಯಾಣಿಸಲು ಅವಕಾಶ ನೀಡಬೇಕೇ ಎಂಬುದರ ಕುರಿತು ಅಧಿಕಾರಿಗಳು ತಮ್ಮದೇ ಆದ ಸಲಹೆಗಳನ್ನು ನೀಡಿದ್ದಾರೆ. ಸಾಧಾರಣ ಬಸ್‌ಗಳಲ್ಲಿ ಮಾತ್ರ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕೇ ಹೊರತು ಐಷಾರಾಮಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅನುಮತಿಸಬಾರದು ಎಂದು ನಿರ್ಧರಿಸಲಾಗಿದೆ. 200 ಯುನಿಟ್ ವಿದ್ಯುತ್ ನೀಡುವ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆದಿದ್ದು, ವಿದ್ಯುತ್ ಬಿಲ್ ಅನ್ನು ಗ್ರಾಹಕರು ಪಾವತಿಸಬೇಕು. ನಂತರ 200 ಯುನಿಟ್‌ನ ಮೊತ್ತವನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಬೇಕು ಎಂಬುದರ ಬಗ್ಗೆಯೂ ಚರ್ಚೆ ನಡೆದಿದೆಯಂತೆ. ನಿರುದ್ಯೋಗ ಪದವೀಧರರಿಗೆ ಭತ್ಯೆ ನೀಡುವ ಯುವ ನಿಧಿ ಯೋಜನೆ ಕುರಿತು ಅಂತಿಮ ಘಟ್ಟದ ಚರ್ಚೆ ಹಾಗೂ ಸಮಾಲೋಚನೆ ನಡೆದಿದ್ದು, ಪದವಿ ಮುಗಿದ ಮೂರ್ನಾಲ್ಕು ತಿಂಗಳ ಕಾಲ ಉದ್ಯೋಗ ಹುಡುಕಿಕೊಳ್ಳಲು ಅವಕಾಶ ನೀಡಿ, ನಂತರ ಅರ್ಜಿ ಕರೆದು ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಫಲಾನುಭವಿಗಳು ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆಯೇ ಎಂಬುದರ ಬಗ್ಗೆ ಟ್ರ್ಯಾಕ್ ಮಾಡಬೇಕು ಎಂದು ಅಧಿಕಾರಿಗಳು ಸಲಹೆ ಮಾಡಿದ್ದಾರೆ.

ಒಟ್ಟಾರೆ ಗ್ಯಾರಂಟಿ ಯೋಜನೆಗಳ ಜಾರಿ ಬಗ್ಗೆ ನಾಳೆ ಸಂಪುಟ ಸಭೆ ನಂತರ ಮುಖ್ಯಮಂತ್ರಿಗಳು ಪ್ರಕಟಿಸಲಿದ್ದು, ಐದರಲ್ಲಿ ಎಷ್ಟು ಯೋಜನೆಗಳು ನಾಳೆಯಿಂದ ಜಾರಿಯಾಗಲಿವೆ ಹಾಗೂ ಷರತ್ತುಗಳೇನಾದರೂ ಇವೆಯೋ ಎಂಬುದು ಮುಖ್ಯಮಂತ್ರಿಗಳ ಸುದ್ದಿಗೋಷ್ಠಿ ನಂತರ ತಿಳಿಯಲಿದೆ.

ಐಸಿಐಸಿಐ ಫೌಂಡೇಷನ್‌ನಿಂದ ಮೈಸೂರು ಪಾಲಿಕೆಗೆ

15 ಎಲೆಕ್ಟ್ರಿಕ್ ಆಟೋ ಟಿಪ್ಪರ್ ಕೊಡುಗೆ

- ಎರಡು ಪಾರ್ಕ್ ನಿರ್ವಹಣೆಗೂ ಪ್ರತಿಷ್ಠಾನ ನಿರ್ಧಾರ
- ಮನೆ ಮನೆಯಿಂದ ಕಸ ಸಂಗ್ರಹಣೆಗೆ ಅನುಕೂಲಕಾರಿ

ಮೈಸೂರು, ಜೂ.1(ಆರ್‌ಕೆ)–ಐಸಿಐಸಿಐ ಫೌಂಡೇಷನ್ ಮತ್ತು ಬ್ಯಾಂಕ್ ವತಿಯಿಂದ ಸಿಎಸ್‌ಆರ್ ಯೋಜನೆಯಡಿ ಮೈಸೂರು ಮಹಾನಗರ ಪಾಲಿಕೆಗೆ 80 ಲಕ್ಷ ರೂ. ಮೌಲ್ಯದ ಎಲೆಕ್ಟ್ರಿಕ್ ಆಟೋ ಟಿಪ್ಪರ್‌ಗಳನ್ನು ಗುರುವಾರ ಕೊಡುಗೆಯಾಗಿ ನೀಡಲಾಯಿತು.



ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಪಾಲಿಕೆ ಪ್ರಧಾನ ಕಚೇರಿ ಆವರಣದಲ್ಲಿ ಐಸಿಐಸಿಐ ಫೌಂಡೇಷನ್, ಮುಂಬೈನ ಆಪರೇಷನ್ ಮುಖ್ಯಸ್ಥ ಸುಕೇತುಕುಮಾರ್ ಅವರು ಮೇಯರ್ ಶಿವಕುಮಾರ್, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಇ–ಆಟೋ ಟಿಪ್ಪರ್‌ಗಳನ್ನು ಹಸ್ತಾಂತರಿಸಿದರು.

ಈ ಸಂದರ್ಭ ಮಾತನಾಡಿದ ಸುಕೇತು ಕುಮಾರ್, ಮೈಸೂರು ಸ್ವಚ್ಛತೆ, ಸುಧಾರಣೆಗಾಗಿ ತಮ್ಮ ಬ್ಯಾಂಕ್ ಮತ್ತು ಪ್ರತಿಷ್ಠಾನ ಸದಾ ಪಾಲಿಕೆ ಜೊತೆ ಇರುತ್ತದೆ. ಕಸ ಸಂಗ್ರಹಿಸಲು ಇ–ಆಟೋ ಟಿಪ್ಪರ್‌ಗಳು ಅಗತ್ಯವೆಂದು ಮೇಯರ್ ಶಿವಕುಮಾರ್, ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಹಿರಿಯ ಆರೋಗ್ಯ ಅಧಿಕಾರಿ ಡಾ. ಡಿ.ಜಿ. ನಾಗರಾಜ್, ಕೋರಿಕೊಂಡ ಹಿನ್ನೆಲೆಯಲ್ಲಿ 80 ಲಕ್ಷ ರೂ. ಮೌಲ್ಯದ 15 ವಾಹನಗಳನ್ನು ಸಿಎಸ್‌ಆರ್ ಅಡಿ ಒದಗಿಸಿದ್ದೇವೆ ಎಂದರು.

ಅದೇ ರೀತಿ ಮೈಸೂರಿನ ಯಾವುದಾದರೂ ಎರಡು ಉದ್ಯಾನವನವನ್ನು ದತ್ತು ಪಡೆದು ಅಭಿವೃದ್ಧಿಗೊಳಿಸಿ ನಿರ್ವಹಿಸುತ್ತೇವೆ. ಮುಂದೆ ಮೈಸೂರು ನಗರದ ಹಿತದೃಷ್ಟಿಯಿಂದ ಅಗತ್ಯ ನೆರವನ್ನು ಐಸಿಐಸಿಐ ಫೌಂಡೇಷನ್‌ನಿಂದ ನೀಡಲು ನಿರ್ಧರಿಸಲಾಗುವುದು ಎಂದು ಸುಕೇತುಕುಮಾರ್ ಇದೇ ಸಂದರ್ಭ ಭರವಸೆ ನೀಡಿದರು.

ಇದೇ ವೇಳೆ ಸುಕೇತುಕುಮಾರ್, ಐಸಿಐಸಿಐ ಫೌಂಡೇಷನ್‌ನ ದಕ್ಷಿಣ ಭಾರತ ವಲಯ ಮುಖ್ಯಸ್ಥ ಬಿ.ಕೆ. ವೆಂಕಟೇಶ್, ಐಸಿಐಸಿಐ ಬ್ಯಾಂಕ್ ಪ್ರಾಂತೀಯ ಮುಖ್ಯಸ್ಥ ಸೋಮಶೇಖರ್, ಫೌಂಡೇಷನ್ ದಕ್ಷಿಣ ಕರ್ನಾಟಕ ಪ್ರಾಜೆಕ್ಟ್ ಮ್ಯಾನೇಜರ್ ಮಹದೇವಸ್ವಾಮಿ, ಬ್ಯಾಂಕ್ ಸಂಪರ್ಕಾಧಿಕಾರಿ ಮಜರ್, ಫೌಂಡೇಷನ್ನಿನ ಸ್ಕಿಲ್ ಅಕಾಡೆಮಿಯ ಮುಖ್ಯಸ್ಥ ಸತ್ಯಶ್ರೀ, ಜನಾರ್ಧನ ಅವರನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮೇಯರ್ ಶಿವಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು.

ಉಪಮೇಯರ್ ಡಾ. ಆರ್. ರೂಪಾ, ವರ್ಕ್ಸ್ ಕಮಿಟಿ ಅಧ್ಯಕ್ಷೆ ಶಾಂತಕುಮಾರಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಪಾಲಿಕೆ ವಾಹನ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮೃತ್ಯುಂಜಯ, ಪರಿಸರ ಇಂಜಿನಿಯರ್ ಮೈತ್ರಿ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

> ಮೈಸೂರು ನಗರದ ಹಲವೆಡೆ ಬ್ರಾಂಚ್ ತೆರೆದು ಹಣಕಾಸು ವ್ಯವಹಾರದ ಮೂಲಕ ಗ್ರಾಹಕರಿಗೆ ಸೇವೆ ಒದಗಿಸುತ್ತಿರುವ ಐಸಿಐಸಿಐ ಬ್ಯಾಂಕ್ ನಗರದ ಅಭಿವೃದ್ಧಿ, ಸ್ವಚ್ಛತೆಗೆ ಪಾಲಿಕೆಯೊಂದಿಗೆ ಕೈಜೋಡಿಸುತ್ತಿರುವುದು ಶ್ಲಾಘನೀಯ.
> –ಮೇಯರ್ ಶಿವಕುಮಾರ್

ಪ್ರಸ್ತುತ ಮೈಸೂರು ನಗರದಾದ್ಯಂತ ನಿತ್ಯ ಮನೆ ಮನೆಯಿಂದ ಕಸ ಸಂಗ್ರಹಿಸಲು 320 ಆಟೋ ಟಿಪ್ಪರ್‌ಗಳನ್ನು ಬಳಸುತ್ತಿದ್ದು, ಇಂಧನ ತುಂಬಿಸಲು ಹೆಚ್ಚಿನ ಹಣ ಖರ್ಚು ಮಾಡಬೇಕಾಗಿತ್ತು. ಈ ವೆಚ್ಚ ಕಡಿತಗೊಳಿಸಿ ವಾಯುಮಾಲಿನ್ಯ ಮತ್ತು ಶಬ್ಧಮಾಲಿನ್ಯ ತಡೆಗಟ್ಟಿ ವೆಚ್ಚವನ್ನು ಕಡಿಮೆ ಮಾಡಲು ಪಾಲಿಕೆಯು ಎಲೆಕ್ಟ್ರಿಕ್ ವಾಹನಗಳ ಮೊರೆ ಹೋಗುತ್ತಿದೆ ಎಂದು ಮೇಯರ್ ತಿಳಿಸಿದರು.

ಕಸ ಸಂಗ್ರಹಿಸಲು ಹಂತ ಹಂತವಾಗಿ ಇ–ವಾಹನಗಳನ್ನೇ ಬಳಸಲಾಗುವುದು. ಇದರಿಂದ ಪಾಲಿಕೆ ಖರ್ಚು ಕಡಿಮೆಯಾಗಲಿದ್ದು, ನಮ್ಮಲ್ಲೇ ಸ್ಥಾಪಿಸಿರುವ ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್‌ನಲ್ಲಿ ವಾಹನಗಳಿಗೆ ಚಾರ್ಜ್ ಮಾಡಿಕೊಂಡು ಕಾರ್ಯಾಚರಣೆ ನಡೆಸಲಾಗುವುದು ಎಂದು ಅವರು ಇದೇ ವೇಳೆ ತಿಳಿಸಿದರು.

ನಂ.ಗೂಡು ತಾಲೂಕು ಪತ್ರಕರ್ತರ ಸಂಘದ ನೂತನ ಸಮಿತಿ ಆಯ್ಕೆ



ಮೈಸೂರು, ಜೂ.1(ಆರ್‌ಕೆ)–ನಂಜನಗೂಡು ತಾಲೂಕು ಪತ್ರಕರ್ತರ ಸಂಘದ 2023ರಿಂದ 2025ರ ಅವಧಿಗೆ ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಚುನಾವಣೆಯಲ್ಲಿ ಎಸ್.ಗಂಗಾಧರ ಅವರು ನೂತನ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಗಂಗಾಧರ ಅವರು 14 ಮತ ಗಳಿಸಿ ಜಯ ಗಳಿಸಿದ್ದು, ಅವರ ಪ್ರತಿಸ್ಪರ್ಧಿ ಹೆಚ್.ಡಿ.ರಂಗಸ್ವಾಮಿ ಅವರು 10 ಮತಗಳನ್ನು ಪಡೆದರು ಎಂದು ಚುನಾವಣಾಧಿಕಾರಿ ಬನ್ನೂರು ಕೆ.ರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಪಾಧ್ಯಕ್ಷರಾಗಿ ಸಿ.ರಾಘವೇಂದ್ರ, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಎಸ್. ಸತ್ಯನಾರಾಯಣ, ಕಾರ್ಯದರ್ಶಿಯಾಗಿ ಎಂ.ಮಹದೇವಸ್ವಾಮಿ, ಖಜಾಂಚಿಯಾಗಿ ಎಸ್.ಮಹದೇವ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಚಿನ್ನಸ್ವಾಮಿ, ಭಾಗ್ಯರಾಜು, ಹುಲ್ಲಹಳ್ಳಿ ಮೋಹನ್, ಟಿ.ಕೆ.ಬಸವರಾಜು, ಚೆನ್ನಪ್ಪ ಹಾಗೂ ಜಿ.ಎಂ.ವೇಣುಗೋಪಾಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ನೂತನ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಅಭ್ಯುದಯ ಸಹಕಾರ ಸಂಘವು ಶುಭ ಕೋರಿ ಅಭಿನಂದನೆ ಸಲ್ಲಿಸಿವೆ.

ಜೂ.5 ಮೈಸೂರು ಪಾಲಿಕೆ ಬಜೆಟ್

ಜೂ.8ಕ್ಕೆ ಸಲಹಾ ಸಮಿತಿ, 9ರಂದು ಕೌನ್ಸಿಲ್ ಸಭೆ

ಮೈಸೂರು, ಜೂ.1(ಆರ್‌ಕೆ)– ಮೈಸೂರು ಮಹಾನಗರ ಪಾಲಿಕೆಯ 2023–24ನೇ ಸಾಲಿನ ವಾರ್ಷಿಕ ಬಜೆಟ್ ಅನ್ನು ಜೂನ್ 5ರಂದು ಮಂಡಿಸಲಾಗುವುದು ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.



ಅಂದು ಬೆಳಗ್ಗೆ 11 ಗಂಟೆಗೆ ಪಾಲಿಕೆ ಕೌನ್ಸಿಲ್ ಸಭಾಂಗಣದಲ್ಲಿ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಡಿ.ನಾಗರಾಜು ಅವರು ಪ್ರಸಕ್ತ ಸಾಲಿನ ಆಯವ್ಯಯ ಮಂಡಿಸುವರು. ಮೈಸೂರು ನಗರದ ಅಭಿವೃದ್ಧಿ ಮೂಲ ಸೌಕರ್ಯ ನಿರ್ವಹಣೆ, ಹೊಸ ಯೋಜನೆಗಳು, ಸಂಪನ್ಮೂಲ ಕ್ರೋಢೀಕರಣ, ಆದಾಯ–ವೆಚ್ಚಗಳ ಮಾಹಿತಿಯನ್ನೊಳಗೊಂಡ ಬಜೆಟ್ ತಯಾರಿಸಿದ್ದು, ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುವ ಯೋಜನೆಗಳನ್ನು ಮಾತ್ರ ಈ ಸಾಲಿನಲ್ಲಿ ಸೇರಿಸಲಾಗಿದೆ ಎಂದು ತಿಳಿಸಿದರು.

ನಂತರ ಜೂನ್ 8ರಂದು ಬೆಳಗ್ಗೆ 11 ಗಂಟೆಗೆ ಪಾಲಿಕೆ ಕಚೇರಿ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಸಲಹಾ ಸಮಿತಿ ಸಭೆ ಆಯೋಜಿಸಲಾಗಿದ್ದು, 9ರಂದು ಬೆಳಗ್ಗೆ 11 ಗಂಟೆಗೆ ಪಾಲಿಕೆಯ ಕೌನ್ಸಿಲ್ ಸಭೆ ಕರೆಯಲಾಗಿದೆ. ಬಜೆಟ್‌ನಲ್ಲಿ ಪ್ರಕಟಿಸಿರುವ ಅಂಶಗಳನ್ನು ಅನುಷ್ಠಾನಗೊಳಿಸುವುದು, ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕ್ರಮ ಕೈಗೊಳ್ಳುವುದು, ಪ್ರತೀ ವಾರ್ಡ್‌ನಲ್ಲಿ ವಿಪತ್ತು ಸಂಭವಿಸಿದಾಗ ಅನಾಹುತಗಳಾಗದಂತೆ ಮುಂಜಾಗ್ರತಾ ಕ್ರಮಗಳ ಬಗ್ಗೆ ಸದಸ್ಯರ ಅಭಿಪ್ರಾಯದಂತೆ ಯೋಜನೆ ಕಾರ್ಯಗತ ಮಾಡುವ ಕುರಿತಂತೆ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಶಿವಕುಮಾರ್ ತಿಳಿಸಿದರು.

ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್ ತಯಾರಿಸಲು ಟೆಂಡರ್‌ಗೆ ಮುಡಾ ಸಿದ್ಧತೆ

ಮೈಸೂರು, ಜೂ. 1(ಆರ್‌ಕೆ)– ಮೈಸೂರು ಸುತ್ತ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಲು ಮುಂದಾಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ವು, ಸಮಗ್ರ ಯೋಜನಾ ವರದಿ (ಡಿಪಿಆರ್) ತಯಾರಿಸಲು ಅನುಭವಸ್ಥ ಹಾಗೂ ಅರ್ಹ ಕಂಪನಿಗಳಿಂದ ಟೆಂಡರ್ ಕರೆಯಲು ಸಿದ್ಧತೆ ನಡೆಸಿದೆ.

ಪ್ರಸ್ತುತ ಇರುವ 42 ಕಿಮೀ ಹೊರವರ್ತುಲ ರಸ್ತೆ ಜೊತೆಗೆ ಮತ್ತೊಂದು ಪೆರಿಫೆರಲ್ ರಿಂಗ್ ರೋಡ್ ನಿರ್ಮಿಸಲು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಂಡಿದ್ದು, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಡಿಪಿಆರ್ ತಯಾರಿಸಲು ತಗಲುವ ವೆಚ್ಚಕ್ಕೆ 10 ಕೋಟಿ ರೂ. ಅನುದಾನವನ್ನು ಮೀಸಲಿರಿಸಲಾಗಿದೆ.

ಸುಮಾರು 100 ರಿಂದ 110 ಕಿಮೀವರೆಗೆ ನಿರ್ಮಿಸಲುದ್ದೇಶಿಸಿರುವ ಪೆರಿಫೆರಲ್ ರಿಂಗ್ ರಸ್ತೆಯ ವಿನ್ಯಾಸ, ಸರ್ವೀಸ್ ರಸ್ತೆ, ಸೇತುವೆಗಳು, ಮಾರ್ಗ ಮಧ್ಯೆ ಬರುವ ಗ್ರಾಮಗಳಲ್ಲಿ ಹೊರ ಭಾಗದ ಜಾಗ ಗುರ್ತಿಸುವುದು, ನದಿ, ಕೆರೆ, ಕಾಲುವೆಗಳು ಅಡ್ಡಬಂದಲ್ಲಿ ಪರ್ಯಾಯ ವ್ಯವಸ್ಥೆ, ಅರಣ್ಯ ಪ್ರದೇಶ, ಬೆಟ್ಟಗುಡ್ಡಗಳು ಎದುರಾದರೆ ಬೇರೆ ಮಾರ್ಗದಲ್ಲಿ ಪೆರಿಫೆರಲ್ ರಿಂಗ್ ರಸ್ತೆಗೆ ಅನುವು ಮಾಡುವುದು ಸೇರಿದಂತೆ ಈ ರಸ್ತೆ ಹೇಗಿರಬೇಕೆಂಬುದರ ಬಗ್ಗೆ ಮಾಹಿತಿ ನೀಡುವಂತೆ ಮೈಸೂರು– ಬೆಂಗಳೂರು ದಶಪಥ ಹೆದ್ದಾರಿ ನಿರ್ಮಿಸಿ ಅನುಭವವಿರುವ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHIL) ಯೋಜನಾ ನಿರ್ದೇಶಕ ಶ್ರೀಧರ್ ಅವರನ್ನು ಕೋರಲಾಗಿದೆ ಎಂದು ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ತಿಳಿಸಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಪೂರ್ಣಗೊಳಿಸಿ ಉದ್ಘಾಟನೆಯಲ್ಲಿ ಬ್ಯುಸಿಯಾಗಿದ್ದ ಶ್ರೀಧರ್ ಅವರು, ನಂತರ ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಬಂದ ಕಾರಣ ಸ್ಥಳ ಪರಿಶೀಲಿಸಿ ವಿನ್ಯಾಸ ರೂಪಿಸಲು ವಿಳಂಬವಾಗಿದೆ ಇದೀಗ ಅವರು ಕಾರ್ಯೋನ್ಮುಖರಾಗಿದ್ದು, ಮಾಹಿತಿ ಸಲ್ಲಿಸಿದ ತಕ್ಷಣ ಯೋಜನೆಗೆ ಡಿಪಿಆರ್ ತಯಾರಿಸಲು ಟೆಂಡರ್ ಕರೆಯಲಾಗುವುದು ಎಂದು ತಿಳಿಸಿದರು.

ಯಾವ ರೀತಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣವಾಗಬೇಕೆಂಬುದರ ಮೇಲೆ ಡಿಪಿಆರ್ ತಯಾರಿಸಬೇಕಾಗಿರುವುದರಿಂದ ಅರ್ಹ ಹಾಗೂ ಅನುಭವವಿರುವ ಸಂಸ್ಥೆ ಅಥವಾ ಕಂಪನಿಗೆ ಈ ಜವಾಬ್ದಾರಿ ಕೊಡಬೇಕಾಗುತ್ತದೆ. ಟೆಂಡರ್ ಕರೆದಾಗ ಯಾರು ಕಡಿಮೆ ಮೊತ್ತ ನಮೂದಿಸುತ್ತಾರೋ ಅಂತಹವರಿಗೆ ಡಿಪಿಆರ್ ತಯಾರಿಸಲು ಜವಾಬ್ದಾರಿ ವಹಿಸಲಾಗುವುದು.



ಅದಕ್ಕೂ ಮೊದಲು ನಗರಾಭಿವೃದ್ಧಿ ಸಚಿವರು, ಸಂಸದರು, ಶಾಸಕರಿಗೆ ರಿಂಗ್ ರಸ್ತೆ ವಿನ್ಯಾಸ ರೂಪು–ರೇಷೆ ಬಗ್ಗೆ ಸಲಹೆ– ಮಾರ್ಗದರ್ಶನ ಪಡೆಯಬೇಕಿದೆ. ಅವರ ಅಭಿಪ್ರಾಯಗಳನ್ನು ಪರಿಗಣಿಸಿ ಮೈಸೂರಿಗೆ ಯಾವ ಮಾದರಿಯ ಪೆರಿಫೆರಲ್ ರಿಂಗ್ ರಸ್ತೆ ಅಗತ್ಯವಿದೆ ಎಂಬುದರ ಬಗ್ಗೆ ಸ್ಪಷ್ಟ ನಿಲುವಿಗೆ ಬಂದ ನಂತರವಷ್ಟೇ ಡಿಪಿಆರ್‌ಗೆ ಟೆಂಡರ್ ಕರೆಯುತ್ತೇವೆ ಎಂದು ಮುಡಾ ಆಯುಕ್ತ ತಿಳಿಸಿದರು.

ಸಮಗ್ರ ಯೋಜನಾ ವರದಿ ಸಿದ್ಧಪಡಿಸಿದ ನಂತರ ಮತ್ತೊಮ್ಮೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸಿ ಯೋಜನೆಗೆ ಅನುಮೋದನೆ ಪಡೆದು ಅನುದಾನ ಖಚಿತ ಪಡಿಸಿಕೊಂಡ ನಂತರ ಪೆರಿಫೆರಲ್ ರಿಂಗ್ ರಸ್ತೆ ಕಾಮಗಾರಿಗೆ ಟೆಂಡರ್ ಕರೆಯಬೇಕಾಗುತ್ತದೆ ಎಂದು ತಿಳಿಸಿದರು.

ಮೈಸೂರು ನಗರ ವಿಸ್ತಾರವಾಗಿ ಬೆಳೆಯುತ್ತಿದ್ದು ಕೈಗಾರಿಕೆ, ಪ್ರವಾಸೋದ್ಯಮ, ವಿಮಾನ ನಿಲ್ದಾಣ ವಿಸ್ತರಣೆಗೆ, ಮೈಸೂರು–ಬೆಂಗಳೂರು ದಶಪಥ ರಸ್ತೆ ನಿರ್ಮಾಣ, ಉದ್ದೇಶಿತ ಮೈಸೂರು–ಕುಶಾಲನಗರ ಹೆದ್ದಾರಿಯಂತಹ ಅಭಿವೃದ್ಧಿ ಯೋಜನೆಗಳಿಂದಾಗಿ ಇಲ್ಲಿನ ಜನಸಂಖ್ಯೆಗನುಗುಣವಾಗಿ ವಾಹನ, ವಾಣಿಜ್ಯ ವಹಿವಾಟು, ಸರಕು ಸಾಗಣೆ ಪ್ರಮಾಣವೂ ಹೆಚ್ಚಾಗುತ್ತಿರುವುದರಿಂದ ಇಲ್ಲಿನ ವಾಹನ ದಟ್ಟಣೆ ತಪ್ಪಿಸಲು ಮತ್ತೊಂದು ರಿಂಗ್ ರಸ್ತೆಯ ಅಗತ್ಯವಿರುವ ಕಾರಣ ಮುಡಾ ಈ ಬೃಹತ್ ಯೋಜನೆಗೆ ತಯಾರಿ ನಡೆಸುತ್ತಿದೆ.

ಮಹಿಳಾಪರ ಹೋರಾಟಗಾರರಿಗೆ ಸ್ಫೂರ್ತಿಯ ಸೆಲೆ ವಿಜಯಾದಬ್ಬೆ

- ಡಾ.ಟಿ.ಎಸ್.ನಾಗರತ್ನ ಅಭಿಮತ
- ಹಿರಿಯ ಸಂಶೋಧಕಿ, ಲೇಖಕಿ ಬಿ.ಎಂ.ರೋಹಿಣಿರಿಗೆ ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ

ಮೈಸೂರು, ಜೂ.1(ಎಂಟಿವೈ)– ಜಾತಿ, ಧರ್ಮ, ಮತ, ಲಿಂಗ ಭೇದ ಮಾಡದೆ ಇನ್ನೊಬ್ಬರ ಒಳಿತಿಗಾಗಿಯೇ ಜೀವಿಸಿ ಸಾಹಿತಿ ಡಾ.ವಿಜಯಾದಬ್ಬೆ ಹಲವಾರು ಮಂದಿಗೆ ಸ್ಫೂರ್ತಿಯ ಸೆಲೆಯಾಗಿದ್ದರು ಎಂದು ಹಿರಿಯ ಸಂಶೋಧಕಿ ಡಾ.ಟಿ. ಎಸ್.ನಾಗರತ್ನ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರಲ್ಲಿ ಸಮತಾ ಅಧ್ಯಯನ ಕೇಂದ್ರ ಆಯೋಜಿಸಿದ್ದ ಡಾ.ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಕಾವ್ಯ ಮತ್ತು ಕಥಾಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಾ.ವಿಜಯಾದಬ್ಬೆ ಅವರು ಮಾನವೀಯತೆಯ ಪ್ರತೀಕವಾಗಿದ್ದರು. ಪರರ ಹಿತಕ್ಕಾಗಿ ತುಡಿಯುವ ಮನಸ್ಸು ಅವರದ್ದಾಗಿತ್ತು. ಮಹಿಳಾಪರ ಹೋರಾಟಗಾರರಿಗೆ ಸ್ಫೂರ್ತಿಯ ಸೆಲೆಯಂತಿದ್ದರು. ಹೆಣ್ಣು ಮಕ್ಕಳ ಹಕ್ಕು ಮತ್ತು ಕರ್ತವ್ಯದ ಬಗ್ಗೆ ಅಗಾಧವಾಗಿ ತಿಳಿದುಕೊಂಡಿದ್ದರು. ಮನೆಯಲ್ಲಿ ಹಿರಿಯ ಮಗ ಜವಾಬ್ದಾರಿ ವಹಿಸಿಕೊಂಡು ಹೇಗೆ ಕೆಲಸ ಮಾಡುತ್ತಾನೋ ಹಾಗೆ ಮನೆಯ ಜವಾಬ್ದಾರಿಯನ್ನೆಲ್ಲಾ ವಿಜಯಾದಬ್ಬೆ ವಹಿಸಿಕೊಂಡಿದ್ದರು. ನಡೆ ಮತ್ತು ನುಡಿಯನ್ನು ಒಂದಾಗಿಸಿಕೊಂಡು ಬದುಕಿದ ಅವರಲ್ಲಿ ಮಾತು ಕಡಿಮೆ ಸೂಕ್ಷ್ಮಗ್ರಹಿಕೆ ಹೆಚ್ಚಾಗಿತ್ತು. ಎಲ್ಲವನ್ನು ಅಳೆದು ತೂಗಿ ಲೆಕ್ಕಚಾರ ಮಾಡಿ ಮಾತನಾಡುತ್ತಿದ್ದರು. ಅವರ ವಿಚಾರಗಳು ತೀಕ್ಷ್ಣವಾಗಿರುತ್ತಿದ್ದವು. ಸಮಾಜದ ಶೋಷಿತ ಮಹಿಳೆಯ ಪರ ನಿಂತು ಕೆಲಸ ಮಾಡುತ್ತಿದ್ದರು ಎಂದರು.

ಡಾ.ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹಿರಿಯ ಸಂಶೋಧಕಿ, ಲೇಖಕಿ ಬಿ.ಎಂ.ರೋಹಿಣಿ, ವಿಜಯಾದಬ್ಬೆ ಅವರು ಮುಕ್ತ ವಿವಿಯಲ್ಲಿ ನನಗೆ ಗುರುವಾಗಿದ್ದರು. ಅವರು ಪಾಠ ಮಾಡುವ ಶೈಲಿ, ನಡೆ, ನುಡಿ, ನಡಿಗೆ, ಸರಳತೆ ಎಲ್ಲವನ್ನು ಕಂಡು ನಾವು ಮಾರುಹೋಗಿದ್ದೆವು. ಅವರು ನಮ್ಮ ಮೇಲೆ ಪ್ರಭಾವ ಬೀರಿ ನಮಗೆಲ್ಲರಿಗೂ ರೋಲ್ ಮಾಡೆಲ್ ಆಗಿದ್ದರು ಎಂದರು.

ಸ್ತ್ರೀವಾದ ಹೆಚ್ಚು ಪ್ರಚಲಿತವಿದ್ದ ಆ ಕಾಲದಲ್ಲಿ ಸ್ತ್ರೀವಾದದ ಬಗ್ಗೆ ಮಾತನಾಡಿದರೆ ಪುರುಷರು ಉರಿದು ಬೀಳುತ್ತಿದ್ದರು. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ವಾದ ಸರಿಯಲ್ಲ ಎಂದು ಬಹಳ ಸೂಕ್ಷ್ಮವಾಗಿ ವಿಜಯಾದಬ್ಬೆ ವಿವರಿಸಿದ್ದರು ಎಂದು ತಿಳಿಸಿದರು.

> ಸಮತಾ ಅಧ್ಯಯನ ಕೇಂದ್ರ ಸ್ಥಾಪನೆಗೆ ವಿಜಯಾದಬ್ಬೆ ಅವರು ಕಾರಣ. ಅವರು ಹಿಂಜರಿಕೆಯ ಸ್ವಭಾವದ ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುತ್ತಿದ್ದರು. ಎಲ್ಲ ಮಹಿಳಾ ಸಂಶೋಧನಾ ವಿದ್ಯಾರ್ಥಿಗಳ ಜೊತೆಗೆ ಚರ್ಚಿಸಿ, ವಿವಿಧ ವಿಷಯಗಳನ್ನು ನೀಡಿ ಚರ್ಚೆ, ಪ್ರಬಂಧಗಳನ್ನು ಮಂಡಿಸಲು ಹೇಳುತ್ತಿದ್ದರು. ಇದು ಅಂದಿನ ಹೆಣ್ಣು ಮಕ್ಕಳಲ್ಲಿ ಇದ್ದ ಹಿಂಜರಿಕೆಯನ್ನು ದೂರ ಮಾಡಿತು. ಹುಡುಗಿಯರು ಕವಿತೆಗಳನ್ನು, ಪ್ರಬಂಧಗಳನ್ನು ಬರೆಯಲು, ಧೈರ್ಯವಾಗಿ ವ್ಯಕ್ತಪಡಿಸಲು ಪ್ರೇರೇಪಿಸಿದರು. ಅವರೆಲ್ಲರೂ ಬೇರೆ ಬೇರೆ ವೃತ್ತಿಗೆ ಹೋಗಿ ಹೆಸರು ಮಾಡಿದ್ದಾರೆ. ಇದಕ್ಕೆಲ್ಲ ವಿಜಯಾದಬ್ಬೆ ಅವರೇ ಪ್ರೇರಣೆ. – ಡಾ.ಟಿ.ಎಸ್.ನಾಗರತ್ನ, ಹಿರಿಯ ಸಂಶೋಧಕಿ

ಬಹುಮಾನ ವಿತರಣೆ: ಸಮತಾ ಅಧ್ಯಯನ ಕೇಂದ್ರದ ವತಿಯಿಂದ ನೀಡುವ ಡಾ.ವಿಜಯಾದಬ್ಬೆ ಸಾಹಿತ್ಯ ಪ್ರಶಸ್ತಿಯನ್ನು ಹಿರಿಯ ಸಂಶೋಧಕಿ, ಲೇಖಕಕಿ ಬಿ.ಎಂ. ರೋಹಿಣಿ ಅವರಿಗೆ ನೀಡಿ ಗೌರವಿಸಲಾಯಿತು.

ಕವನ ವಿಭಾಗದ ಸ್ಪರ್ಧೆಯಲ್ಲಿ ವಿಜೇತರಾದ ಬೆಂಗಳೂರು ವಿಜಯಾ ಟೀಚರ್ಸ್ ಕಾಲೇಜು ವಿದ್ಯಾರ್ಥಿ ಎಂ.ಸಿ.ಜಗದೀಶ್ (ಪ್ರಥಮ), ಕೇರಳ ಕೇಂದ್ರಿಯ ವಿವಿ ಕಾಸರಗೋಡು ವಿದ್ಯಾರ್ಥಿನಿ ಕೆ.ಸ್ವಾತಿ (ದ್ವಿತಿಯ), ಸಾಗರ ತಾಲೂಕು ಹೊಸಕೊಪ್ಪದ ವಿದ್ಯಾರ್ಥಿ ಎಚ್.ಜಿ.ಅಭಿನಂದನ್ (ತೃತೀಯ) ಹಾಗೂ ಕಥಾ ವಿಭಾಗದ ಸ್ಪರ್ಧೆಯಲ್ಲಿ ವಿಜೇತರಾದ ಉಜಿರೆ ಎಚ್‌ಡಿಎಂ ಕಾಲೇಜು ವಿದ್ಯಾರ್ಥಿ ಬಿ.ಎಂ. ಸಂಜಯ್ (ಪ್ರಥಮ), ಸಕಲೇಶಪುರ ಜೆಎಸ್‌ಎಸ್ ಮಹಾವಿದ್ಯಾಲಯದ ವಿದ್ಯಾರ್ಥಿ ಶಿವಶಂಕರ ಕಡದಿನ್ನಿ (ದ್ವಿತಿಯ), ಕೇರಳ ಕೇಂದ್ರಿಯ ವಿವಿ ಕಾಸರಗೋಡು ವಿದ್ಯಾರ್ಥಿನಿ ಆರ್.ನವ್ಯಾ (ತೃತೀಯ) ಬಹುಮಾನ ನೀಡಿ ಗೌರವಿಸಲಾಯಿತು. ಕವನ ವಿಭಾಗದಲ್ಲಿ 10, ಕಥಾ ವಿಭಾಗದಲ್ಲಿ 6 ಸ್ಪರ್ಧಿಗಳಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ಮಹಿಳಾ ಕುಸ್ತಿಪಟುಗಳ ಹೋರಾಟಕ್ಕೆ ಬೆಂಬಲ: ಕಾರ್ಯಕ್ರಮದ ಆರಂಭದಲ್ಲಿ ಇತ್ತೀಚಿಗಷ್ಟೆ ನಿಧನರಾದ ವಿಮರ್ಶಕ ಜಿ.ಹೆಚ್. ನಾಯಕ್ ಅವರಿಗೆ ಸಂತಾಪ ಸೂಚಿಸಲಾಯಿತು. ಲೈಂಗಿಕ ದೌರ್ಜನ್ಯದ ವಿರುದ್ಧ ಹೋರಾಟ ಮಾಡುತ್ತಿರುವ ಮಹಿಳಾ ಕುಸ್ತಿಪಟುಗಳಿಗೆ ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಕೈ ಮೇಲೆತ್ತುವ ಮೂಲಕ ನೈತಿಕ ಬೆಂಬಲವನ್ನು ಘೋಷಿಸಲಾಯಿತು.

ಕಾರ್ಯಕ್ರಮದಲ್ಲಿ ಸಮತಾ ಅಧ್ಯಯನ ಕೇಂದ್ರದ ಮಾಜಿ ಅಧ್ಯಕ್ಷ ಎಂ.ಎಸ್. ಸುಮನ, ಸ್ತ್ರೀವಾದಿ ಚಿಂತಕರಾದ ಡಾ.ಎನ್.ಗಾಯತ್ರಿ, ಕೇಂದ್ರದ ಅಧ್ಯಕ್ಷೆ ಡಾ.ಸಬಿಹಾ ಭೂಮಿಗೌಡ, ಉಪಾಧ್ಯಕ್ಷ ಬಿ.ಸಿ.ಮಂಜುಳ, ಕಾರ್ಯದರ್ಶಿ ಡಾ.ಆರ್.ಸುನಂದಮ್ಮ, ಸಹಕಾರ್ಯದರ್ಶಿ ಪಿ.ಓಂಕಾರ್ ಖಜಾಂಚಿ ವಿಜಯಾರಾವ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹಾಲು ಉತ್ಪಾದನೆಯಲ್ಲಿ ಕರ್ನಾಟಕಕ್ಕೆ 2ನೇ ಸ್ಥಾನ

ವಿಶ್ವ ಹಾಲು ದಿನಾಚರಣೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ



ಹುಣಸೂರು, ಜೂ.1– ಹೈನುಗಾರಿಕೆ ಪಿತಾಮಹ ಡಾ.ಕುರಿಯನ್ ಅವರ ಕ್ಷೀರ ಕ್ರಾಂತಿ ಪರಿಣಾಮ ಹಾಲು ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲೇ ಪ್ರಥಮ ಸ್ಥಾನದಲ್ಲಿದೆ. ದೇಶದಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ. ಹಾಲು ಉತ್ಪಾದನೆಯಲ್ಲಿ ಮೈಸೂರು ಜಿಲ್ಲೆಯೂ ಉತ್ತಮ ಸಾಧನೆ ಮಾಡಿದೆ ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ತಿಳಿಸಿದರು.

ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮೈಮುಲ್ ವತಿಯಿಂದ ಆಯೋಜಿಸಿದ್ದ ವಿಶ್ವ ಹಾಲು ದಿನಾಚರಣೆಯಲ್ಲಿ ಮಾತನಾಡಿದ ಅವರು, ಹುಣಸೂರು ತಾಲೂಕಿನಲ್ಲಿ 206 ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ. ಮೈಮುಲ್‌ನಲ್ಲಿ ದಿನವೊಂದಕ್ಕೆ 8.20 ಲಕ್ಷ ಲೀ. ಹಾಲು ಶೇಖರಣೆಯಾಗುತ್ತಿದ್ದು, ಇದರಲ್ಲಿ 2.98 ಲಕ್ಷ ಲೀ. ಹಾಲು ಮಾರಾಟವಾಗುತ್ತಿದ್ದು, ಹಾಲಿನ ಪುಡಿಗಾಗಿ 2.18 ಲಕ್ಷ ಲೀ., ಹೊರರಾಜ್ಯ, ಜಿಲ್ಲೆಗಳಿಗೆ 1.95 ಲಕ್ಷ ಲೀ. ಸರಬರಾಜಾಗುತ್ತಿದ್ದು, ಮೊಸರು ಮತ್ತು ಇತರೆ ಹಾಲಿನ ಉತ್ಪನ್ನಗಳಿಗಾಗಿ 1.10 ಲಕ್ಷ ಲೀ. ಹಾಲನ್ನು ಬಳಕೆ ಮಾಡಲಾಗುತ್ತಿದೆ ಎಂದರು.

ಹಾಲು ಉತ್ಪಾದಕರಿಗೆ ಲೀಟರ್ ಹಾಲಿಗೆ ಮೈಮುಲ್‌ನಿಂದ 33 ರೂ. ಹಾಗೂ 5 ರೂ. ಸಹಾಯಧನ ನೀಡಲಾಗುತ್ತಿದೆ. ತಾಲೂಕಿನಲ್ಲಿ ಕೆ.ಎಸ್.ಕುಮಾರ್ ನಿರ್ದೇಶಕರಾಗುವ ಮೊದಲು ಕೇವಲ 46 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದವು. ಇದೀಗ 206 ಸಂಘಗಳನ್ನು ಸ್ಥಾಪಿಸುವ ಮೂಲಕ ಅವರು ಬಹುದೊಡ್ಡ ಸಾಧನೆ ಮಾಡಿದ್ದಾರೆ. ಹೈನುಗಾರಿಕೆಯಿಂದ ರೈತಾಪಿ ಕುಟುಂಬದ ಸಾಕಷ್ಟು ಸಮಸ್ಯೆಗಳು ಬಗೆಹರಿಸುತ್ತಿವೆ ಎಂದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಜಾಗತಿಕ ಆಹಾರವಾಗಿರುವ ಹಾಲಿನ ಮಹತ್ವವನ್ನು ವಿಶ್ವಕ್ಕೆ ತಿಳಿಸಲು ಹಾಗೂ ಅದರ ಬಗ್ಗೆ ಅರಿವು ಮೂಡಿಸಲು ವಿಶ್ವಸಂಸ್ಥೆ ಆಹಾರ ಮತ್ತು ಕೃಷಿ ಸಂಸ್ಥೆ 2001ರ ಜೂ.1ರಂದು ವಿಶ್ವ ಹಾಲು ದಿನವನ್ನಾಗಿ ಆಚರಿಸಲು ಪ್ರಾರಂಭಿಸಿತು. ಅಂದಿನಿಂದ ಪ್ರತಿ ವರ್ಷ ವಿಶ್ವ ಹಾಲು ದಿನವನ್ನು ಆಚರಿಸಲಾಗುತ್ತಿದೆ ಎಂದರು.

ವಿಶ್ವ ಹಾಲು ದಿನದಂದು ಹಾಲು, ಹಾಲಿನ ಉತ್ಪನ್ನಗಳಿಂದ ಜನರಿಗಾಗುವ ಪ್ರಯೋಜನದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಹಾಲು ಪೌಷ್ಟಿಕಾಂಶವುಳ್ಳ ಆಹಾರವಾಗಿದ್ದು, ಮಾನವನ ಶಾರೀರಿಕ ಬೆಳವಣಿಗೆಗೆ ಹಾಗೂ ದೈನಂದಿನ ಚಟುವಟಿಕೆಗೆ ಬೇಕಾಗುವ ಎಲ್ಲಾ ರೀತಿಯ ಪೋಷಕಾಂಶಗಳು ಸಿಗಲಿದೆ. ಹೀಗಾಗಿ ಪ್ರತಿಯೊಬ್ಬರೂ ನಿತ್ಯ ಹಾಲನ್ನು ಸೇವಿಸಬೇಕು ಎಂದು ತಿಳಿಸಿದರು.

ಪ್ರಸ್ತುತ ಹೈನುಗಾರಿಕೆ ಒಂದು ದೊಡ್ಡ ಉದ್ಯಮವಾಗಿ ಬೆಳೆದಿದ್ದು, ಪುರುಷರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡರೇ, ಮಹಿಳೆಯರು ಹೆಚ್ಚಾಗಿ ಹೈನುಗಾರಿಕೆ ಕೈಗೊಳ್ಳುವ ಮೂಲಕ ಅದರಿಂದ ದೊರೆಯುವ ಹಣದಲ್ಲಿ ಮಕ್ಕಳ ವಿದ್ಯಾಭ್ಯಾಸ ಹಾಗೂ ಮನೆ ನಿರ್ವಹಣೆ ಮಾಡಿ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸರ್ವೇಶ್ ರಾಜ್ ಅರಸು, ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಕೆಂಪೇಗೌಡ, ವಿಸ್ತರಣಾಧಿಕಾರಿ ಗೌತಮ್, ಸೂಪರ್‌ವೈಸರ್ ಚೇತನ್, ನಗರಸಭೆ ಮಾಜಿ ಸದಸ್ಯ ರವಿಕುಮಾರ್ ಸೇರಿದಂತೆ ಮತ್ತಿತರರಿದ್ದರು. ಕಾರ್ಯಕ್ರಮದಲ್ಲಿದ್ದವರಿಗೆ ನಂದಿನಿ ಹಾಲು ಹಾಗೂ ಲಘು ಉಪಾಹಾರ ನೀಡಲಾಯಿತು.

ಕೋಟೆಯಲ್ಲಿ ವಿಶ್ವ ಹಾಲು ದಿನಾಚರಣೆ



ಹೆಚ್.ಡಿ.ಕೋಟೆ, ಜೂ.1– ವಿಶ್ವಸಂಸ್ಥೆ ಸೂಚನೆ ಮೇರೆಗೆ ಪ್ರತಿವರ್ಷ ಜೂ.1ರಂದು ವಿಶ್ವ ಹಾಲು ದಿನಾಚರಣೆ ಆಚರಿಸಲಾಗುತ್ತಿದೆ ಎಂದು ಮೈಮುಲ್ ನಿರ್ದೇಶಕ ಈರೇಗೌಡ ತಿಳಿಸಿದರು.

ತಾಲೂಕಿನ ಬೋಚಿಕಟ್ಟೆ ಗ್ರಾಮದ ಸಮೀಪವಿರುವ ಚಿತ್ತಧಾಮದಲ್ಲಿ ಆಯೋಜಿಸಿದ್ದ ವಿಶ್ವ ಹಾಲು ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವ ಹಾಲಿನ ದಿನಾಚರಣೆಯಂದು ಹಾಲು, ಹಾಲಿನ ಉತ್ಪನ್ನಗಳ ಸೇವನೆಯಿಂದಾಗುವ ಪ್ರಯೋಜನಗಳ ಬಗ್ಗೆ ಜನರಿಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಭಾರತ ಕೃಷಿ ಪ್ರಧಾನ ದೇಶವಾಗಿದ್ದು, ಹಾಲು ದೇಶದ ಪ್ರಮುಖ ಆಹಾರಗಳಲ್ಲಿ ಒಂದಾಗಿದೆ ಎಂದು ಪರಿಗಣಿಸಿರುವುದರಿಂದ ಈ ದಿನ ಮತ್ತಷ್ಟು ಪ್ರಾಮುಖ್ಯತೆ ಪಡೆದಿದೆ. ಅಲ್ಲದೇ ಹಾಲಿನ ಸೇವನೆಯಿಂದ ಸಾಕಷ್ಟು ಪೌಷ್ಟಿಕಾಂಶ ಪಡೆಯಬಹುದು ಎಂದರು.

ಹೈನುಗಾರಿಕೆ ಪ್ರಸ್ತುತ ಮುಖ್ಯ ಕಸುಬಾಗಿದ್ದು, ದೇಶದ ಜನತೆ ಹೈನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿರುವುದರಿಂದ ಭಾರತ ಹಾಲು ಉತ್ಪಾದನೆಯಲ್ಲಿ ವಿಶ್ವದಲ್ಲೇ ಪ್ರಥಮ ಸ್ಥಾನ ಪಡೆದಿದೆ ಎಂದರು.

ಕೆಎಂಎಫ್‌ನಿಂದ ಪ್ರಸ್ತುತ ಉತ್ಕೃಷ್ಟ ಗುಣಮಟ್ಟದ ಹಾಲು, ಹಾಲಿನ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಹೀಗಾಗಿ ಗ್ರಾಹಕರು ನಂದಿನಿ ಉತ್ಪನ್ನಗಳನ್ನು ಖರೀದಿಸುವ ಮೂಲಕ ಹೈನುಗಾರಿಕೆಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಗೋವಿಗೆ ಪೂಜೆ ಸಲ್ಲಿಸಿ, ಚಿತ್ತಧಾಮದಲ್ಲಿರುವ ಅಂಧರಿಗೆ ಹಾಲು ವಿತರಿಸುವ ಮೂಲಕ ಸಿಹಿ ಹಂಚಿ ವಿಶ್ವ ಹಾಲು ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಪುರಸಭಾ ಸದಸ್ಯರಾದ ಹೆಚ್.ಸಿ. ನರಸಿಂಹಮೂರ್ತಿ, ಪ್ರೇಮ್ ಸಾಗರ್, ಚಿತ್ತಧಾಮ ವ್ಯವಸ್ಥಾಪಕ ಮಹದೇವಸ್ವಾಮಿ, ಮುಖಂಡರಾದ ಬಸವರಾಜಪ್ಪ, ಸೋಮೇಗೌಡ, ಸಣ್ಣ ಸ್ವಾಮಿನಾಯಕ, ವಿಸ್ತರಣಾಧಿಕಾರಿಗಳಾದ ಆಸಿಫ್ ಇಕ್ಬಾಲ್, ಅವಿನಾಶ್, ಜಗದಾಂಬ, ತಾಹಿರಾ, ಪಶು ವೈದ್ಯರಾದ ಮನೋಹರ್, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿಗಳು ಹಾಜರಿದ್ದರು.

ಶಾಸಕ ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಲು ಒತ್ತಾಯ



ತಿ.ನರಸೀಪುರ, ಜೂ.1– ಉಪ್ಪಾರ ಜನಾಂಗದ ಏಕೈಕ ಶಾಸಕ ಸಿ.ಪುಟ್ಟರಂಗಶೆಟ್ಟಿಗೆ ಸಚಿವ ಸ್ಥಾನ ನೀಡಬೇಕು ಎಂದು ಭಗೀರಥ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ರಾಮಶೆಟ್ಟಿ ಒತ್ತಾಯಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾ.ನಗರ ಕ್ಷೇತ್ರದಿಂದ ಸತತ 4 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಪುಟ್ಟರಂಗಶೆಟ್ಟಿ ಅವರಿಗೆ ಡೆಪ್ಯೂಟಿ ಸ್ಪೀಕರ್ ಸ್ಥಾನ ನೀಡಿರುವುದು ಸರಿಯಲ್ಲ. ಈ ಬಾರಿಯ ಚುನಾವಣೆಯಲ್ಲಿ ರಾಜ್ಯದಲ್ಲಿ 40 ಲಕ್ಷ ಜನಸಂಖ್ಯೆ ಹೊಂದಿರುವ ನಮ್ಮ ಸಮಾಜ ಕಾಂಗ್ರೆಸ್ ಪಕ್ಷ ಬೆಂಬಲಿಸಿದೆ. ನಮ್ಮ ಸಮುದಾಯದ ಪುಟ್ಟರಂಗಶೆಟ್ಟರು ಮಂತ್ರಿಯಾಗುತ್ತಾರೆಂಬ ಉದ್ದೇಶದೊಂದಿಗೆ ಕಾಂಗ್ರೆಸ್ ಬೆಂಬಲಿಸುವ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ಈಗ ಅವರಿಗೆ ಸಚಿವ ಸ್ಥಾನ ನೀಡಲಾಗಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪ ಸಭಾಪತಿ ಹುದ್ದೆ ಹಿಂಪಡೆದು ಪ್ರಭಾವಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಎಪಿಎಂಸಿ ಮಾಜಿ ಸದಸ್ಯ ಮರಿಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಮೊದಲಿನಿಂದಲೂ ಉಪ್ಪಾರ ಸಮಾಜ ಕಾಂಗ್ರೆಸ್ ಬೆಂಬಲಿಸುತ್ತಾ ಬಂದಿದೆ. ನಮ್ಮ ಸಮಾಜದ ಪ್ರಭಾವಿ ನಾಯಕರಾಗಿರುವ ಪುಟ್ಟರಂಗಶೆಟ್ಟರು ಕಾಂಗ್ರೆಸ್‌ನಿಂದ 4 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ನಮ್ಮ ಸಮಾಜದ ಏಕೈಕ ನಾಯಕರಾಗಿರುವ ಅವರು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿತರಾಗಿದ್ದ ವಿ.ಸೋಮಣ್ಣ ಅವರನ್ನು ಸೋಲಿಸಿದ್ದಾರೆ. ಅಲ್ಲದೇ ಪಕ್ಷನಿಷ್ಠೆ ತೋರಿದ್ದಾರೆ. ಅವರಿಗೆ ಸಚಿವ ಸ್ಥಾನ ಸಿಗುವ ಭರವಸೆ ಇತ್ತಾದರೂ ಉಪ ಸಭಾಪತಿ ಸ್ಥಾನ ನೀಡಲಾಗಿದೆ. ಅವರಿಗೆ ಸಚಿವ ಸ್ಥಾನ ನೀಡಿ ಸಮಾಜಕ್ಕೆ ನ್ಯಾಯ ದೊರಕಿಸಿಕೊಡಬೇಕಿದೆ ಎಂದು ಮನವಿ ಮಾಡಿದರು.

ಇದೇ ವೇಳೆ ಮುಖಂಡ ಮಹೇಶ್ ಮಾತನಾಡಿದರು. ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಕೊತ್ತೇಗಾಲ ಗ್ರಾಪಂ ಮಾಜಿ ಉಪಾಧ್ಯಕ್ಷ ಮಣಿಕಂಠ ಉಪ್ಪಾರ್, ಪ್ರಭು, ಮಹೇಶ್ ಶೆಟ್ಟಿ ಬಸವರಾಜು, ಮಹೇಶ್ ಹಾಜರಿದ್ದರು.

ಡಾ.ರೇವಣ್ಣರಿಂದ ಜನತೆ ಕಷ್ಟ ಸುಖಗಳಿಗೆ ಸ್ಪಂದನೆ



ತಿ.ನರಸೀಪುರ, ಜೂ.1– ಚುನಾವಣಾ ಪೂರ್ವದಲ್ಲಿ ಡಾ.ರೇವಣ್ಣ ಅವರು ನೀಡಿದ್ದ ಆಶ್ವಾಸನೆಯಂತೆ ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸುವ ಮೂಲಕ ಜನತೆ ಕಷ್ಟ ಸುಖಗಳಿಗೆ ಸ್ಪಂದಿಸಲಿದ್ದಾರೆ ಎಂದು ಗ್ರಾಪಂ ಮಾಜಿ ಸದಸ್ಯ ಕಾರ್ ಮಲ್ಲಪ್ಪ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಬಿಜೆಪಿ ಕಾರ್ಯಕರ್ತರು, ಮುಖಂಡರೊಂದಿಗೆ ಹಣ್ಣು ಹಂಪಲು ವಿತರಿಸಿ ಮಾತನಾಡಿದ ಅವರು, ಡಾ.ರೇವಣ್ಣ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದು, ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನೀಡಿದ ಗ್ಯಾರಂಟಿಗಳಿಂದ ಅವರಿಗೆ ಹಿನ್ನಡೆಯಾಯಿತು. ಮುಂದಿನ ದಿನಗಳಲ್ಲಿ ಡಾ.ರೇವಣ್ಣ ಕ್ಷೇತ್ರದಲ್ಲೇ ವಾಸ್ತವ್ಯ ಹೂಡಿ ಜನಸೇವೆಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎಂದರು.

ಬಿಜೆಪಿ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆಬ್ಬೇಹುಂಡಿ ಶಿವಕುಮಾರ್ ಮಾತನಾಡಿ, ಚುನಾವಣೆಯಲ್ಲಿ ಡಾ. ರೇವಣ್ಣ ಬಿಜೆಪಿ ಪಕ್ಷದಿಂದ ಸ್ಪರ್ಧಿಸಿ ತೀವ್ರ ಸ್ಪರ್ಧೆ ಒಡ್ಡಿದ್ದರು. ಅವರ ಸ್ಪರ್ಧೆಯಿಂದ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿತ್ತು. ದುರದೃಷ್ಟವಶಾತ್ ಸೋಲುಂಟಾಯಿತು. ಭವಿಷ್ಯದಲ್ಲಿ ಡಾ.ರೇವಣ್ಣ ಕ್ಷೇತ್ರದ ಶಾಸಕರಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದರು.

ಈ ವೇಳೆ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಜಗನ್ನಾಥ್, ತಾಪಂ ಮಾಜಿ ಸದಸ್ಯ ಬಸವರಾಜು, ಮೂಗೂರು ಜಯಣ್ಣ, ಪೂಜಿತ್ ಮೆಡಿಕಲ್ ಕುಮಾರ್, ಶಶಿ, ಎಸ್‌ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಚೌಹಳ್ಳಿ ಸಿದ್ದರಾಜು, ಶಿವಕುಮಾರ್, ಸತ್ಯ, ಕಿರಗಸೂರು ಮಹದೇವಸ್ವಾಮಿ ಮತ್ತಿತರಿದ್ದರು.

ಹಾಲಿನ ಉದ್ಯಮ ಲಕ್ಷಾಂತರ ಜನರ ಜೀವನಕ್ಕೆ ದಾರಿ: ಪ್ರಸನ್ನ



ಪಿರಿಯಾಪಟ್ಟಣ, ಜೂ.1– ಹಾಲಿನ ಉದ್ಯಮ ಲಕ್ಷಾಂತರ ಜನರ ಜೀವನಕ್ಕೆ ದಾರಿಯಾಗಿದೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಎಂದರು.

ಮೈಮುಲ್ ವತಿಯಿಂದ ಪಟ್ಟಣದ ಚೈತನ್ಯ ಚಾರಿಟಬಲ್ ಟ್ರಸ್ಟ್‌ನ ಬಾಲಕಿಯರ ಮಂದಿರದಲ್ಲಿ ಆಯೋಜಿಸಿದ್ದ ವಿಶ್ವ ಹಾಲು ದಿನಾಚರಣೆಯಲ್ಲಿ ಮಾತನಾಡಿದ ಅವರು, ನಾವು ಚಿಕ್ಕವರಿಂದ ದೊಡ್ಡವರಾಗುವ ತನಕ ಹಾಲಿನ ಪ್ರಾಮುಖ್ಯತೆ ಬಗ್ಗೆ ನಮ್ಮ ಹಿರಿಯರು ಹೇಳುತ್ತಲೇ ಬಂದಿದ್ದಾರೆ. ಆರೋಗ್ಯಕರ ಜೀವನ, ಆಹಾರ ಪದ್ಧತಿ ಮತ್ತು ಹಾಲಿನ ಉತ್ಪನ್ನಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಭಾರತ ಹಾಲು ಉತ್ಪಾದಿಸುವ ವಿಶ್ವದ ಅತಿದೊಡ್ಡ ದೇಶ ಎಂದರು.

ವಿಶ್ವ ಹಾಲು ದಿನ ಜನರಿಗೆ ಹಾಲಿನ ಬಗ್ಗೆ ತಿಳಿಸಲು ಸಹಕಾರಿಯಾಗಿದೆ. ಜೀವಸತ್ವಗಳು ಹಾಗೂ ಕ್ಯಾಲ್ಸಿಯಂನ ಸಮೃದ್ಧ ಮೂಲವಾದ ಹಾಲು, ಇತರ ಡೈರಿ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಪ್ರತಿ ವರ್ಷ ವಿಶ್ವ ಹಾಲು ದಿನ ಆಚರಿಸಲಾಗುತ್ತದೆ. ಹಾಲಿನ ಪೌಷ್ಟಿಕಾಂಶದ ಮೌಲ್ಯ, ಅದರ ಉತ್ಪನ್ನಗಳ ಬಗ್ಗೆ ಮತ್ತು ಆರ್ಥಿಕ ಪ್ರಾಮುಖ್ಯತೆ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು ಈ ದಿನದ ಮಹತ್ವವಾಗಿದೆ.

ಈ ಸಂದರ್ಭ ಮೈಮುಲ್ ನಿರ್ದೇಶಕ ಹೆಚ್.ಡಿ.ರಾಜೇಂದ್ರ, ಚೈತನ್ಯ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥ ಸಿಸ್ಟರ್ ಆಲ್ಫೋನಾ, ಸಿಸ್ಟರ್ ಲೈಸಾ, ಸಿಸ್ಟರ್ ಆಲಿಸಾ, ಮೈಮುಲ್‌ನ ನಿಶ್ಚಿತ್, ಜೈನ್, ಶ್ರೀಕಾಂತ್, ಡಾ.ಸತೀಶ್, ಮುಖಂಡರಾದ ಅಪೂರ್ವ, ಮೋಹನ್, ಸುರೇಶ್ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮುತ್ತಿಗೆಹುಂಡಿಯಲ್ಲಿ ಆನೆಕಾಲು ರೋಗದ ಬಗ್ಗೆ ಅರಿವು



ಸರಗೂರು, ಜೂ.1– ಆನೆಕಾಲು ಪರಾವಲಂಬಿ ರೋಗವಾಗಿದೆ. ರಾತ್ರಿ ರಕ್ತಲೇಪನ ಸಂಗ್ರಹದ ಮೂಲಕ ಈ ರೋಗಕ್ಕೆ ಚಿಕಿತ್ಸೆ ನೀಡಲು ಸಹಕಾರಿಯಾಗಲಿದೆ ಎಂದು ಬಡಗಲಪುರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಅಲೀಮ್ ಪಾಷಾ ತಿಳಿಸಿದರು.

ತಾಲೂಕಿನ ಬಡಗಲಪುರ ವ್ಯಾಪ್ತಿಯ ಮುತ್ತಿಗೆಹುಂಡಿ ಮತ್ತು ಮುತ್ತಿಗೆಹುಂಡಿ ಹಾಡಿಯಲ್ಲಿ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಮೈಕ್ರೋ ಫೈಲೇರಿಯಾ (ಆನೆಕಾಲು ರೋಗ) ನಿಯಂತ್ರಣ ಕಾರ್ಯಕ್ರಮದಲ್ಲಿ ರಾತ್ರಿ ರಕ್ತಲೇಪನ ಸಂಗ್ರಹ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಸಹಕಾರ ಮತ್ತು ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್ ನಿರ್ದೇಶನದಂತೆ ಎಲ್ಲಾ ಗ್ರಾಮಗಳಲ್ಲೂ ಈ ಕಾರ್ಯಕ್ರಮ ನಡೆಯುತ್ತಿದ್ದು, ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರ ಆನೆಕಾಲು ರೋಗ ಮುಕ್ತ ಗ್ರಾಮ ಮಾಡಲು ಶ್ರಮಿಸುತ್ತಿದೆ. ಆನೆಕಾಲು ರೋಗ ಮುಕ್ತ ಮಾಡಲು ಗ್ರಾಮೀಣ ಜನರು ಸಹಕರಿಸಬೇಕು ಎಂದರು.

ಇದೇ ವೇಳೆ 5 ತಂಡಗಳನ್ನು ರಚನೆ ಮಾಡಿ 355 ರಕ್ತಲೇಪನಗಳನ್ನು ತೆರೆಯಲಾಯಿತು. ಇದೇ ವೇಳೆ ಆನೆಕಾಲು ರೋಗದ ಬಗ್ಗೆ ಜನರಿಗೆ ಅರಿವು ಮೂಡಿಸಲಾಯಿತು. ಈ ವೇಳೆ ಮುತ್ತಿಗೆಹುಂಡಿ ಸಂಚಾರಿ ಗಿರಿಜನ ಆರೋಗ್ಯ ಘಟಕದ ವೈದ್ಯಾಧಿಕಾರಿ ಡಾ.ಹೆಚ್.ಸಿ.ರಾಘವೇಂದ್ರ, ಗ್ರಾಮದ ಯಜಮಾನ ಮಹದೇವಪ್ಪ, ಗ್ರಾಪಂ ಸದಸ್ಯ ಪ್ರಕಾಶ್ ಚಂದ್ರ, ಭವಾನೀಶ್, ಮುಖಂಡರಾದ ರಾಜಪ್ಪ, ಚಂದ್ರಶೇಖರ್, ಮಹದೇವಸ್ವಾಮಿ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ಹಾಗೂ ಗ್ರಾಮಸ್ಥರಿದ್ದರು.

ರೈತರ ಬದುಕಿನ ಬಹುದೊಡ್ಡ ಆಸ್ತಿ ಹೈನುಗಾರಿಕೆ

ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಅಭಿಪ್ರಾಯ



ತಿ.ನರಸೀಪುರ, ಜೂ.1– ರೈತರ ಬದುಕಿನ ಬಹುದೊಡ್ಡ ಆಸ್ತಿ ಹೈನುಗಾರಿಕೆ ಎಂದು ಮೈಮುಲ್ ನಿರ್ದೇಶಕ ಆರ್. ಚೆಲುವರಾಜು ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ ವತಿಯಿಂದ ಪಟ್ಟಣದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಆಯೋಜಿಸಿದ್ದ ವಿಶ್ವ ಹಾಲು ದಿನಾಚರಣೆಯ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಹೈನುಗಾರಿಕೆ ಇಂದು ಗ್ರಾಮೀಣ ರೈತರ ಬದುಕಿನಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದ್ದು, ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗಿದೆ. ನಾವಿಂದು ಹಾಲು ಬಳಸದ ಜಾಗ ಕಾಣಲು ಸಾಧ್ಯವಿಲ್ಲ. ರೋಗಿಗಳು, ವಯೋವೃದ್ಧರು ಸೇರಿದಂತೆ ಮಕ್ಕಳ ಆರೋಗ್ಯಕ್ಕೆ ಹಾಲು ಬಹು ಮುಖ್ಯವಾಗಿ ಬೇಕಾಗಿದ್ದು, ಹಾಲನ್ನು ಅಮೃತ ಎಂದರೂ ತಪ್ಪಾಗಲಾರದು ಎಂದರು.

ಜಿಲ್ಲೆಯ 2 ಲಕ್ಷಮಂದಿ ಹೈನುಗಾರಿಕೆಯಿಂದ ಪರೋಕ್ಷವಾಗಿ ಉದ್ಯೋಗ ಪಡೆದು ಜೀವನ ನಡೆಸುತ್ತಿದ್ದಾರೆ. ಲಕ್ಷಾಂತರ ರೈತರು ಬದುಕು ಕಟ್ಟಿಕೊಂಡು ಆರ್ಥಿಕವಾಗಿ ಮುಂದುವರೆದಿದ್ದಾರೆ. ಡೈರಿ ಕಾರ್ಯದರ್ಶಿಗಳು, ಅಧ್ಯಕ್ಷರು ಹಾಗೂ ಒಕ್ಕೂಟದ ಅಧಿಕಾರಿಗಳು ಹಾಲಿನಷ್ಟೇ ಪರಿಶುದ್ಧವಾಗಿ ರೈತರ ಕೆಲಸ ಮಾಡುವಂತಾಗಬೇಕು ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಮಾತನಾಡಿ, ಹಾಲು ಉತ್ಪಾದನೆಯಲ್ಲಿ ನಾವು ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದ್ದೇವೆ. ಹಾಲು ಉತ್ಪಾದನೆಗೆ ದೇಶದೆಲ್ಲೆಡೆ ಬೇಡಿಕೆ ಇದೆ. ಕೊರೊನಾ ವೇಳೆ ಮಾರುಕಟ್ಟೆ ಹಾಳಾಗುತ್ತದೆ ಎಂದುಕೊಂಡಿದ್ದೇವು. ಆದರೂ ನಾವು ಲಾಭದಲಿದ್ದೇವು. ರೈತರು ನೀಡುವ ಹಾಲಿಗೆ ಒಕ್ಕೂಟದಿಂದ ಸರ್ಕಾರ ಸಹಯೋಗದಲ್ಲಿ ಪ್ರತಿ ಲೀ.ಗೆ 38 ರೂ. ಕೊಡಲಾಗುತ್ತಿದೆ ಎಂದರು.

> ರಾಜ್ಯ ಹೆಚ್ಚು ಹಾಲು ಉತ್ಪಾದಿಸುವ ಮೂಲಕ ಹಾಲಿನ ಕ್ರಾಂತಿ ಮಾಡಿದೆ. ಹಾಲು ಪೌಷ್ಟಿಕಾಂಶವುಳ್ಳ ಆಹಾರವಾಗಿದ್ದು, ಅದರಲ್ಲಿ ಎಲ್ಲಾ ವಿಧವಾದ ಪೋಷಕಾಂಶಗಳು, ಖನಿಜಾಂಶಗಳು ಹಾಗೂ ಜೀವಸತ್ವಗಳಿರುತ್ತವೆ. ಪ್ರತಿಯೊಬ್ಬರು ನಿತ್ಯ 300 ಗ್ರಾಂ ಹಾಲು ಸೇವಿಸುವ ಮೂಲಕ ಆರೋಗ್ಯವಂತರಾಗಬೇಕು.
>
> –ಡಾ.ಜಗನ್ನಾಥ್, ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ.

ಇದೇ ವೇಳೆ ವಿಶ್ವ ಹಾಲು ದಿನದ ಅಂಗವಾಗಿ ಆಸ್ಪತ್ರೆ ರೋಗಿಗಳಿಗೆ ಬಾದಾಮಿ ಹಾಲು ಮತ್ತು ಪೇಡ ವಿತರಿಸಲಾಯಿತು. ಮಾಜಿ ನಿರ್ದೇಶಕ ಕೇತುಪುರ ಪ್ರಭಾಕರ್, ಮಾರ್ಗ ವಿಸ್ತರಣಾಧಿಕಾರಿ ಪ್ರಮೋದ್, ಎನ್.ದಿವ್ಯಶ್ರೀ, ಸಿ.ಅನಿತಾ, ಕೆ.ಎನ್.ಶೃತಿ, ಎಸ್.ವೀಣಾ, ಮೈಮುಲ್ ನೌಕರರ ಸಂಘದ ಅಧ್ಯಕ್ಷ ಕುಳ್ಳೇಗೌಡ, ಡೈರಿ ಕಾರ್ಯದರ್ಶಿಗಳಾದ ಅಂದಾನಿಗೌಡ, ಮಾದಪ್ಪ, ರಾಜು, ನಿಂಗರಾಜು, ರೇವಣ್ಣ ನಿಂಗಯ್ಯ, ನಂಜುಂಡಸ್ವಾಮಿ, ಮಹೇಶ್ ಮತ್ತಿತರರಿದ್ದರು.

ಮೈಸೂರು ಬೇಸಿಗೆ ಕಾಲದ ರೇಸುಗಳು

2ನೇ ದಿನ, ಶುಕ್ರವಾರ 2-6-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಮಳವಳ್ಳಿ ಪ್ಲೇಟ್ ಡಿII– 1200 ಮೀ. ರೇಟೆಡ್ 00 ರಿಂದ 25.	ಮ.2.00ಕ್ಕೆ
1. ಕಂಟ್ರೆಸ್ ಪ್ಲೇಮ್ 2. ಸ್ಟಾರ್ ಸ್ಟೆಕ್ 3. ಪವರ್ ಪೋರ್ಟ್	
II. ಮಳವಳ್ಳಿ ಪ್ಲೇಟ್ ಡಿI –1200 ಮೀ. ರೇಟೆಡ್ 00 ರಿಂದ 25.	ಮ.2.30ಕ್ಕೆ
1. ಓರಿಯಂಟಲ್ ಲಿಲ್ಲಿ 2. ಲೀಡ್ ಸಿಂಗರ್ 3. ಲಕ್ಕಿಸನ್	
III. ಕೊಳ್ಳೇಗಾಲ ಪ್ಲೇಟ್– 1200 ಮೀ. 3 ವರ್ಷದ (ಟರ್ಮ್ಸ್).	ಮ.3.00ಕ್ಕೆ
1 ಮಿಸ್ಟಿಕ್ ಬಾಂಡ್ 2. ಸನ್‌ಫ್ಲೆರ್ 3 ಜನೆರಿಯೊ	
IV. ಅರಕಲಗೂಡು ಪ್ಲೇಟ್– 1600 ಮೀ. ರೇಟೆಡ್ 20 ರಿಂದ 45.	ಮ.3.30ಕ್ಕೆ
1. ಕೊಯೆಟೆ ಗರ್ಲ್ 2. ಸನ್‌ಲೈಟ್ ಸ್ಪಾರ್ವ್ 3. ಫೆರಿಟ್ಟಿ	
V. ಡಾ. ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ.	ಮ.4.00ಕ್ಕೆ
1. ಎಲ್‌ಸ್ಯೂ ಗರ್ಲ್ 2. ಕಾಂಟ್ರಿಬ್ಯೂಟರ್ 3. ಮೌಂಟೇನ್ ಲಯನ್	
VI. ಗೋವಾ ಪ್ಲೇಟ್–1600 ಮೀ. ರೇಟೆಡ್ 40 ರಿಂದ 65.	ಸಂ.4.30ಕ್ಕೆ
1. ಔರ್ಲಿ 2. ಡಿ ಗೋಲ್ಡ್ ಸ್ಟಾರ್ 3. ಇಂಪೀರಿಯಸ್	
VII. ಬಿಡದಿ ಪ್ಲೇಟ್– 1400 ಮೀ. ರೇಟೆಡ್ 20 ರಿಂದ 45.	ಸಂ.5.00ಕ್ಕೆ
1. ಇಂಡಿಯನ್ ಗ್ಲೋರಿ 2. ಶಿವಾಲಿಕ್ ಧನುಷ್ 3. ಅತುಲ್ಯಾ	

ದಿನದ ಅತ್ಯುತ್ತಮ	: ಇಂಡಿಯನ್ ಗ್ಲೋರಿ
ಡಬ್ಬಲ್	: ಮಿಸ್ಟಿಕ್ ಬಾಂಡ್, ಔರ್ಲಿ
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ



ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಕರ್ನಾಟಕ ಪಬ್ಲಿಕ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಶಿಕ್ಷಕ ಕೃಷ್ಣಮೂರ್ತಿ ಅವರನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ್ ಸನ್ಮಾನಿಸಿ, ಬೀಳ್ಕೊಟ್ಟರು. ಈ ವೇಳೆ ತಾಲೂಕು ಅಕ್ಷರ ದಾಸೋಹ ನಿರ್ದೇಶಕ ಪ್ರಶಾಂತ್, ಶಿಕ್ಷಣ ಸಂಯೋಜಕ ಗಣೇಶ್, ಬಿಆರ್‌ಸಿ ಶಿವರಾಜ್, ಶ್ರೀನಿಧಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ರಾಮಚಂದ್ರ, ಸಿಆರ್‌ಪಿಗಳಾದ ನಾಗೇಶ್, ಮಹೇಂದರ್, ಮುಖ್ಯ ಶಿಕ್ಷಕಿ ಲಿಲ್ಲಿ ಮೇರಿ, ಎಸ್‌ಡಿಎಂಸಿ ಅಧ್ಯಕ್ಷ ಜಲೇಂದ್ರ ಸೇರಿದಂತೆ ಶಿಕ್ಷಕರಿದ್ದರು.

ಸಮಾಜಕ್ಕೆ ಕೊಡುಗೆ ನೀಡಿದರೆ, ಸಮಾಜವೂ ನಮ್ಮನ್ನು ಗೌರವಿಸುತ್ತದೆ: ಶಾಸಕ ಕೆ. ಹರೀಶ್‌ಗೌಡ



ಮೈಸೂರು,ಜೂ.1(ಪಿಎಂ)– ನಾವು ಸಮಾಜಕ್ಕೆ ಕೊಡುಗೆ ನೀಡಿದರೆ, ಸಮಾಜವೂ ನಮ್ಮನ್ನು ಗುರುತಿಸಿ–ಗೌರವಿಸಿ ಪ್ರೋತ್ಸಾಹಿಸುತ್ತದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದ ಬಯಲು ಮಂದಿರದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಕಾರ್ಮಿಕ ದಿನಾಚರಣೆ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ 'ಕಾಯಕಯೋಗಿ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಸಮಾಜಕ್ಕೆ ಕೊಡುಗೆ ನೀಡುವ ಸಾರ್ಥಕ ಜೀವಿಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುತ್ತಿರುವುದು ಸ್ವಾಗತಾರ್ಹ. ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವವರನ್ನು ಇಂದು ಗುರುತಿಸಿ ಗೌರವಿಸುತ್ತಿರುವುದು ಅಭಿನಂದನಾರ್ಹ. ಮೈಸೂರು ಕನ್ನಡ ವೇದಿಕೆ ಪ್ರತಿ ವರ್ಷ ಪ್ರಾಮಾಣಿಕವಾಗಿ ಸಮಾಜದ ಕಾಯಕ ಮಾಡುವವರನ್ನು ಗುರುತಿಸಿ ಉತ್ತೇಜನ ನೀಡುತ್ತಿದೆ. ವೇದಿಕೆಯ ಇಂತಹ ಒಳ್ಳೆಯ ಕಾರ್ಯ ನಿರಂತರವಾಗಿ ಮುಂದುವರೆಯಲಿ ಎಂದು ಹಾರೈಸಿದರು.

ಇದಕ್ಕೂ ಮುನ್ನ ಪೌರಕಾರ್ಮಿಕ ಕುಮಾರ, ಶುಶ್ರೂಷಕಿ ಕೋಮಲಾ, ಕಟ್ಟಡ ಕಾರ್ಮಿಕ ಚೆಲುವರಾಜು, ಬ್ಯೂಟಿಷಿಯನ್ ಮೀನಾಕ್ಷಿ ವಿಜಯ್, ಕೊಳಾಯಿ ಕಾರ್ಮಿಕ ಎಂ.ಎಸ್.ಸುರೇಶ್‌ಕುಮಾರ್, ಚಿಲ್ಲರೆ ಅಂಗಡಿ ವ್ಯಾಪಾರಿ ಜೆಧೋಜಿರಾವ್, ಪತ್ರಕರ್ತ ಕಿಶೋರ್‌ನಾಗ್, ಅಡುಗೆ ಕೆಲಸಗಾರ ಎಸ್.ಮಹೇಶ್ ಕುಮಾರ್, ಟೈಲ್ಸ್ ಕಾರ್ಮಿಕ ನಾಗರಾಜು ಮತ್ತು ಆಟೋ ಚಾಲಕ ನವೀನ್ ಅವರಿಗೆ 'ಕಾಯಕಯೋಗಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಎಪಿಎನ್ ವ್ಯವಸ್ಥಾಪಕ ಪಾಲುದಾರ ಎ.ಪಿ.ನಾಗೇಶ್, ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡ ನಾಲಾಬೀದಿ ರವಿ ಮತ್ತಿತರರು ಹಾಜರಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಾದ (1) ಶ್ರೀಮತಿ ರಾಧ ಕೋಂ. ಪ್ರಭು ಸ್ವಾಮಿ, ಬಿನ್ ಲೇ. ಕೆ.ಆರ್. ಈರಯ್ಯ, ವಾಸ: ನಂಬರ್ 3042, 24ನೇ ಮೇನ್, ವಿಜಯನಗರ 2ನೇ ಹಂತ, ಮೈಸೂರು, (2) ಶ್ರೀಮತಿ ಲಲಿತಾ ಬಿ. ಕೋಂ ಯು.ವಿ. ವೆಂಕಟಸ್ವಾಮಿ, ಬಿನ್ ಲೇ ಕೆ.ಆರ್. ಈರಯ್ಯ, ವಾಸ: 258, 4ನೇ ಹಂತ, 1ನೇ ಫೇಸ್, ವಿಜಯನಗರ, ಮೈಸೂರು, (3) ಶ್ರೀಮತಿ ಮಮತ ವೈ.ಎನ್. ಕೋಂ. ಲೇ. ರಾಜು ಎಂ.ಇ.ಸಿ., ವಾಸ: ನಂಬರ್ 270, ವೆಂಕಟೇಶ್ವರ ನಿಲಯ, 21ನೇ ಅಡ್ಡ ರಸ್ತೆ, ಸಿದ್ದೇಶ್ವರ ನಗರ, ವಿಜಯನಗರ, ಬೆಂಗಳೂರು, (4) ಶ್ರೀಮತಿ ಶೋಭ ಬಿ. ಕೋಂ. ಲೇ ಬಾಲಕೃಷ್ಣ ಎಂ.ಇ, ಇವರ ವಾಸ: ಪರ್ವಿ ಗೋಲ್ಡನ್ ನೆಸ್ಟ್, ನಂಬರ್, 204, ಮಲ್ಲತಹಳ್ಳಿ ಲೇಕ್ ರಸ್ತೆ, ನಾಗರಭಾವಿ, ಬೆಂಗಳೂರು, ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು, ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ಟಿ.ಎನ್. ಪುರ ರಸ್ತೆ, 2ನೇ ಹಂತ, ಇಲ್ಲಿರುವ ಪೂರ್ವ–ಪಶ್ಚಿಮ: 50 ಅಡಿ / 15.240030 ಮೀಟರ್, ಉತ್ತರ–ದಕ್ಷಿಣ: 60 ಅಡಿ / 18.288037 ಮೀಟರ್, ಒಟ್ಟು ವಿಸ್ತೀರ್ಣ: 3000 ಚದರ ಅಡಿ / 278.709 ಚದರ ಮೀಟರ್ ಅಳತೆಯ ಸ್ವತ್ತಿನ ಸಂಖ್ಯೆ: 330 ಮತ್ತು ಇದರಲ್ಲಿ ಕಟ್ಟಿರುವ 600 ಚದರ ಅಡಿ / 55.7418 ಚದರ ಮೀಟರ್ ಅಳತೆಯ ಆರ್.ಸಿ.ಸಿ. ರೆಡ್ ಆಕ್ಸೈಡ್ ನೆಲ ಅಂತಸ್ತು ಕಟ್ಟಡ ಮತ್ತು ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ 329 ; ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 331 ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ನಿವೇಶನ ಸಂಖ್ಯೆ 339.

Sd/- M.N. Prakash Kalappa, KAR-1996-2000,
Advocate & Legal Consultant,
#67/7A, P.R.I. Complex, No. 2 & 3,
1st Floor, New Sayyaji Rao Road, Fort Mohalla, Mysuru-570 004
ಮೈಸೂರು, 01–06–2023 Mob: 9343112535

ಮೀನುಗಾರಿಕೆ ಇಲಾಖೆ, ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ

ಪೊನ್ನಂಪೇಟೆ ತಾಲ್ಲೂಕು

ಸಂಖ್ಯೆ:ಪಂ.ವಾ.ಯೋ/1/2023–24 ದಿನಾಂಕ:31–05–2023

ಟೆಂಡರ್ ಪ್ರಕಟಣೆ

ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ಮೀನುಗಾರರಿಗೆ ಅಗತ್ಯವಿರುವ ಮೀನುಗಾರಿಕೆ ಸಲಕರಣೆಗಳಾದ ನೈಲಾನ್ ಬಲೆಗಳು, ಹರಿಗೋಲು, ಲೈಫ್‌ಜಾಕೇಟ್, ಪ್ಲಾಸ್ಟಿಕ್ ಕ್ರೇಟ್ ಇತ್ಯಾದಿ ಸಾಮಾಗ್ರಿಗಳನ್ನು ಖರೀದಿಸಲು ಅತೀ ಕಡಿಮೆ ದರದಲ್ಲಿ ಸರಬರಾಜು ಮಾಡುವ ತಯಾರಕರು /ಅಧಿಕೃತ ಸರಬರಾಜುದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರಿಟ್ಟ ಮೊತ್ತ ರೂ.ಗಳಲ್ಲಿ	ಇ.ಎಂ.ಡಿ.ಮೊತ್ತ ರೂ.
1	ರೂ.4,50,000–00 (ರೂ. ನಾಲ್ಕು ಲಕ್ಷದ ಐವತ್ತು ಸಾವಿರ ಮಾತ್ರ)	ರೂ.5,000–00 (ರೂ. ಐದು ಸಾವಿರಗಳು ಮಾತ್ರ)

ಟೆಂಡರ್ ಫಾರಂಗಳನ್ನು ಕಛೇರಿಯ ವೇಳೆಯಲ್ಲಿ ದಿ: 31–05–2023ರಿಂದ ಪಡೆಯಬಹುದಾಗಿದೆ.
ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 19–06–2023 ಪೂರ್ವಾಹ್ನ 11.00 ಗಂಟೆಯೊಳಗಾಗಿ
ಟೆಂಡರ್ ತೆರೆಯುವ ದಿನಾಂಕ: 19–06–2023 ಅಪರಾಹ್ನ 1.00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ: ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ, ಪೊನ್ನಂಪೇಟೆ
ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು
ಪೊನ್ನಂಪೇಟೆ

